# www.karunaduexams.com

ಪ್ರಚಲಿತ ವಿದ್ಯಮಾನ ಮತ್ತು ಸಾಮಾನ್ಯ ಜ್ಞಾನ ಕ್ವಿಜ್ -ಡಿಸೆಂಬರ್, 2016

www.karunaduexams.com

1. ಅಖಿಲ ಭಾರತ ಟೆನ್ನಿಸ್ ಒಕ್ಕೂಟದ ಪ್ರಥಮ ಮಹಿಳಾ ಅಧ್ಯಕ್ಷೆಯಾಗಿ ಯಾರು ನೇಮಕಗೊಂಡಿದ್ದಾರೆ?
ಅ) ಪ್ರವೀಣ ಮಹಾಜನ್
ಆ) ಸುಶೀಲಾ ರಮೇಶ್
ಇ) ಸುರಭಿ ಭಟ್ಟಚಾರ್ಯ
ಈ) ಗೀತಾ ಪ್ರಮೋದಿನಿ
ಪ್ರವೀಣ ಮಹಾಜನ್
ಪ್ರವೀಣ ಮಹಾಜನ್ ಅವರು ಅಖಿಲ ಭಾರತ ಟೆನಿಸ್ ಸಂಸ್ಥೆ (ಎಐಟಿಎ)ಗೆ ಅಧ್ಯಕ್ಷೆಯಾಗಿ ನೇಮಕಗೊಂಡಿದ್ದಾರೆ. ಎಐಟಿಎ ಅಧ್ಯಕ್ಷ ಸ್ಥಾನ ಅಲಂಕರಿಸಿದ ಪ್ರಥಮ ಮಹಿಳೆ ಎಂಬ ಹೆಗ್ಗಳಿಕೆಗೆ ಅವರು ಪಾತ್ರರಾಗಿದ್ದಾರೆ. ಕೇಂದ್ರ ಅಬಕಾರಿ ಮತ್ತು ಸುಂಕ ಇಲಾಖೆಯ ಮೊದಲ ಮಹಿಳಾ ಮುಖಸ್ಥ ರಾಗಿ ಕಾರ್ಯನಿರ್ವಹಿಸಿದ್ದರು. ಪ್ರಸ್ತುತ ಅವರು ಜೋಧಪುರದಲ್ಲಿ ಕೇಂದ್ರ ಆಡಳಿತಾತ್ಮಕ ನ್ಯಾಯಮಂಡಳಿಯ (ಸಿಎಟಿ) ಮುಖ್ಯಸ್ಥರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.

2. "ಗಡಿ ಭದ್ರತಾ ಪಡೆ (Border Security Force)" ಸಂಸ್ಥಾಪನ ದಿನವನ್ನು ಯಾವ ದಿನದಂದು ಆಚರಿಸಲಾಗುತ್ತದೆ?
ಅ) ನವೆಂಬರ್ 30
ಆ) ಡಿಸೆಂಬರ್ 1
ಇ) ಡಿಸೆಂಬರ್ 2
ಈ) ಡಿಸೆಂಬರ್ 3
ಡಿಸೆಂಬರ್ 1
ಗಡಿ ಭದ್ರತಾ ಪಡೆ ಸಂಸ್ಥಾಪನ ದಿನವನ್ನು ಡಿಸೆಂಬರ್ 1 ರಂದು ಆಚರಿಸಲಾಗುತ್ತದೆ. ಗಡಿ ಭದ್ರತಾ ಪಡೆಯನ್ನು ಡಿಸೆಂಬರ್ 1, 1965 ರಲ್ಲಿ ಸ್ಥಾಪಿಸಲಾಗಿದೆ. ಬಿಎಸ್ಎಫ್ ವಿಶ್ವದ ಅತಿ ದೊಡ್ಡ ಗಡಿ ಕಾವಲು ಪಡೆಯಾಗಿದೆ. ಪ್ರಸ್ತುತ ಬಿಎಸ್ಎಪ್ ಅನ್ನು ಬಾಂಗ್ಲ-ಭಾರತ, ಭಾರತ-ಪಾಕಿಸ್ತಾನ ಅಂತಾರಾಷ್ಟ್ರೀಯ ಗಡಿ ಕಾವಲಿಗೆ ನಿಯೋಜಿಸಲಾಗಿದೆ.

3. 2016 ಭಾರತ ಅಂತಾರಾಷ್ಟ್ರೀಯ ವಿಜ್ಞಾನ ಉತ್ಸವ (India International Science Festival) ಯಾವ ನಗರದಲ್ಲಿ ನಡೆಯಲಿದೆ?
ಅ) ನವ ದೆಹಲಿ
ಆ) ಜೈಪುರ
ಇ) ಉದಯ್ ಪುರ
ಈ) ಚೆನ್ನೈ
ನವ ದೆಹಲಿ
2016 ಭಾರತ ಅಂತಾರಾಷ್ಟ್ರೀಯ ವಿಜ್ಞಾನ ಉತ್ಸವ ನವದೆಹಲಿಯಲ್ಲಿ ಡಿಸೆಂಬರ್ 7 ರಿಂದ 11 ರವರೆಗೆ ನಡೆಯಲಿದೆ. ಕೇಂದ್ರ ವಿಜ್ಞಾನ ಮತ್ತು ತಂತ್ರಜ್ಞಾನ ಮತ್ತು ಭೂ ವಿಜ್ಞಾನ ಸಚಿವಾಲಯ ಹಾಗೂ ವಿಜ್ಞಾನ ಭಾರತಿ ಸಹಯೋಗದಲ್ಲಿ ಆಯೋಜಿಸಲಾಗುತ್ತಿದೆ. "Science for the Masses" ಇದು ಈ ಉತ್ಸವದ ಥೀಮ್. ಸರಿಸುಮಾರು 5000 ಯುವ ವಿಜ್ಞಾನಿಗಳು ತಮ್ಮ ವಿಜ್ಞಾನ ಪ್ರತಿಭೆಯನ್ನ ಈ ಉತ್ಸವದಲ್ಲಿ ಪ್ರದರ್ಶಿಸಲಿದ್ದಾರೆ.

www.karunaduexams.com

4. ಇತ್ತೀಚೆಗೆ ನಿಧನರಾದ “ಮಕ್ಕಲ್ ಪವಲರ್ ಇನ್ಕುಲಬ್” ಯಾವ ಭಾಷೆಯ ಪ್ರಸಿದ್ದ ಕವಿ?
ಅ) ಮಲೆಯಾಳಂ
ಆ) ತಮಿಳು
ಇ) ಗುಜರಾತಿ
ಈ) ರಾಜಸ್ತಾನಿ
ತಮಿಳು
ಪ್ರಖ್ಯಾತ ತಮಿಳು ಕವಿ ಮತ್ತು ಹೋರಾಟಗಾರ “ಮಕ್ಕಲ್ ಪವಲರ್ ಇನ್ಕುಲಬ್” ರವರು ಚೆನ್ನೈನಲ್ಲಿ ನಿಧನರಾದರು. ಮಕ್ಕಲ್ ರವರು ತಮ್ಮ ಕವನಗಳಾದ “ನಾಂಗ ಮನುಷಾಂಗದ”, “ಕನ್ಮಣಿ ರಾಜಂ”, ಇತ್ಯಾದಿಗಳಿಂದ ಪ್ರಸಿದ್ದರಾಗಿದ್ದರು. ಇವರ ನಾಟಕ “ಅವ್ವೈ” ಆಧುನಿಕ ತಮಿಳಿನ ಪ್ರಸಿದ್ದ ನಾಟಕವೆಂದು ಬಣ್ಣಿಸಲಾಗಿದೆ ಹಾಗೂ ಕಾಲೇಜು ಪುಸ್ತಕಗಳಲ್ಲಿ ಪಠ್ಯಕ್ರಮವಾಗಿ ಅಳವಡಿಸಿಕೊಳ್ಳಲಾಗಿದೆ.

5. ISBF ಸ್ನೂಕರ್ ಚಾಂಪಿಯನ್ ಷಿಪ್ ನಲ್ಲಿ ಬೆಳ್ಳಿ ಪದಕ ಗೆದ್ದ ಭಾರತೀಯ ಸ್ನೂಕರ್ ಯಾರು?
ಅ) ಗೀತ್ ಸೇತಿ
ಆ) ಮನನ್ ಚಂದ್ರ
ಇ) ಆದಿತ್ಯ ಮೆಹ್ತಾ
ಈ) ಪಂಕಜ್ ಅಡ್ವಾಣಿ
ಪಂಕಜ್ ಅಡ್ವಾಣಿ
15 ಬಾರಿ ವಿಶ್ವ ಚಾಂಪಿಯನ್ ಆಗಿರುವ ಪಂಕಜ್ ಅಡ್ವಾಣಿ ರವರು 2016 ISBF ಸ್ನೂಕರ್ ಚಾಂಪಿಯನ್ ಷಿಪ್ ನಲ್ಲಿ ಆಂಡ್ರ್ಯೂ ಪಗೆಟ್ ರವರ ವಿರುದ್ದ ಸೋಲುವ ಮೂಲಕ ಬೆಳ್ಳಿ ಪದಕಕ್ಕೆ ತೃಪ್ತಿಪಟ್ಟುಕೊಂಡರು.

6. ವಿಶ್ವ ಆರ್ಥಿಕ ವೇದಿಕೆಯ “2016-ವ್ಯಾಪಾರ ಅನುವುಗೊಳಿಸುವ ಸೂಚ್ಯಂಕ (Enabling Trade Index)”ಭಾರತ ಎಷ್ಟನೇ ಸ್ಥಾನದಲ್ಲಿದೆ?
ಅ) 105
ಆ) 102
ಇ) 96
ಈ) 85
102
ವಿಶ್ವ ಆರ್ಥಿಕ ವೇದಿಕೆಯ 2016 ವ್ಯಾಪಾರ ಅನುವುಗೊಳಿಸುವ ಸೂಚ್ಯಂಕದಲ್ಲಿ 136 ರಾಷ್ಟ್ರಗಳ ಪೈಕಿ ಭಾರತ 102ನೇ ಸ್ಥಾನದಲ್ಲಿದೆ. ಸೂಚ್ಯಂಕದಲ್ಲಿ ಸಿಂಗಾಪುರ ಮೊದಲ ಸ್ಥಾನದಲ್ಲಿದೆ. ನೆದರ್ಲ್ಯಾಂಡ್, ಹಾಂಗ್ ಕಾಂಗ್, ಲಕ್ಸಂಬರ್ಗ್ ಮತ್ತು ಸ್ವೀಡನ್ ಪಟ್ಟಿಯಲ್ಲಿ ಮೊದಲ ಐದು ಸ್ಥಾನ ಪಡೆದುಕೊಂಡಿವೆ.

7. 2016 ರೇಮಂಡ್ ಕ್ರಾಸ್ ವರ್ಡ್ ಬುಕ್ ಆವಾರ್ಡ್ನ ಜೀವಮಾನ ಸಾಧನೆ ಪ್ರಶಸ್ತಿಯನ್ನು ಯಾರಿಗೆ ನೀಡಲಾಗಿದೆ?
ಅ) ಸಲ್ಮಾನ್ ರಶ್ದಿ
ಆ) ಅಮಿತಾವ್ ಘೋಷ್
ಇ) ಚೇತನ್ ಭಗತ್
ಈ) ರಸ್ಕಿನ್ ಬಾಂಡ್
ರಸ್ಕಿನ್ ಬಾಂಡ್

www.karunaduexams.com

ವಿಶ್ವ ಪ್ರಸಿದ್ಧ ಲೇಖಕ ರಸ್ಕಿನ್ ಬಾಂಡ್ ರವರಿಗೆ 2016 ರೇಮಂಡ್ ಕ್ರಾಸ್ ವರ್ಡ್ ಬುಕ್ ಆವಾರ್ಡ್ ಸಮಾರಂಭದಲ್ಲಿ ಜೀವಮಾನ ಸಾಧನೆ ಪ್ರಶಸ್ತಿ ನೀಡಿ ಗೌರವಿಸಲಾಗಿದೆ.

8. “2016 ವಿಶ್ವ ಆಯುರ್ವೇದ ಕಾಂಗ್ರೆಸ್” ನ ಆತಿಥ್ಯ ವಹಿಸಲಿರುವ ರಾಷ್ಟ್ರ ಯಾವುದು?
ಅ) ಭಾರತ
ಆ) ಸಿಂಗಾಪುರ
ಇ) ಮ್ಯಾನ್ಮಾರ್
ಈ) ಮಲೇಷಿಯಾ
ಭಾರತ
7ನೇ ವಿಶ್ವ ಆಯುರ್ವೇದ ಕಾಂಗ್ರೆಸ್ ಕೊಲ್ಕತ್ತಾದಲ್ಲಿ ಡಿಸೆಂಬರ್ 2 ರಿಂದ ನಡೆಯಲಿದೆ. ವಿಶ್ವ ಆಯುರ್ವೇದ ಫೌಂಡೇಷನ್ ಈ ಕಾಂಗ್ರೆಸ್ ಅನ್ನು ಆಯುಷ್ ಸಚಿವಾಲಯ ಹಾಗೂ ಪಶ್ಚಿಮ ಬಂಗಾಳ ಸರ್ಕಾರದ ಆಶ್ರಯದಲ್ಲಿ ಆಯೋಜಿಸುತ್ತಿದೆ.

9. ಯಾವ ದೇಶದ ಡೇವಿಸ್ ತಂಡ “2016 ಡೇವಿಸ್ ಕಪ್ ಟೆನ್ನಿಸ್” ಪ್ರಶಸ್ತಿಯನ್ನು ಗೆದ್ದುಕೊಂಡಿತು?
ಅ) ಸ್ವಿಟ್ಜರ್ಲ್ಯಾಂಡ್
ಆ) ಸ್ಪೇನ್
ಇ) ಅರ್ಜೇಂಟಿನಾ
ಈ) ಜರ್ಮನಿ
ಅರ್ಜೇಂಟಿನಾ
ಅರ್ಜೇಂಟಿನಾ ದೇಶದ ಡೇವಿಸ್ ತಂಡ ಕ್ರೋಟಿಯಾ ತಂಡವನ್ನು 3-2 ರಲ್ಲಿ ಸೋಲಿಸುವ ಮೂಲಕ 2016 ಡೇವಿಸ್ ಕಪ್ ಟೆನ್ನಿಸ್ ಗೆದ್ದುಕೊಂಡಿತು. ಇದು ಅರ್ಜೇಂಟಿನಾಗೆ ಚೊಚ್ಚಲ ಡೇವಿಸ್ ಕಪ್ ಟೆನ್ನಿಸ್ ಪ್ರಶಸ್ತಿ.

10. 2016 ರಾಷ್ಟ್ರೀಯ ಚೆಸ್ ಚಾಂಪಿಯನ್ ಷಿಪ್ ಪ್ರಶಸ್ತಿ ಗೆದ್ದವರು _________?
ಅ) ಚಿದಂಬರಂ
ಆ) ಎಂ ಕಾರ್ತಿಕೇಯನ್
ಇ) ಆರ್ ಆರ್ ಲಕ್ಷಣ್
ಈ) ಚಂದ್ರ ಪ್ರಸಾದ್
ಎಂ ಕಾರ್ತಿಕೇಯನ್
ಲಕ್ನೋದಲ್ಲಿ ನಡೆದ 2016 ರಾಷ್ಟ್ರೀಯ ಚೆಸ್ ಚಾಂಪಿಯನ್ ಷಿಪ್ ನಲ್ಲಿ ಎಂ ಕಾರ್ತಿಕೇಯನ್ ರವರು ಪ್ರಶಸ್ತಿಯನ್ನು ಗೆದ್ದುಕೊಂಡರು.

11. 2016 ಅತ್ಯುತ್ತಮ ಘನ ತ್ಯಾಜ್ಯ ನಿರ್ವಹಣೆ ಸುಧಾರಣೆ ಯೋಜನೆಗೆ C40 ಪ್ರಶಸ್ತಿಯನ್ನು ಪಡೆದುಕೊಂಡ ಭಾರತದ ನಗರ ಯಾವುದು?
ಅ) ಮೈಸೂರು
ಆ) ಕೊಲ್ಕತ್ತಾ
ಇ) ಹೈದ್ರಾಬಾದ್
ಈ) ಮುಂಬೈ
ಕೊಲ್ಕತ್ತಾ

www.karunaduexams.com

2016 ಅತ್ಯುತ್ತಮ ಘನ ತ್ಯಾಜ್ಯ ನಿರ್ವಹಣೆ ಸುಧಾರಣೆ ಯೋಜನೆಗೆ ನೀಡಲಾಗುವ C40 ಪ್ರಶಸ್ತಿಯನ್ನು ಕೊಲ್ಕತ್ತಾ ಪಡೆದುಕೊಂಡಿದೆ. ಮೆಕ್ಸಿಕೊದಲ್ಲಿ ನಡೆದ C40 ಮೇಯರ್ ಶೃಂಗಸಭೆಯಲ್ಲಿ ಪ್ರಶಸ್ತಿಯನ್ನು ನೀಡಲಾಯಿತು. ಕೊಲ್ಕತ್ತಾ ಈ ಪ್ರಶಸ್ತಿಯನ್ನು ಪಡೆದ ಭಾರತದ ಏಕೈಕ ನಗರವಾಗಿದೆ.

12. ಕೇಂದ್ರ ತನಿಖಾ ದಳ (ಸಿಬಿಐ)ನ ಹಂಗಾಮಿ ನಿರ್ದೇಶಕರಾಗಿ ಯಾರನ್ನು ನೇಮಕ ಮಾಡಲಾಗಿದೆ?
ಅ) ರೂಪಕ್ ಕುಮಾರ್ ದತ್ತ
ಆ) ರಾಕೇಶ್ ಆಸ್ಥಾನ
ಇ) ಕಮಲೇಶ್ ಚಂದ್ರ
ಈ) ನಿರೋಜ್ ಕುಮಾರ್
ರಾಕೇಶ್ ಆಸ್ಥಾನ
ಹಿರಿಯ ಐಪಿಎಸ್ ಅಧಿಕಾರಿ ರಾಕೇಶ್ ಆಸ್ಥಾನ ಅವರು ಸಿಬಿಐನ ಹಂಗಾಮಿ ನಿರ್ದೇಶಕರಾಗಿ ಅಧಿಕಾರ ವಹಿಸಿಕೊಂಡಿದ್ದಾರೆ. 1984ರ ಗುಜರಾತ್ ಕೇಡರ್ ಅಧಿಕಾರಿಯಾದ ಆಸ್ಥಾನ ಅವರನ್ನು ಸಿಬಿಐನ ಉಪ ಮುಖ್ಯಸ್ಥರನ್ನಾಗಿ ಎರಡು ದಿನಗಳ ಹಿಂದಷ್ಟೇ ನೇಮಿಸಲಾಗಿತ್ತು. ಅನಿಲ್ ಸಿನ್ಹಾ ಅವರು ಎರಡು ವರ್ಷದ ಅಧಿಕಾರಾವಧಿಯನ್ನು ಪೂರ್ಣಗೊಳಿಸಿ ನಿವೃತ್ತರಾದರು. ಸಿಬಿಐ ಮುಖ್ಯಸ್ಥರೊಬ್ಬರ ನಿವೃತ್ತಿಯ ಬಳಿಕ ಅಧಿಕೃತವಾಗಿ ಬೇರೆ ಮುಖ್ಯಸ್ಥರನ್ನು ನೇಮಿಸದೆಯೇ ಇರುವುದು ಕಳೆದ 10 ವರ್ಷದಲ್ಲಿ ಇದೇ ಮೊದಲ ಬಾರಿ.

13. ________ ರಂದು ರಾಷ್ಟ್ರೀಯ ಮಾಲಿನ್ಯ ನಿಯಂತ್ರಣ ದಿನ (National Pollution Control Day) ವನ್ನು ಆಚರಿಸಲಾಗುತ್ತದೆ?
ಅ) ಡಿಸೆಂಬರ್ 1
ಆ) ಡಿಸೆಂಬರ್ 2
ಇ) ಡಿಸೆಂಬರ್ 3
ಈ) ಡಿಸೆಂಬರ್ 4
ಡಿಸೆಂಬರ್ 2
ರಾಷ್ಟ್ರೀಯ ಮಾಲಿನ್ಯ ನಿಯಂತ್ರಣ ದಿನವನ್ನು ಪ್ರತಿ ವರ್ಷ ಡಿಸೆಂಬರ್ 2 ರಂದು ದೇಶದಾದ್ಯಂತ ಆಚರಿಸಲಾಗುತ್ತದೆ. ಮಾಲಿನ್ಯ ನಿಯಂತ್ರಣದ ಬಗ್ಗೆ ಸಾರ್ವಜನಿಕರು ಹಾಗೂ ಕೈಗಾರಿಕೆ ವಲಯದಲ್ಲಿ ಅರಿವು ಮೂಡಿಸುವುದು ಈ ದಿನದ ಉದ್ದೇಶ. 1984ರ ಭೂಪಾಲ್ ವಿಷ ಅನಿಲ ದುರಂತದಲ್ಲಿ ಮಡಿದವರನ್ನು ಸ್ಮರಿಸುವ ಅಂಗವಾಗಿ ರಾಷ್ಟ್ರೀಯ ಮಾಲಿನ್ಯ ನಿಯಂತ್ರಣ ದಿನವನ್ನು ಆಚರಿಸಲಾಗುತ್ತದೆ. ಭೂಪಾಲ್ ನಗರದ ಯೂನಿಯನ್ ಕಾರ್ಬೈಡ್ ಕಾರ್ಖಾನೆಯಿಂದ "ಮಿಥೈಲ್ ಐಸೋಸೈಯನೆಟ್" ವಿಷ ಅನಿಲ ಸೋರಿಕೆಗೊಂಡು ಸಾವಿರಾರು ಜನರು ಸಾವನ್ನಪ್ಪಿದ್ದರು.

14. ನ್ಯಾಷನಲ್ ಸ್ಟಾಕ್ ಎಕ್ಸ್ ಚೇಂಜ್ ಆಫ್ ಇಂಡಿಯಾ (NSE)ದ ಹಂಗಾಮಿ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಯಾಗಿ ಯಾರು ನೇಮಕಗೊಂಡಿದ್ದಾರೆ?
ಅ) ಜೆ ರವಿಚಂದ್ರನ್
ಆ) ಎಸ್ ಎಸ್ ನಾಡಕರ್ಣಿ
ಇ) ಕುಶಾಲ್ ಸಿಂಗ್
ಈ) ಅಬ್ದುಲ್ ಖಾನ್
ಜೆ ರವಿಚಂದ್ರನ್

www.karunaduexams.com

ಜೆ ರವಿಚಂದ್ರನ್ ರವರನ್ನು ನ್ಯಾಷನಲ್ ಸ್ಟಾಕ್ ಎಕ್ಸ್ ಚೇಂಜ್ ಆಫ್ ಇಂಡಿಯಾ (NSE)ದ ಹಂಗಾಮಿ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಯಾಗಿ (ಸಿಇಒ) ನೇಮಕಮಾಡಲಾಗಿದೆ. ಚಿತ್ರಾ ರಾಮಕೃಷ್ಣ ರವರು ವೈಯುಕ್ತಿಕ ಕಾರಣಗಳಿಂದ ರಾಜೀನಾಮೆ ನೀಡಿದ ಕಾರಣ ಈ ಹುದ್ದೆ ತೆರವಾಗಿತ್ತು.

15. ಭಾರತದಲ್ಲಿ ಅತಿ ಹೆಚ್ಚು ಸಕ್ಕರೆ ಉತ್ಪಾದಿಸುವ ರಾಜ್ಯ ಯಾವುದು?
ಅ) ಉತ್ತರ ಪ್ರದೇಶ
ಆ) ಮಹಾರಾಷ್ಟ್ರ
ಇ) ಮಧ್ಯ ಪ್ರದೇಶ
ಈ) ಗುಜರಾತ್
ಮಹಾರಾಷ್ಟ್ರ
ಮಹಾರಾಷ್ಟ್ರ ಭಾರತದಲ್ಲಿ ಅತಿ ಹೆಚ್ಚು ಸಕ್ಕರೆ ಉತ್ಪಾದಿಸುವ ರಾಜ್ಯ. ಉತ್ತರ ಪ್ರದೇಶ ಎರಡನೇ ಸ್ಥಾನದಲ್ಲಿದೆ.

16. ದೇಶವನ್ನು ಡಿಜಿಟಲ್ ಅರ್ಥವ್ಯವಸ್ಥೆಯಾಗಿ ರೂಪಿಸುವ ನೀಲ ನಕ್ಷೆ ತಯಾರಿಸಲು ಕೇಂದ್ರ ಸರ್ಕಾರ ಯಾರ ನೇತೃತ್ವದಲ್ಲಿ ಸಮಿತಿಯನ್ನು ರಚಿಸಿದೆ?
ಅ) ನವೀನ್ ಪಟ್ನಾಯಕ್
ಆ) ನಿತೀಶ್ ಕುಮಾರ್
ಇ) ಚಂದ್ರಬಾಬು ನಾಯ್ಡು
ಈ) ಶಿವರಾಜ್ ಚೌಹಣ್
ಚಂದ್ರಬಾಬು ನಾಯ್ಡು
ದೇಶವನ್ನು ಡಿಜಿಟಲ್ ಅರ್ಥವ್ಯವಸ್ಥೆಯಾಗಿ ರೂಪಿಸುವ ನೀಲ ನಕ್ಷೆ ತಯಾರಿಸಲು ಕೇಂದ್ರ ಸರ್ಕಾರ ಆರು ಮುಖ್ಯಮಂತ್ರಿಗಳಿರುವ ಸಮಿತಿಯೊಂದನ್ನು ರಚಿಸಿದೆ. ಆಂಧ್ರ ಪ್ರದೇಶ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಅವರು ಸಮಿತಿಯ ಮುಖ್ಯಸ್ಥರಾಗಿರುತ್ತಾರೆ. ನೀತಿ ಆಯೋಗದ ಉಪಾಧ್ಯಕ್ಷ, ಮುಖ್ಯ ಕಾರ್ಯನಿರ್ವಹಣಾಧಿಕಾರಿ ಸಮಿತಿಯಲ್ಲಿ ಇರುತ್ತಾರೆ. ವಿಶಿಷ್ಟ ಗುರುತು ಚೀಟಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ನಂದನ್ ನಿಲೇಕಣಿ ಅವರನ್ನೂ ಸಮಿತಿಗೆ ಸೇರಿಸಿಕೊಳ್ಳಲಾಗಿದೆ.ಭಾರತವನ್ನು ನಗದುರಹಿತ ಅರ್ಥ ವ್ಯವಸ್ಥೆಯಾಗಿಸುವುದಕ್ಕೆ ಜಾಗತಿಕ ಮಟ್ಟದ ಅತ್ಯುತ್ತಮ ಪದ್ಧತಿಗಳನ್ನು ಗುರುತಿಸಿ ಅದನ್ನು ಇಲ್ಲಿ ಜಾರಿಗೆ ತರುವುದು ಈ ಸಮಿತಿಯ ಉದ್ದೇಶವಾಗಿದೆ.

17. ಇತ್ತೀಚೆಗೆ ನಿಧನರಾದ "ಸೈಯದ್ ಅಬ್ದುಲ್ ಸಲಾಂ"ರವರು ಯಾವ ಕ್ರೀಡೆಗೆ ಸಂಬಂಧಿಸಿದ್ದಾರೆ?
ಅ) ಹಾಕಿ
ಆ) ಪುಟ್ಬಾಲ್
ಇ) ಕ್ರಿಕೆಟ್
ಈ) ಟೆನ್ನಿಸ್
ಪುಟ್ಬಾಲ್
ಒಲಿಂಪಿಯನ್ ಫುಟ್ ಬಾಲ್ ಆಟಗಾರ ಸೈಯದ್ ಅಬ್ದುಲ್ ಸಲಾಂ (80) ಹೈದರಾ ಬಾದ್‌ನಲ್ಲಿ ನಿಧನರಾಗಿದ್ದಾರೆ. ಅತ್ಯುತ್ತಮ ಡಿಫೆಂಡರ್ ಆಗಿದ್ದ ಅಬ್ದುಲ್ ಸಲಾಂ ಅವರು 1956ರಲ್ಲಿ ಮೆಲ್ಬರ್ನ್‌ನಲ್ಲಿ ನಡೆದಿದ್ದ ಒಲಿಂಪಿಕ್ಸ್‌ನಲ್ಲಿ ಭಾರತ ತಂಡವನ್ನು ಪ್ರತಿನಿಧಿಸಿದ್ದರು. ಆಗ ತಂಡ



www.karunaduexams.com

ನಾಲ್ಕನೇ ಸ್ಥಾನ ಗಳಿಸಿತ್ತು. 1970ರಲ್ಲಿ ಫಿಫಾ ಕೋಚ್ ಆಗಿದ್ದ ಅವರು ಬಂಗಾಳದ ಪ್ರತಿಷ್ಠಿತ ಕ್ಲಬ್ ಮಹಮಡನ್ ಸ್ಪೋರ್ಟಿಂಗ್ ಪರ ಆಡಿದ್ದರು.

18. ವಿಕಲಚೇತನರ ಸವಲತ್ತುಗಳ ಅನುಷ್ಠಾನಕ್ಕಾಗಿ ಯಾವ ರಾಜ್ಯಕ್ಕೆ ಅತ್ಯುತ್ತಮ ರಾಜ್ಯ ಪ್ರಶಸ್ತಿ ಲಭಿಸಿದೆ?
ಅ) ಮಹಾರಾಷ್ಟ್ರ
ಆ) ಕರ್ನಾಟಕ
ಇ) ತೆಲಂಗಣ
ಈ) ಉತ್ತರ ಪ್ರದೇಶ
ಕರ್ನಾಟಕ
ವಿಕಲಚೇತನರ ಸವಲತ್ತುಗಳ ಅನುಷ್ಠಾನಕ್ಕಾಗಿ ಕರ್ನಾಟಕ ಸರ್ಕಾರಕ್ಕೆ ಅತ್ಯುತ್ತಮ ರಾಜ್ಯ ಪ್ರಶಸ್ತಿ ಲಭಿಸಿದೆ. ಕರ್ನಾಟ ಸರ್ಕಾರವು ವಿಕಲಚೇತನರ ಕಲ್ಯಾಣಕ್ಕಾಗಿ ಸುಮಾರು 22 ಯೋಜನೆಗಳನ್ನು ಘೋಷಿಸಿದ್ದು, ಇವುಗಳ ಅನುಷ್ಠಾನಕ್ಕೆ ತರುವಲ್ಲಿ ಕರ್ನಾಟಕಕ್ಕೆ "ಅತ್ಯುತ್ತಮ ರಾಜ್ಯ' ಪ್ರಶಸ್ತಿ ಲಭಿಸಿದೆ ಎಂದು ಯೋಜನೆ ಸಾಂಖ್ಯಿಕ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಎಂ.ಆರ್. ಸೀತಾರಾಂ ಅವರು ತಿಳಿಸಿದ್ದಾರೆ. ಕರ್ನಾಟಕವನ್ನು ವಿಕಲಚೇತನ ಸಬಲೀಕರಣ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿರುವ "ಅತ್ಯುತ್ತಮ ರಾಜ್ಯ" ಎಂಬ ರಾಷ್ಟ್ರಪ್ರಶಸ್ತಿಯನ್ನು ಕೇಂದ್ರ ಸರ್ಕಾರದ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಇಲಾಖೆ ನೀಡಿದ್ದು, ಆ ಪ್ರಶಸ್ತಿಯನ್ನು ನವದೆಹಲಿಯ ವಿಜ್ಞಾನ ಭವನದಲ್ಲಿ ನಡೆಯಲಿರುವ ಕಾರ್ಯಕ್ರಮದಲ್ಲಿ ಇಲಾಖೆಯ ಸಚಿವೆ ಶ್ರೀಮತಿ ಉಮಾಶ್ರೀ ಅವರು ಭಾಗವಹಿಸಿ ಈ ಪ್ರಶಸ್ತಿಯನ್ನು ಸರ್ಕಾರದ ಪರವಾಗಿ ಸ್ವೀಕರಿಸಲಿದ್ದಾರೆ. ವಿಕಲಚೇತನ ವಿದ್ಯಾರ್ಥಿಗಳಿಗೆ ಟಾಕಿಂಗ್ ಲ್ಯಾಪ್‌ಟಾಪ್ ವಿತರಣೆ, ಬ್ರೈಲ್‌ಯಂತ್ರ ವಿತರಣೆ, ಕೆ.ಎ.ಎಸ್ ಐ.ಎ.ಎಸ್. ಇನ್ನಿತರ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಯಾರಿ ನಡೆಸುವ ವಿಕಲಚೇತನರ ವಿದ್ಯಾರ್ಥಿಗಳಿಗೆ ಗರಿಷ್ಠ 1 ಲಕ್ಷದವರೆಗೆ ಧನಸಹಾಯ ನೀಡಲಾಗುತ್ತಿದೆ.

19. 2016 ಫಾರ್ಚೂನ್ ವರ್ಷದ ಬ್ಯುಸಿನೆಸ್ ವ್ಯಕ್ತಿಗಳ ಪಟ್ಟಿಯಲ್ಲಿ ಮೊದಲ ಸ್ಥಾನವನ್ನು ಪಡೆದುಕೊಂಡಿರುವವರು ಯಾರು?
ಅ) ಆದಿತ್ಯ ಪುರಿ
ಆ) ಮಾರ್ಕ್ ಜುಕರ್ಬರ್ಗ್
ಇ) ಸತ್ಯ ನದೆಲ್ಲ
ಈ) ಅಜಯ್ ಬಂಗ
ಮಾರ್ಕ್ ಜುಕರ್ಬರ್ಗ್
ಫೇಸ್ ಬುಕ್ ಸಿಇಓ ಮಾರ್ಕ್ ಜುಕರ್ಬರ್ಗ್ ರವರು 2016 ಫಾರ್ಚೂನ್ ನಿಯತಕಾಲಿಕೆ ವರ್ಷದ ಬ್ಯುಸಿನೆಸ್ ವ್ಯಕ್ತಿಗಳ ಪಟ್ಟಿಯಲ್ಲಿ ಪ್ರಥಮ ಸ್ಥಾನದಲ್ಲಿದ್ದಾರೆ.

20. "ಡೋಲ್ ಡ್ರಮ್"ಗಳು ಎಲ್ಲಿ ಉಂಟಾಗುತ್ತವೆ ___?
ಅ) ಸಮಶೀತೋಷ್ಣ ಪ್ರದೇಶಗಳಲ್ಲಿ
ಆ) ಧ್ರುವ ಪ್ರದೇಶಗಳಲ್ಲಿ
ಇ) ಉಷ್ಣವಲಯ ಪ್ರದೇಶಗಳಲ್ಲಿ
ಈ) ಸಮಭಾಜಕ ವೃತ್ತ ಪ್ರದೇಶಗಳಲ್ಲಿ
ಸಮಭಾಜಕ ವೃತ್ತ ಪ್ರದೇಶಗಳಲ್ಲಿ

www.karunaduexams.com

21. 2016 ಅಂತಾರಾಷ್ಟ್ರೀಯ ಮಕ್ಕಳ ಶಾಂತಿ ಪ್ರಶಸ್ತಿ (International Children's Peace Prize) ಯಾರಿಗೆ ಲಭಿಸಿದೆ?
ಅ) ಸುರಭಿ ಸಿಂಗ್
ಆ) ಕೆಹ್ ಕಾಶನ್ ಬಸು
ಇ) ಪ್ರಿಯಾಂಕ್ ರಾವತ್
ಈ) ಅಬ್ರಹಂ ಕೆ ಖಾನ್
ಕೆಹ್ ಕಾಶನ್ ಬಸು
ದುಬೈನಲ್ಲಿ ನೆಲೆಸಿರುವ ಭಾರತತೀಯ ಮೂಲಕ ಪರಿಸರ ಹೋರಾಟಗಾರ್ತಿ ಕೆಹ್ ಕಾಶನ್ ಬಸು ರವರಿಗೆ 2016 ಅಂತಾರಾಷ್ಟ್ರೀಯ ಮಕ್ಕಳ ಶಾಂತಿ ಪ್ರಶಸ್ತಿ ಲಭಿಸಿದೆ. ದಿ ಹೇಗ್ ನಲ್ಲಿ ನಡೆದ ಸಮಾರಂಭದಲ್ಲಿ 16 ವರ್ಷದ ಕೆಹ್ ಕಾಶನ್ ಬಸು ರವರಿಗೆ ಬಾಂಗ್ಲಾದೇಶದ ನೊಬೆಲ್ ಶಾಂತಿ ಪ್ರಶಸ್ತಿ ವಿಜೇತ ಮುಹಮ್ಮದ್ ಯೂನಸ್ ರವರು ಪ್ರಶಸ್ತಿಯನ್ನು ವಿತರಿಸಿದರು. ಡಚ್ ಮಕ್ಕಳ ಹಕ್ಕು ಫೌಂಡೇಶನ್ ಸ್ಥಾಪಕರಾದ ಮಾರ್ಕ್ ಡುಲ್ಲೆರಟ್ ರವರು ಈ ಪ್ರಶಸ್ತಿಯನ್ನು ನೀಡುತ್ತಿದ್ದಾರೆ.

22. 2016 ಪ್ಯಾನ್ ಸೋನಿಕ್ ಓಪನ್ ಗಾಲ್ಫ್ ಚಾಂಪಿಯನ್ ಷಿಪ್‌ನಲ್ಲಿ ಪ್ರಶಸ್ತಿ ಗೆದ್ದವರು ಯಾರು?
ಅ) ಮುಕೇಶ್ ಕುಮಾರ್
ಆ) ಚಿಕ್ಕರಂಗಪ್ಪ
ಇ) ಗಗನಜೀತ್ ಬುಲ್ಲರ್
ಈ) ರಶೀದ್ ಖಾನ್
ಮುಕೇಶ್ ಕುಮಾರ್
ಭಾರತದ ಮುಕೇಶ್ ಕುಮಾರ್ ಅವರು 2016 ಪ್ಯಾನ್ ಸೋನಿಕ್ ಓಪನ್ ಗಾಲ್ಫ್ ಚಾಂಪಿಯನ್ ಷಿಪ್‌ನಲ್ಲಿ ಪ್ರಶಸ್ತಿ ಗೆದ್ದಿದ್ದಾರೆ. ಈ ಮೂಲಕ ಏಷ್ಯನ್ ಟೂರ್‌ನಲ್ಲಿ ಟ್ರೋಫಿ ಎತ್ತಿಹಿಡಿದ ಹಿರಿಯ ಗಾಲ್ಫರ್ ಎಂಬ ಶ್ರೇಯಕ್ಕೆ ಪಾತ್ರರಾಗಿದ್ದಾರೆ. ದೆಹಲಿ ಗಾಲ್ಫ್ ಕ್ಲಬ್‌ನಲ್ಲಿ ನಡೆದ ಚಾಂಪಿಯನ್ ಷಿಪ್‌ನಲ್ಲಿ ಮುಖೇಶ್ ಅವರು 206 ಸ್ಕೋರ್ ಕಲೆಹಾಕಿ ಮೊದಲ ಸ್ಥಾನ ಗಳಿಸಿದರು.ಭಾರತದ ಜ್ಯೋತಿ ರಾಂಧವ ಮತ್ತು ರಶೀದ್ ಖಾನ್ ಅವರು ಜಂಟಿ ಎರಡನೇ ಸ್ಥಾನ ತಮ್ಮದಾಗಿಸಿಕೊಂಡರು. 208 ಸ್ಕೋರ್ ಕಲೆಹಾಕಿದ ಶ್ರೀಲಂಕಾದ ಮಿಥುನ್ ಪೆರೇರಾ ನಾಲ್ಕನೇ ಸ್ಥಾನ ದೊಂದಿಗೆ ಸ್ಪರ್ಧೆ ಕೊನೆಗೊಳಿಸಿದರು.

23. ಆನ್ ಲೈನ್ ಟಿಕೆಟ್ ಮಾರಾಟ ತಾಣ "ಅಟ್ರಾಕ್ಷನ್ ಟಿಕ್ಸ್" ಪ್ರಕಾರ ವಿಶ್ವದ ಅತ್ಯುತ್ತಮ ಆಕರ್ಷಣ ತಾಣ ಯಾವುದು?
ಅ) ಯೂನಿವರ್ಸಲ್ ಸ್ಟುಡಿಯೋಸ್ ಹಾಲಿವುಡ್
ಆ) ಮ್ಯಾಜಿಕ್ ಕಿಂಗ್ಡಮ್ ಪಾರ್ಕ್
ಇ) ವಾರ್ನರ್ಸ್ ಬ್ರದರ್ಸ್ ಸ್ಟುಡಿಯೋ
ಈ) ತಾಜ್ ಮಹಲ್
ಯೂನಿವರ್ಸಲ್ ಸ್ಟುಡಿಯೋಸ್ ಹಾಲಿವುಡ್
ಯೂನಿವರ್ಸಲ್ ಸ್ಟುಡಿಯೋಸ್ ಹಾಲಿವುಡ್ ವಿಶ್ವದ ಅತ್ಯುತ್ತಮ ಆಕರ್ಷಣ ತಾಣವಾಗಿ ಹೊರಹೊಮ್ಮಿದೆ. ಆನ್ ಲೈನ್ ಟಿಕೆಟ್ ಮಾರಾಟ ತಾಣ "ಅಟ್ರಾಕ್ಷನ್ ಟಿಕ್ಸ್" ನಡೆಸಿದ ಸಮೀಕ್ಷೆಯಲ್ಲಿ ಯೂನಿವರ್ಸಲ್ ಸ್ಟುಡಿಯೋಸ್ ಹಾಲಿವುಡ್ ಅತಿ ಹೆಚ್ಚು ಮತಗಳನ್ನು

www.karunaduexams.com

ಗಳಿಸಿದೆ. ವಾರ್ನರ್ಸ್ ಬ್ರದರ್ಸ್ ಸ್ಟುಡಿಯೋ ಯುಕೆ ಯ ಅತ್ಯುತ್ತಮ ಆಕರ್ಷಣ ತಾಣ ಹಾಗೂ ವಾಲ್ಟ್ ಡಿಸ್ನಿಯ ಮ್ಯಾಜಿಕ್ ಕಿಂಗ್ಡಮ್ ಅತ್ಯುತ್ತಮ ಫ್ಯಾಮಿಲಿ ಆಕರ್ಷಣ ತಾಣ ಎನಿಸಿದೆ.

24. ಪ್ರತಿಷ್ಠಿತ 2015-ಗಂಗಾಧರ ರಾಷ್ಟ್ರೀಯ ಪ್ರಶಸ್ತಿಗೆ ಆಯ್ಕೆಯಾಗಿರುವ "ಲೀಲಾಧರ್ ಜಗೂರಿ" ಯಾವ ಭಾಷೆಯ ಪ್ರಸಿದ್ದ ಕವಿ?
ಅ) ಮರಾಠಿ
ಆ) ಗುಜರಾತಿ
ಇ) ಹಿಂದಿ
ಈ) ಭೋಜಪುರಿ
ಹಿಂದಿ
ಪ್ರಸಿದ್ದ ಹಿಂದಿ ಕವಿ "ಲೀಲಾಧರ್ ಜಗೂರಿ" ರವರಿಗೆ 2015ನೇ ಸಾಲಿನ ಗಂಗಾಧರ ರಾಷ್ಟ್ರೀಯ ಪ್ರಶಸ್ತಿಗೆ ಆಯ್ಕೆಮಾಡಲಾಗಿದೆ. ಪ್ರಶಸ್ತಿಯು ರೂ 50,000 ನಗದು, ಶಾಲು ಹಾಗೂ ಫಲಕವನ್ನು ಒಳಗೊಂಡಿದೆ. ಈ ಪ್ರತಿಷ್ಠಿತ ಪ್ರಶಸ್ತಿಯನ್ನು ಸಂಬಲ್ ಪುರ ವಿಶ್ವವಿದ್ಯಾಲಯ ಸ್ಥಾಪಿಸಿದೆ. ಜಗೂರಿ ರವರು ಈ ಪ್ರಶಸ್ತಿಯನ್ನು ಪಡೆದ 25ನೇ ಯವರು.

25. "ಇಂಡಿಯಾ-ಯುಎಸ್ ರಿಲೇಷನ್ಸ್ ಇನ್ ದಿ ಎಜ್ ಆಫ್ ಅನ್ಸರ್ಟನಿಟಿ (India-US Relations in the Age of Uncertainty)" ಪುಸ್ತಕದ ಲೇಖಕರು ________?

ಅ) ಬಿ ಎಂ ಜೈನ್

ಆ) ಮೃಣಲ್ ಸಿಂಗ್

ಇ) ಅಶೋಕ್ ಬಾದಲ್

ಈ) ಕೃತಿಕಾ ಚಂದ್ರ

ಬಿ ಎಂ ಜೈನ್

ಬಿ ಎಂ ಜೈನ್ ರವರು ಇಂಡಿಯಾ-ಯುಎಸ್ ರಿಲೇಷನ್ಸ್ ಇನ್ ದಿ ಎಜ್ ಆಫ್ ಅನ್ಸರ್ಟನಿಟಿ ಪುಸ್ತಕದ ಲೇಖಕರು.

26. ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಫಾರೆಸ್ಟ್ ಮ್ಯಾನೆಜ್ಮೆಂಟ್ (Indian Institute of Forest Management) ಎಲ್ಲಿದೆ?

ಅ) ಭೂಪಾಲ್

ಆ) ಬೆಂಗಳೂರು

ಇ) ಕೊಲ್ಕತ್ತಾ

ಈ) ಪುಣೆ

www.karunaduexams.com

ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಫಾರೆಸ್ಟ್ ಮ್ಯಾನೆಜ್ಮೆಂಟ್ ಅನ್ನು 1982 ರಲ್ಲಿ ಸ್ಥಾಪಿಸಲಾಗಿದ್ದು, ಭೂಪಾಲ್, ಮಧ್ಯಪ್ರದೇಶದಲ್ಲಿದೆ. ಕೇಂದ್ರ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯ ಈ ಸಂಸ್ಥೆಯನ್ನು ಸ್ಥಾಪಿಸಿದೆ.

27. 2016 ಮಹಿಳಾ ಏಷ್ಯಾಕಪ್ ಟಿ-20 ಟೂರ್ನಿಯಲ್ಲಿ ಚಾಂಪಿಯನ್ ಆದ ದೇಶ ಯಾವುದು?

ಅ) ಭಾರತ

ಆ) ಪಾಕಿಸ್ತಾನ

ಇ) ಬಾಂಗ್ಲದೇಶ

ಈ) ಶ್ರೀಲಂಕಾ

ಭಾರತ

ಭಾರತ ಮಹಿಳೆಯರ ತಂಡ ಪಾಕಿಸ್ತಾನವನ್ನು ಮಣಿಸುವ ಮೂಲಕ 2016 ಮಹಿಳಾ ಏಷ್ಯಾಕಪ್ ಟಿ-20 ಟೂರ್ನಿಯಲ್ಲಿ ಚಾಂಪಿಯನ್ ಆಗಿ ಹೊರಹೊಮ್ಮಿದೆ. ಏಷ್ಯಾ ಕಪ್ ಪಂದ್ಯಗಳಲ್ಲಿ ನಾಲ್ಕು ಬಾರಿ ಭಾರತದ ಮಹಿಳಾ ಕ್ರಿಕೆಟ್ ತಂಡ ಪಾಕಿಸ್ತಾನವನ್ನು ಸೋಲಿಸಿದೆ.. ಭಾರತದ 121 ರನ್ ಗಳ ಗುರಿಯನ್ನು ಬೆನ್ನತ್ತಿ ಬ್ಯಾಟಿಂಗ್ ಮಾಡಿದ ಪಾಕಿಸ್ತಾನಕ್ಕೆ 6 ವಿಕೆಟ್ ನಷ್ಟದಲ್ಲಿ 104 ರನ್ ಗಳನ್ನು ಗಳಿಸಲಷ್ಟೇ ಸಾಧ್ಯವಾಯಿತು.ಕೊನೆಯ ಓವರ್ ನಲ್ಲಿ ಪಾಕಿಸ್ತಾನಕ್ಕೆ 26 ರನ್‌ಗಳ ಅಗತ್ಯವಿತ್ತು. ಆದರೆ 6 ರನ್‌ಗಳನ್ನಷ್ಟೇ ಗಳಿಸಲು ಸಾಧ್ಯವಾಯಿತು.

28. 2016 ವಿಶ್ವಸಂಸ್ಥೆ ಅಂತಾರಾಷ್ಟ್ರೀಯ ವಿಕಲಚೇತನರದ ದಿನದ ಧ್ಯೇಯವಾಕ್ಯ __________?

ಅ) Achieving 17 goals for the future we want

ಆ) Disability only for physical not for dream

ಇ) One world one people

ಈ) Let’s come out

Achieving 17 goals for the future we want

ವಿಶ್ವಸಂಸ್ಥೆಯ ಅಂತಾರಾಷ್ಟ್ರೀಯ ವಿಕಲಚೇತನರ ದಿನವನ್ನು ಪ್ರತಿವರ್ಷ ಡಿಸೆಂಬರ್ 3 ರಂದು ಆಚರಿಸಲಾಗುತ್ತದೆ. ವಿಕಲಾಂಗ ವ್ಯಕ್ತಿಗಳ ಸಮಸ್ಯೆಗಳ ಬಗ್ಗೆ ಅರಿವು ಮೂಡಿಸುವುದು ಮತ್ತು ವಿಕಲಚೇತನರ ಹಕ್ಕು, ಸಮಾನತೆ ಹಾಗೂ ಘನತೆಯನ್ನು ಕಾಪಾಡುವುದಕ್ಕಾಗಿ 1992ರಿಂದ ಆಚರಿಸಲಾಗುತ್ತಿದೆ. Achieving 17 goals for the future we want ಇದು ಈ ವರ್ಷದ ಧ್ಯೇಯವಾಕ್ಯ.

www.karunaduexams.com

29. 2016 “ಹಾರ್ಟ್ ಆಫ್ ಏಷ್ಯಾ” ಸಚಿವರ ಸಮ್ಮೇಳನ ಯಾವ ನಗರದಲ್ಲಿ ಪ್ರಾರಂಭಗೊಂಡಿತು?

ಅ) ಬೀಜಿಂಗ್

ಆ) ಅಮೃತಸರ

ಇ) ಇಸ್ಲಮಾಬಾದ್

ಈ) ಡಾಕಾ

ಅಮೃತಸರ

6ನೇ ‘ಹಾರ್ಟ್ ಆಫ್ ಏಷ್ಯಾ” ಸಚಿವರ ಸಮ್ಮೇಳನ ಪಂಜಾಬ್ ನ ಅಮೃತಸರದಲ್ಲಿ ಆರಂಭಗೊಂಡಿದೆ. ಭಯೋತ್ಪಾದನೆಯನ್ನು ಹತ್ತಿಕ್ಕುವುದು ಈ ಸಭೆಯ ಪ್ರಮುಖ ಚರ್ಚ ವಿಷಯವಾಗಿದೆ. ಸಚಿವರುಗಳ ಮಟ್ಟದ ಸಭೆಯನ್ನು ಪ್ರಧಾನಿ ನರೇಂದ್ರ ಮೋದಿ ಹಾಗೂ ಅಫ್ಘಾನಿಸ್ತಾನ ಅಧ್ಯಕ್ಷ ಉದ್ಘಾಟಿಸಿದರು. ರಷ್ಯಾ, ಚೀನಾ, ಪಾಕಿಸ್ತಾನ ಸೇರಿದಂತೆ 40 ಕ್ಕೂ ಹೆಚ್ಚು ರಾಷ್ಟ್ರಗಳ ಪ್ರತಿನಿಧಿಗಳು ಸಭೆಯಲ್ಲಿ ಭಾಗವಹಿಸಲಿದ್ದಾರೆ.

30. 2016 ಮಿಸ್ ಸುಪ್ರಾ ನ್ಯಾಷನಲ್ (Miss Supranational) ಕಿರೀಟವನ್ನು ಮುಡಿಗೇರಿಸಿಕೊಂಡವರು _____?

ಅ) ಶ್ರೀನಿಧಿ ಶೆಟ್ಟಿ

ಆ) ಶುಭಾ ಶೆಣೈ

ಇ) ಸೋನಿ ಸುಭಾಷ್

ಈ) ಮೇರಿ ಸಿಲೋನಿ

ಶ್ರೀನಿಧಿ ಶೆಟ್ಟಿ

ಕರಾವಳಿಯ ಚೆಲುವೆ ಶ್ರೀನಿಧಿ ರಮೇಶ್ ಶೆಟ್ಟಿ ಅವರು 2016ನೇ ಸಾಲಿನ "ಮಿಸ್ ಸುಪ್ರ ನ್ಯಾಶನಲ್' ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡಿದ್ದಾರೆ. ಪೋಲೆಂಡ್‌ನಲ್ಲಿ ನಡೆದ ಅಂತಿಮ ಸುತ್ತಿನಲ್ಲಿ ವಿಶ್ವಾದ್ಯಂತದ 71 ಸ್ಪರ್ಧಿಗಳನ್ನು ಹಿಂದಿಕ್ಕಿ ಮಂಗಳೂರು ತಾಲೂಕಿನ ಕಿನ್ನಿಗೋಳಿ ಸಮೀಪದ ತಾಳಿಪಾಡಿ ಗುತ್ತಿನ ಶ್ರೀನಿಧಿ ಸೌಂದರ್ಯ ರಾಣಿಯಾಗಿ ಹೊರಹೊಮ್ಮಿದರು. ಶ್ರೀನಿಧಿ ಅವರಿಗೆ ಕಳೆದ ಬಾರಿಯ ಸುಪ್ರಾ ನ್ಯಾಶನಲ್ ವಿಜೇತೆ ಪೆರುಗ್ವೆಯ ಸ್ಟೆಫಿನಾ ಸ್ಟಗ್ನಂ ಅವರು ಕಿರೀಟವನ್ನು ಧರಿಸಿದರು. ವೆನೆಜುವೆಲಾದ ವಲೇರಿಯಾ ಪ್ರಥಮ ರನ್ನರ್ ಅಪ್, ದಕ್ಷಿಣ ಅಮೆರಿಕದ ಪುಟ್ಟ ದೇಶ ಸುರಿನಾಮ್‌ನ ಜಲೀಸಾ ಪಿ. ಎರಡನೇ ರನ್ನರ್ ಅಪ್, ಶ್ರೀಲಂಕಾದ ಒರೆನಾ ಮರಿಯಂ ಜಯಸಿರಿ ಮೂರನೇ ರನ್ನರ್ ಅಪ್ ಹಾಗೂ ಹಂಗೇರಿಯ ಕೊರಿನಾ ಕೆ. ಅವರು ನಾಲ್ಕನೇ ರನ್ನರ್ ಅಪ್ ಆಗಿ ಮೂಡಿಬಂದರು. ಈ ಹಿಂದೆ 2014ರಲ್ಲಿ ಮಂಗಳೂರಿನ ಆಶಾ ಭಟ್ ಈ ಪ್ರಶಸ್ತಿಯನ್ನು ಪಡೆದಿದ್ದರು.

www.karunadueyams.com

31. ಇತ್ತೀಚೆಗೆ ದಕ್ಷಿಣ ಆಫ್ರಿಕಾದ ವ್ಯಾಪಾರ ಸಂಘಟನೆ “ಮರ್ಕೋಸರ್ (Mercosur)” ನಿಂದ ಯಾವ ದೇಶದ ಸದಸ್ಯತ್ವವನ್ನು ತೆಗೆದುಹಾಕಲಾಯಿತು?

ಅ) ವೆನೆಜುವೆಲಾ

ಆ) ಬ್ರೆಜಿಲ್

ಇ) ಅರ್ಜೇಂಟಿನಾ

ಈ) ಪರಾಗ್ವೆ

ವೆನೆಜುವೆಲಾ

ದಕ್ಷಿಣ ಆಫ್ರಿಕಾದ ಪ್ರಮುಖ ವ್ಯಾಪಾರ ಸಂಘಟನೆಯಾದ “ಮರ್ಕೋಸರ್”ನಿಂದ ವೆನೆಜುವೆಲಾ ರಾಷ್ಟ್ರದ ಸದಸ್ಯತ್ವವನ್ನು ತೆಗೆದುಹಾಕಲಾಗಿದೆ. ವೆನೆಜುವೆಲಾ 2012 ರಲ್ಲಿ ಸಂಘಟನೆಯನ್ನು ಸೇರುವ ಅವಧಿಯಲ್ಲಿ ವಿಧಿಸಲಾಗಿದ್ದ ನಿಯಮವನ್ನು ಪಾಲಿಸಲು ವಿಫಲವಾಗಿರುವ ಕಾರಣ ಸದಸ್ಯತ್ವ ರದ್ದುಮಾಡಲಾಗಿದೆ ಎನ್ನಲಾಗಿದೆ. ಮರ್ಕೋಸರ್ ದಕ್ಷಿಣ ಆಫ್ರಿಕಾದ ವ್ಯಾಪಾರ ಸಂಘಟನೆ. ಅರ್ಜೇಂಟಿನಾ, ಬ್ರೆಜಿಲ್, ಉರುಗ್ವೆ ಮತ್ತು ಪರಾಗ್ವೆ ಈ ಸಂಘಟನೆಯ ಸಂಸ್ಥಾಪನ ರಾಷ್ಟ್ರಗಳು.

32. 2016 ಕತಾರ್ ಓಪನ್ ಮಹಿಳಾ ಗಾಲ್ಫ್ ಚಾಂಪಿಯನ್ ಷಿಪ್‌ನಲ್ಲಿ ಪ್ರಶಸ್ತಿ ಗೆದ್ದ ಭಾರತದ ಗಾಲ್ಫ್ ಆಟಗಾರ್ತಿ ಯಾರು?

ಅ) ಕಿಶಿ ಸಿನ್ಹಾ

ಆ) ಅದಿತಿ ಅಶೋಕ್

ಇ) ಶರ್ಮಿಳಾ ನಿಕೊಲೆಟ್

ಈ) ವಾಣಿ

ಅದಿತಿ ಅಶೋಕ್

ಕರ್ನಾಟಕದ ಅದಿತಿ ಅಶೋಕ್ ಅವರು ಕತಾರ್ ಓಪನ್ ಮಹಿಳಾ ಗಾಲ್ಫ್ ಚಾಂಪಿಯನ್ ಷಿಪ್‌ನಲ್ಲಿ ಪ್ರಶಸ್ತಿ ಗೆದ್ದುಕೊಂಡರು. ಈ ಮೂಲಕ ಮಹಿಳಾ ಯುರೋಪಿಯನ್ ಟೂರ್‌ನಲ್ಲಿ ಸತತ ಎರಡು ಟ್ರೋಫಿ ಎತ್ತಿಹಿಡಿದ ಶ್ರೇಯಕ್ಕೆ ಪಾತ್ರರಾಗಿದ್ದಾರೆ. ಇದಕ್ಕೂ ಮುನ್ನ ಬೆಂಗಳೂರಿನ ಅದಿತಿ ಇಂಡಿಯನ್ ಓಪನ್‌ನಲ್ಲಿ ಚಾಂಪಿಯನ್ ಆಗಿದ್ದರು. ದೋಹಾ ಗಾಲ್ಫ್ ಕ್ಲಬ್‌ನಲ್ಲಿ ಅದಿತಿ ಅವರು ಲಿಡಿಯಾ ಹಾಲ್ ಮತ್ತು ಕ್ಯಾರೊಲಿನ್ ಹೆಡ್‌ವಾಲ್ ವಿರುದ್ಧ ಜಯ ಸಾಧಿಸಿದರು.

www.karunaduexams.com

33. ಅಂತಾರಾಷ್ಟ್ರೀಯ ಅಥ್ಲೆಟಿಕ್ ಫೆಡರೇಷನ್ (ಐಎಎಎಫ್) ವರ್ಷದ ಟ್ರ್ಯಾಕ್ ಮತ್ತು ಫೀಲ್ಡ್ ಅಥ್ಲೀಟ್ ಪ್ರಶಸ್ತಿ ಯಾರಿಗೆ ಲಭಿಸಿದೆ?

ಅ) ಟಾಮ್ ಬ್ರಾಡಿ

ಆ) ಉಸೇನ್ ಬೋಲ್ಟ್

ಇ) ಲೆಬ್ರಾನ್ ಜೇಮ್ಸ್

ಈ) ಕೆವಿನ್ ಡ್ಯುರಂಟ್

ಉಸೇನ್ ಬೋಲ್ಟ್

ಜಮೈಕಾದ

ಜಮೈಕಾದ ಓಟಗಾರ ಉಸೇನ್ ಬೋಲ್ಟ್ ಅವರು ಅಂತಾರಾಷ್ಟ್ರೀಯ ಅಥ್ಲೆಟಿಕ್ ಫೆಡರೇಷನ್ (ಐಎಎಎಫ್) ನೀಡುವ ವರ್ಷದ ಟ್ರ್ಯಾಕ್ ಮತ್ತು ಫೀಲ್ಡ್ ಅಥ್ಲೀಟ್ ಗೌರವಕ್ಕೆ ಭಾಜನರಾಗಿದ್ದಾರೆ. ಬೋಲ್ಟ್ ಆರನೇ ಬಾರಿ ಈ ಪ್ರಶಸ್ತಿ ಪಡೆ ಅಥ್ಲೀಟ್ ಎಂಬ ಶ್ರೇಯ ತಮ್ಮದಾಗಿಸಿಕೊಂಡಿದ್ದಾರೆ. ಒಲಿಂಪಿಕ್ಸ್‌ನ 10,000 ಮೀಟರ್ಸ್ ಓಟದಲ್ಲಿ ವಿಶ್ವ ದಾಖಲೆಯೊಂದಿಗೆ ಚಿನ್ನಕ್ಕೆ ಮುತ್ತಿಕ್ಕಿದ್ದ ಇಥಿಯೋಪಿಯಾದ ಅಲಮಜ್ ಅಯಾನ ಅವರು 'ವರ್ಷದ ಶ್ರೇಷ್ಠ ಮಹಿಳಾ ಅಥ್ಲೀಟ್' ಪ್ರಶಸ್ತಿ ಪಡೆದುಕೊಂಡಿದ್ದಾರೆ.

34. ಬೆಂಗಳೂರು ಕ್ರೀಡಾ ಬರಹಗಾರರ ಸಂಘವು (ಸ್ವಾಬ್) ಜೀವಮಾನ ಸಾಧನೆ ಪುರಸ್ಕಾರವನ್ನು ಪಡೆದುಕೊಂಡ ಭಾರತದ ಮಾಜಿ ಕ್ರಿಕೆಟ್ ಆಟಗಾರ ಯಾರು?

ಅ) ಅನಿಲ್ ಕುಂಬ್ಳೆ

ಆ) ಬಿ ಎಸ್ ಚಂದ್ರಶೇಖರ್

ಇ) ಸಚಿನ್ ತೆಂಡೂಲ್ಕರ್

ಈ) ಜಾವಗಲ್ ಶ್ರೀನಾಥ್

ಬಿ ಎಸ್ ಚಂದ್ರಶೇಖರ್

ಭಾರತ ಕ್ರಿಕೆಟ್ ತಂಡದ ಮಾಜಿ ಸ್ಪಿನ್ ಬೌಲರ್ ಬಿ.ಎಸ್. ಚಂದ್ರಶೇಖರ್ ಅವರಿಗೆ ಬೆಂಗಳೂರು ಕ್ರೀಡಾ ಬರಹಗಾರರ ಸಂಘವು (ಸ್ವಾಬ್) ಜೀವಮಾನ ಸಾಧನೆ ಪುರಸ್ಕಾರ ನೀಡಿ ಗೌರವಿಸಿದೆ.. ಸಂಘದ ವಾರ್ಷಿಕ ಪ್ರಶಸ್ತಿ ಪ್ರದಾನ ಕಾರ್ಯಕ್ರಮ ದಲ್ಲಿ ಐಸಿಸಿ ರೆಫರಿ ಜಾವಗಲ್ ಶ್ರೀನಾಥ್ ಅವರು ಚಂದ್ರಶೇಖರ್ ಅವರಿಗೆ ಪುರಸ್ಕಾರ ನೀಡಿದರು.

www.karunaduexams.com

35. ಇತ್ತೀಚೆಗೆ ಈ ಕೆಳಗಿನ ಯಾರು ಫಾರ್ಮೂಲಾ-1 ರೇಸ್ ವಿಶ್ವ ಚಾಂಪಿಯನ್ ಷಿಪ್ ಗೆ ನಿವೃತ್ತಿ ಘೋಷಿಸಿದರು?

ಅ) ಲೇವಿಸ್ ಹ್ಯಾಮಿಲ್ಟನ್

ಆ) ನಿಕೊ ರೊಸ್ಬರ್ಗ್

ಇ) ಸೆಬಾಸ್ಟಿಯನ್ ವೆಟ್ಟಲ್

ಈ) ಡೇವಿಡ್ ಜಾನ್

ನಿಕೊ ರೊಸ್ಬರ್ಗ್

ಫಾರ್ಮುಲಾ ಒನ್ ರೇಸ್‌ನ ವಿಶ್ವ ಚಾಂಪಿಯನ್ ನಿಕೊ ರೋಸ್‌ಬರ್ಗ್ ಅವರು ನಿವೃತ್ತಿ ಘೋಷಿಸಿದ್ದಾರೆ. ಅಂತರರಾಷ್ಟ್ರೀಯ ಆಟೊಮೊಬೈಲ್ ಫೆಡರೇಷನ್ (ಎಫ್‌ಐಎ) ಆಯೋಜಿಸಿದ್ದ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಜರ್ಮನಿಯ 31 ವರ್ಷದ ರೋಸ್‌ಬರ್ಗ್ ಅವರು ತಮ್ಮ ನಿವೃತ್ತಿಯ ವಿಷಯ ಬಹಿರಂಗಪಡಿಸಿದರು. ಇತ್ತೀಚೆಗೆ ಅವರು ಅಬುಧಾಬಿಯಲ್ಲಿ ನಡೆದಿದ್ದ ಗ್ರ್ಯಾನ್‌ಪ್ರಿ ರೇಸ್‌ನಲ್ಲಿ ವಿಶ್ವ ಕಿರೀಟ ಧರಿಸಿದ್ದರು.

36. 2016 ವಿಶ್ವ ಚೆಸ್ ಚಾಂಪಿಯನ್ ಷಿಪ್ ಗೆದ್ದವರು ಯಾರು?

ಅ) ಮ್ಯಾಗ್ನಸ್ ಕಾರ್ಲಸನ್

ಆ) ವಿಶ್ವನಾಥ್ ಆನಂದ್

ಇ) ಸರ್ಗೇಯ್ ಕರ್ಜಾಕಿನ್

ಈ) ಕೆಮರೂನ್ ಜಾಕ್

ಮ್ಯಾಗ್ನಸ್ ಕಾರ್ಲಸನ್

ವಿಶ್ವ ಚೆಸ್ ಜಗತ್ತಿನ ದೊರೆ ಮ್ಯಾಗ್ನಸ್ ಕಾರ್ಲ್ಸನ್ ರವರು ರಷ್ಯಾದ ಸರ್ಗೇಯ್ ಕರ್ಜಾಕಿನ್ ವಿರುದ್ಧ ಅದ್ಭುತ ಗೆಲುವು ಸಾಧಿಸುವ ಮೂಲಕ 2016 ವಿಶ್ವ ಚೆಸ್ ಚಾಂಪಿಯನ್ ಆಗಿ ಹೊರಹೊಮ್ಮಿದರು. ಚೆಸ್ ಜಗತ್ತಿನ ಅತಿ ಕಿರಿಯ ವಿಶ್ವ ಚಾಂಪಿ ಯನ್ ಎಂಬ ಹೆಗ್ಗಳಿಕೆ ಹೊಂದಿರುವ ನಾರ್ವೆಯ ಮ್ಯಾಗ್ನಸ್ ಕಾರ್ಲ್ಸನ್‌ಗೆ ಇದು ಸತತ 3ನೇ ವಿಶ್ವ ಚಾಂಪಿಯನ್‌ಶಿಪ್ ಪ್ರಶಸ್ತಿ. ಇದಕ್ಕೂ ಮುನ್ನ ಅವರು 2013, 2014ರಲ್ಲಿ ಭಾರತದ ವಿಶ್ವನಾಥನ್ ಆನಂದ್‌ರನ್ನು ಸೋಲಿಸಿ ಚಾಂಪಿಯನ್ ಆಗಿದ್ದರು.

www.karunaduexams.com

37. "ಎಂ-777 ಹೌವಿಟ್ಜರ್' ಫಿರಂಗಿಗಳನ್ನು ಖರೀದಿಸುವ ಸಲುವಾಗಿ ಭಾರತ ಯಾವ ದೇಶದೊಂದಿಗೆ ಸಹಿ ಹಾಕಿದೆ?

ಅ) ಅಮೆರಿಕ

ಆ) ರಷ್ಯಾ

ಇ) ಇಸ್ರೇಲ್

ಈ) ಜಪಾನ್

ಅಮೆರಿಕ

ಭಾರತ 145 "ಎಂ-777 ಹೌವಿಟ್ಜರ್" ಫಿರಂಗಿಗಳನ್ನು ಅಮೆರಿಕದಿಂದ ಖರೀದಿಸಲು ಸಹಿ ಹಾಕಿದೆ. ಅಮೆರಿಕದ ಬಿಎಇ ಸಿಸ್ಟಮ್ಸ್ ಈ ಫಿರಂಗಿಗಳನ್ನು ಅಭಿವೃದ್ದಿಪಡಿಸಿದೆ. ಮ2017ರ ಮಧ್ಯಂತರದ ನಂತರ 155 ಎಂಎಂ ಸಾಮರ್ಥ್ಯದ 145 "ಎಂ-777 ಹೌವಿಟ್ಜರ್' ಫಿರಂಗಿಗಳು ಭಾರತದಿಂದ ಖರೀದಿಯಾಗಿವೆ. ಇದುನಸುಮಾರು 5,500 ಕೋಟಿ ರೂ. ಮೊತ್ತದ ಒಪ್ಪಂದ ಆಗಲಿದೆ ಎನ್ನಲಾಗಿದೆ.

38. 2016 ಮಿಸ್ಟರ್ ಸುಪ್ರಾನ್ಯಾಷನಲ್ ಕಿರೀಟ ಗೆದ್ದ "ಡಿಯಾಗೋ ಗಾರ್ಸಿ" ಯಾವ ದೇಶದವರು?

ಅ) ಮೆಕ್ಸಿಕೊ

ಆ) ಭಾರತ

ಇ) ಅಮೆರಿಕ

ಈ) ರಷ್ಯಾ

ಮೆಕ್ಸಿಕೊ

ಮೆಕ್ಸಿಕೊದ "ಡಿಯಾಗೋ ಗಾರ್ಸಿ" ರವರು 2016 ಮಿಸ್ಟರ್ ಸುಪ್ರಾನ್ಯಾಷನಲ್ ಕಿರೀಟವನ್ನು ಮುಡಿಗೇರಿಸಿಕೊಂಡರು. ಭಾರತದ ಜಿತೇಶ್ ಠಾಕೂರ್ ರವರು ಎರಡನೇ ಸ್ಥಾನವನ್ನು ಪಡೆದುಕೊಂಡು ರನ್ನರ್ ಆಫ್ ಆದರು. ಮಿಸ್ ಸುಪ್ರಾನ್ಯಾಷನಲ್ ಕಿರೀಟವನ್ನು ಕರ್ನಾಟಕದ ಶ್ರೀನಿಧಿ ಶೆಟ್ಟಿ ತಮ್ಮದಾಗಿಸಿಕೊಂಡರು.

www.karunaduexams.com

39. ಮಹಾ ವಾಜಿರಲಾಂಗ್‌ಕೊರ್ನ್ ರವರು ಯಾವ ದೇಶದ ಹೊಸ ರಾಜನಾಗಿ ಘೋಷಿಸಲಾಗಿದೆ?

ಅ) ಥಾಯ್ಲೆಂಡ್

ಆ) ಇರಾನ್

ಇ) ಯುಎಇ

ಈ) ಭೂತಾನ್

ಥಾಯ್ಲೆಂಡ್

ಥಾಯ್ಲೆಂಡ್‌ನ ಹೊಸ ರಾಜನಾಗಿ ಯುವರಾಜ ಮಹಾ ವಾಜಿರಲಾಂಗ್‌ಕೊರ್ನ್ ಅವರ ಹೆಸರನ್ನು ಘೋಷಿಸಲಾಗಿದೆ. ಅತಿಹೆಚ್ಚು ಅವಧಿಗೆ ಸಿಂಹಾಸನ ಅಲಂಕರಿಸಿದ್ದ ಹೆಗ್ಗಳಿಕೆಗೆ ಪಾತ್ರರಾಗಿದ್ದ ಥಾಯ್ಲೆಂಡ್ ರಾಜ ಭೂಮಿಬೊಲ್ ಅದುಲ್ಯದೇಜ್ ಅವರು ಇತ್ತೀಚೆಗೆ ಮೃತಪಟ್ಟಿದ್ದರು.ವಾಜಿರಲಾಂಗ್‌ಕೊರ್ನ್ ಅವರು ಚಕ್ರಿ ವಂಶದ 10ನೇ ದೊರೆಯಾಗಿ ಅಧಿಕಾರ ವಹಿಸಿಕೊಳ್ಳುವಂತೆ ರಾಷ್ಟ್ರೀಯ ಶಾಸಕಾಂಗ ಸಭೆಯ ಮುಖ್ಯಸ್ಥ ಪ್ರಯೂತ್ ಚಾನ್ ಒ ಚಾತ್ ಅವರು ಆಹ್ವಾನ ನೀಡಿದರು. ಇದನ್ನು ವಾಜಿರಲಾಂಗ್‌ಕೊರ್ನ್ ಒಪ್ಪಿಕೊಂಡಿದ್ದಾರೆ.

40. ಇತ್ತೀಚೆಗೆ ನಿಧನರಾದ ‘‘ಫುಲೆಲ್ ಸಿಂಗ್ ಸುಜ್ಲಾನ’’ ಯಾವ ಕ್ರೀಡೆಯ ಮಾಜಿ ಅಂತಾರಾಷ್ಟ್ರೀಯ ಅಂಪೈರ್?

ಅ) ಕ್ರಿಕೆಟ್

ಆ) ಹಾಕಿ

ಇ) ಬಾಕ್ಸಿಂಗ್

ಈ) ಬ್ಯಾಡ್ಮಿಂಟನ್

ಹಾಕಿ

41. “ವಿಶ್ವ ಪ್ರಭಾವಿ ಭಾಷಾ ಸೂಚ್ಯಂಕ (World Power Language Index)-2016” ಪ್ರಕಾರ ವಿಶ್ವದ ಅತ್ಯಂತ ಪ್ರಭಾವಿ ಭಾಷೆ ಯಾವುದು?
ಅ) ಇಂಗ್ಲೀಷ್
ಆ) ಫ್ರೆಂಚ್
ಇ) ಸ್ಪಾನಿಷ್
ಈ) ಹಿಂದಿ
ಇಂಗ್ಲೀಷ್
ವಿಶ್ವ ಪ್ರಭಾವಿ ಭಾಷಾ ಸೂಚ್ಯಂಕ-2016 ಪ್ರಕಾರ ಇಂಗ್ಲೀಷ್ ಭಾಷೆ ವಿಶ್ವದ ಅತ್ಯಂತ ಪ್ರಭಾವಿ ಭಾಷೆಯಾಗಿ ಹೊರಹೊಮ್ಮಿದ್ದು, ಸೂಚ್ಯಂಕದಲ್ಲಿ ಪ್ರಥಮ ಸ್ಥಾನ ಗಿಟ್ಟಿಸಿಕೊಂಡಿದೆ. ವಿಶ್ವ ಪ್ರಭಾವಿ ಭಾಷ್ಯ ಸೂಚ್ಯಂಕವನ್ನು ವಿಶ್ವ ಆರ್ಥಿಕ ವೇದಿಕೆ ಹೊರತಂದಿದೆ. ಜಿ-7 ಗುಂಪಿನ ರಾಷ್ಟ್ರಗಳ ಪೈಕಿ ಯುಎಸ್, ಯುಕೆ ಮತ್ತು ಕೆನಡಾದಲ್ಲಿ ಇಂಗ್ಲೀಷ್ ಭಾಷೆ ಅತಿ ಹೆಚ್ಚು

www.karunaduexams.com

ಪ್ರಾತಿನಿಧ್ಯ ಹೊಂದಿದೆ. ಸೂಚ್ಯಂಕದಲ್ಲಿ ಇಂಗ್ಲೀಷ್ ನಂತರ ಮ್ಯಾಂಡ್ರಿನ್, ಫ್ರೆಂಚ್ ಮತ್ತು ಸ್ಪಾನಿಷ್ ಭಾಷೆಗಳು ಸ್ಥಾನ ಪಡೆದಿವೆ.

42. ಈ ಕೆಳಗಿನ ಯಾರು ಉಜ್ಬೇಕಿಸ್ತಾನದ ನೂತನ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ?
ಅ) ಶವ್ಕತ್ ಮಿರ್ಝಿಯೊಯೆವ್
ಆ) ನರಿಮೊನ್ ಉಮರೊವ್
ಇ) ಇಸ್ಲಾಂ ಕರಿಮೊವ್
ಈ) ಬೆಂಜಮಿನ್ ಉಮರೊವ್
ಶವ್ಕತ್ ಮಿರ್ಝಿಯೊಯೆವ್
ಉಜ್ಬೇಕಿಸ್ತಾನದ ಹಂಗಾಮಿ ಅಧ್ಯಕ್ಷರಾದ ಶವ್ಕತ್ ಮಿರ್ಝಿಯೊಯೆವ್ ರವರು ನೂತನ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. ಉಜ್ಬೇಕಿಸ್ತಾನದ ಅಧ್ಯಕ್ಷರಾಗಿದ್ದ ಇಸ್ಲಾಂ ಕರಿಮೊವ್ ನಿಧನರಾದ ನಂತರ ನಡೆದ ಅಧ್ಯಕ್ಷೀಯ ಚುನಾವಣೆಯಲ್ಲಿ ಶವ್ಕತ್ ರವರು ಜಯಶೀಲರಾಗುವ ಮೂಲಕ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ.

43. ಈ ಕೆಳಗಿನ ಯಾವ ಕಂಪನಿಗಳು ದೇಶದ ಅತಿ ದೊಡ್ಡ ತೈಲ ಶುದ್ದೀಕರಣ ಘಟಕ ಸ್ಥಾಪಿಸಲು ಒಪ್ಪಂದಕ್ಕೆ ಸಹಿ ಹಾಕಿವೆ?
I) ಇಂಡಿಯನ್ ಆಯಿಲ್ ಕಾರ್ಪೋರೇಷನ್
II) ಭಾರತ್ ಪೆಟ್ರೋಲಿಯಂ ಕಾರ್ಪೋರೇಷನ್
III) ರಿಲಾಯನ್ಸ್ ಕಾರ್ಪೋರೇಷನ್
IV) ಹಿಂದೂಸ್ತಾನ್ ಪೆಟ್ರೋಲಿಯಂ ಕಾರ್ಪೋರೇಷನ್
ಈ ಕೆಳಗೆ ನೀಡಿರುವ ಕೋಡ್ ಮೂಲಕ ಸರಿಯಾದ ಉತ್ತರವನ್ನು ಗುರುತಿಸಿ:
ಅ) I, II & III
ಆ) I, III & IV
ಇ) I, III & IV
ಈ) I, II, III & IV
I, III & IV
ಇಂಡಿಯನ್ ಆಯಿಲ್ ಕಾರ್ಪೋರೇಷನ್, ಭಾರತ್ ಪೆಟ್ರೋಲಿಯಂ ಕಾರ್ಪೋರೇಷನ್ ಮತ್ತು ಹಿಂದೂಸ್ತಾನ್ ಪೆಟ್ರೋಲಿಯಂ ಕಾರ್ಪೋರೇಷನ್ ದೇಶದ ಅತಿ ದೊಡ್ಡ ತೈಲ ಶುದ್ದೀಕರಣ ಘಟಕ ಸ್ಥಾಪಿಸಲು ಒಪ್ಪಂದಕ್ಕೆ ಸಹಿಹಾಕಿವೆ. ಈ ಯೋಜನೆಯ ಅಂದಾಜು ವೆಚ್ಚ $ 30 ಬಿಲಿಯನ್.

44. ಈ ಕೆಳಗಿನ ಯಾರು “2016 ಏಷ್ಯಾ ವರ್ಷದ ವ್ಯಕ್ತಿ(Asian of the Year)” ಗೌರವಕ್ಕೆ ಪಾತ್ರರಾಗಿದ್ದಾರೆ?
ಅ) ರತನ್ ಟಾಟ
ಆ) ನರೇಂದ್ರ ಮೋದಿ
ಇ) ಸಚಿನ್ ಬನ್ಸಲ್
ಈ) ಮುಖೇಶ್ ಅಂಬಾನಿ
ಸಚಿನ್ ಬನ್ಸಲ್
ಸಿಂಗಾಪುರ ಮೂಲದ “ದಿ ಸ್ಟೈಟ್ ಟೈಮ್ಸ್” ಸುದ್ದಿಪತ್ರಿಕೆಯು ಫ್ಲಿಫ್ ಕಾರ್ಟ್ ಸಂಸ್ಥೆಯ ಸಂಸ್ಥಾಪಕರಾದ ಸಚಿನ್ ಬನ್ಸಲ್ ಮತ್ತು ಬಿನ್ನಿ ಬನ್ಸಲ್ ರವರನ್ನು ಜಂಟಿಯಾಗಿ “2016



www.karunaduexams.com

ಏಷ್ಯಾ ವರ್ಷದ ವ್ಯಕ್ತಿ" ಎಂದು ಬಣ್ಣಿಸಿದೆ. ಅತ್ಯುತ್ತಮ ತಂತ್ರಜ್ಞಾನ ಬಳಸಿ ಗ್ರಾಹಕರಿಗೆ ಉಪಯೋಗವಾಗುವ ಉದ್ದಿಮೆಯನ್ನು ಆರಂಭಿಸಿದವರಿಗೆ ಈ ಪ್ರಶಸ್ತಿಯನ್ನು ನೀಡಲಾಗುತ್ತದೆ.

45. 2016 "ವಿಶ್ವ ಮಣ್ಣು ದಿನ"ದ ಧ್ಯೇಯ ವಾಕ್ಯ ________?

ಅ) Soils, a solid ground for life

ಆ) Soils and Pulses, a symbiosis for life

ಇ) Soil is precious as water

ಈ) Protect soil for feature

Soils and Pulses, a symbiosis for life

ವಿಶ್ವ ಮಣ್ಣು ದಿನವನ್ನು ಪ್ರತಿವರ್ಷ ಡಿಸೆಂಬರ್ 5 ರಂದು ಆಚರಿಸಲಾಗುತ್ತದೆ. ಪ್ರತಿಯೊಬ್ಬ ವ್ಯಕ್ತಿಯ ಜೀವಿಕ್ಕೆ ಮಣ್ಣಿನ ಅಗತ್ಯತೆ ಬಗ್ಗೆ ಅರಿವು ಮೂಡಿಸುವುದು ಈ ದಿನದ ಉದ್ದೇಶ. Soils and Pulses, a symbiosis for life ಇದು ಈ ವರ್ಷದ ವಿಶ್ವ ಮಣ್ಣಿನ ದಿನದ ಧ್ಯೇಯವಾಕ್ಯ.

46. "2016 ಇಂದ್ರ ನೌಕಪಡೆ" ಸಮರಭ್ಯಾಸ ಭಾರತ ಮತ್ತು ಯಾವ ದೇಶದ ನಡುವೆ ನಡೆಯಲಿದೆ?

ಅ) ಜಪಾನ್

ಆ) ರಷ್ಯಾ

ಇ) ಶ್ರೀಲಂಕಾ

ಈ) ಆಸ್ಟ್ರೇಲಿಯಾ

ರಷ್ಯಾ

2016 ಇಂದ್ರ ನೌಕಪಡೆ ಸಮರಭ್ಯಾಸ ಭಾರತ ಮತ್ತು ರಷ್ಯಾ ನಡುವೆ ಡಿಸೆಂಬರ್ 14 ರಿಂದ 21 ರವರೆಗೆ ವಿಶಾಖಪಟ್ಟಣ ಮತ್ತು ಬಂಗಾಳ ಕೊಲ್ಲಿಯಲ್ಲಿ ನಡೆಯಲಿದೆ. ಕರಾವಳಿ ತೀರಾ ಮತ್ತು ಸಾಗರದಲ್ಲಿ ಎರಡು ಹಂತದಲ್ಲಿ ಈ ಸಮರಭ್ಯಾಸ ನಡೆಯಲಿದೆ. ಡಿಸೆಂಬರ್ 14-18 ರವರೆಗೆ ವಿಶಾಖಪಟ್ಟಣದಲ್ಲಿ ಹಾಗೂ ಡಿಸೆಂಬರ್ 19-21 ರವರೆಗೆ ಬಂಗಾಳ ಕೊಲ್ಲಿಯಲ್ಲಿ ನಡೆಯಲಿದೆ.

47. ನಾಗರಿಕ ವಿಮಾನಯಾನ ನಿರ್ದೇಶನಾಲಯದ ನೂತನ ಮುಖ್ಯಸ್ಥರಾಗಿ ಯಾರು ನೇಮಗೊಂಡಿದ್ದಾರೆ?

ಅ) ಸುರೇಂದ್ರ

ಆ) ಬಿ ಎಸ್ ಬುಲ್ಲರ್

ಇ) ಸತ್ಯೇಂದ್ರ ವರ್ಮಾ

ಈ) ಚಂದ್ರಬಾಬು ನಾಯಕ್

ಬಿ ಎಸ್ ಬುಲ್ಲರ್

ಬಿ ಎಸ್ ಬುಲ್ಲರ್, 1986ನೇ ಬ್ಯಾಚ್ ಐಎಎಸ್ ಅಧಿಕಾರಿ ರವರನ್ನು ನಾಗರಿಕ ವಿಮಾನಯಾನ ನಿರ್ದೇಶನಾಲಯದ ನೂತನ ಮುಖ್ಯಸ್ಥರನ್ನಾಗಿ ನೇಮಕ ಮಾಡಲಾಗಿದೆ. ಕಳೆದ ನಾಲ್ಕು ತಿಂಗಳಿಂದ ಈ ಹುದ್ದೆ ಖಾಲಿ ಉಳಿದಿತ್ತು. ನಾಗರಿಕ ವಿಮಾನಯಾನಕ್ಕೆ ಸಂಬಂಧಿಸಿದಂತೆ ಸುರಕ್ಷತೆ ಗುಣಮಟ್ಟ ಅನುಷ್ಠಾನ, ಕಾರ್ಯಾಚರಣೆ ಮತ್ತು ಸಿಬ್ಬಂದಿಗೆ ತರಭೇತಿ ನೀಡುವುದು ಹೊಣೆಗಾರಿಕೆಯನ್ನು ನಿರ್ದೇಶನಾಲಯ ಹೊಂದಿದೆ.

www.karunaduexams.com

48. ಫೋರ್ಬ್ಸ್ ನಿಯತಕಾಲಿಕೆ ಪ್ರಕಾರ ಅತ್ಯಧಿಕ ಸಂಭಾವನೆ ಪಡೆಯುವ ಸಾರ್ವಕಾಲಿಕ ಕ್ರೀಡಾಪಟು ಯಾರು?
ಅ) ಟೈಗರ್ ವುಡ್
ಆ) ಕ್ರಿಸ್ಟಿಯಾನೋ ರೊನಾಲ್ಡೊ
ಇ) ಟೈಗರ್ ವುಡ್ಸ್
ಈ) ಮೈಕೆಲ್ ಜೋರ್ಡನ್
ಮೈಕೆಲ್ ಜೋರ್ಡನ್
ಮಾಜಿ ಬ್ಯಾಸ್ಕೆಟ್ ಬಾಲ್ ಆಟಗಾರ ಮೈಕೆಲ್ ಜೋರ್ಡನ್ ರವರು ಅತ್ಯಧಿಕ ಸಂಭಾವನೆ ಪಡೆಯುವ ಸಾರ್ವಕಾಲಿಕ ಕ್ರೀಡಾಪಟು ಎಂದು ಫೋರ್ಬ್ಸ್ ನಿಯತಕಾಲಿಕೆ ಬಣ್ಣಿಸಿದೆ. ಟೈಗರ್ ವುಡ್, ಲಿಯೊನೆಲ್ ಮೆಸ್ಸಿ ಮತ್ತು ಕ್ರಿಸ್ಟಿಯಾನೋ ರೊನಾಲ್ಡೊ ಅತ್ಯಧಿಕ ಸಂಭಾವನೆ ಪಡೆಯುವ ಆಟಗಾರರಾಗಿದ್ದಾರೆ.

49. "ಬರ್ನಾಡ್ ಕಝೆನುವೆ (Bernard Cazeneuve)" ಯಾವ ದೇಶದ ನೂತನ ಪ್ರಧಾನಿಯಾಗಿ ಆಯ್ಕೆಯಾಗಿದ್ದಾರೆ?
ಅ) ಸ್ಪೇನ್
ಆ) ಫ್ರಾನ್ಸ್
ಇ) ಮೆಕ್ಸಿಕೊ
ಈ) ನ್ಯೂಜಿಲ್ಯಾಂಡ್
ಫ್ರಾನ್ಸ್
ಬರ್ನಾಡ್ ಕಝೆನುವೆ ರವರನ್ನು ಫ್ರಾನ್ಸ್ ನ ನೂತನ ಪ್ರಧಾನಿಯಾಗಿ ನೇಮಕ ಮಾಡಲಾಗಿದೆ. ಮ್ಯಾನುಯೆಲ್ ವಾಲ್ಸ್ ರವರು 2017 ರಲ್ಲಿ ನಡೆಯಲಿರುವ ಅಧ್ಯಕ್ಷೀಯ ಚುನಾವಣೆಗೆ ಸ್ಪರ್ಧಿಸುವ ಸಲುವಾಗಿ ಪ್ರಧಾನಿ ಹುದ್ದೆಗೆ ರಾಜೀನಾಮೆ ನೀಡಿದ ಕಾರಣ ಪ್ರಧಾನಿ ಹುದ್ದೆ ತೆರವಾಗಿತ್ತು.

50. "ಮಂಚರ್ ಸರೋವರ (Manchar Lake)" ಯಾವ ದೇಶದ ಅತಿ ದೊಡ್ಡ ಸರೋವರ?
ಅ) ಪಾಕಿಸ್ತಾನ
ಆ) ಬಾಂಗ್ಲದೇಶ
ಇ) ನೇಪಾಳ
ಈ) ಶ್ರೀಲಂಕಾ
ಪಾಕಿಸ್ತಾನ
ಮಂಚರ್ ಸರೋವರ ಪಾಕಿಸ್ತಾನದ ಅತಿ ದೊಡ್ಡ ಹಾಗೂ ಏಷ್ಯಾದ ದೊಡ್ಡ ಸಿಹಿ ನೀರಿನ ಸರೋವರಗಳಲ್ಲಿ ಒಂದಾಗಿದೆ. ಸಿಂಧ್ ನ ಜಮಶೊರೊ ಜಿಲ್ಲೆಯಲ್ಲಿ ಈ ಸರೋವರ ಇದೆ.

51. ಈ ಕೆಳಗಿನ ಯಾವ ಲೋಕಸಭಾ ಕ್ಷೇತ್ರ ಪ್ರತಿಯೊಬ್ಬರಿಗೂ ಆರೋಗ್ಯ ವಿಮೆ ಕಲ್ಪಿಸಿದ ದೇಶದ ಮೊದಲ ಲೋಕಸಭಾ ಕ್ಷೇತ್ರವಾಗಿದೆ?
ಅ) ಚಿಕ್ಕಬಳ್ಳಾಪುರ
ಆ) ವಾರಂಗಲ್
ಇ) ವಿಜಯವಾಡ
ಈ) ಔರಂಗಬಾದ್
ವಿಜಯವಾಡ

www.karunaduexams.com

ವಿಜಯವಾಡ ಲೋಕಸಭಾ ಕ್ಷೇತ್ರ ಪ್ರತಿಯೊಬ್ಬರಿಗೂ ಆರೋಗ್ಯ ವಿಮೆ ಕಲ್ಪಿಸಿದ ದೇಶದ ಮೊದಲ ಲೋಕಸಭಾ ಕ್ಷೇತ್ರವಾಗಿದೆ. ಈ ಕ್ಷೇತ್ರದಲ್ಲಿ ಹುಟ್ಟಿದ ಮಗುವಿನಿಂದ ಹಿರಿಯ ನಾಗರಿಕರವರಿಗೆ ಪ್ರತಿಯೊಬ್ಬರು ವಿಮೆಯನ್ನು ಹೊಂದಿದ್ದಾರೆ. ವಿಜಯವಾಡ ಲೋಕಸಭಾ ಕ್ಷೇತ್ರ 245 ಹಳ್ಳಿಗಳನ್ನು ಹೊಂದಿದೆ. ಆಂಧ್ರ ಪ್ರದೇಶ ಸರ್ಕಾರ ಟಾಟಾ ಟ್ರಸ್ಟ್ ಸಹಯೋಗದೊಂದಿಗೆ "ಸ್ವಸ್ಥ ಕುಟುಂಬಂ" ಆರೋಗ್ಯ ವಿಮೆ ಯೋಜನೆಯನ್ನು ಜಾರಿಗೆ ತಂದಿದ್ದು, ಇತ್ತೀಚೆಗಷ್ಟೇ ವಿಜಯವಾಡದಲ್ಲಿ ಅನುಷ್ಠಾನಗೊಳಿಸಲಾಗಿತ್ತು.

52. ಡಾ. ಬಿ.ಆರ್.ಅಂಬೇಡ್ಕರ್ ಜನ್ಮದಿನವನ್ನು ಯಾವ ದಿನವೆಂದು ಆಚರಿಸಲು ತೀರ್ಮಾನಿಸಲಾಗಿದೆ?
ಅ) ವಾಯು ದಿನ
ಆ) ಜಲ ದಿನ
ಇ) ವನ್ಯಜೀವಿ ದಿನ
ಈ) ಕಾನೂನು ದಿನ
ಜಲ ದಿನ
ಡಾ. ಬಿ. ಆರ್. ಅಂಬೇಡ್ಕರ್ ಜನ್ಮದಿನವಾದ ಏಪ್ರಿಲ್ 14 ರಂದು ಜಲ ದಿನವೆಂದು ದೇಶದಾದ್ಯಂತ ಆಚರಿಸಲು ತೀರ್ಮಾನಿಸಲಾಗಿದೆ. ಜಲ ಸಂರಕ್ಷಣೆಗೆ ಅಂಬೇಡ್ಕರ್ ನೀಡಿರುವ ಕೊಡುಗೆಯನ್ನು ಸ್ಮರಿಸಲು ಈ ದಿನವನ್ನು ಜಲ ದಿನವೆಂದು ಆಚರಿಸಲಾಗುವುದು. ಕೇಂದ್ರ ಜಲ ಸಂಪನ್ಮೂಲ, ನದಿ ಅಭಿವೃದ್ದಿ ಮತ್ತು ಗಂಗಾ ಪುನರ್ ಜ್ಜೀವನ ಸಚಿವೆ ಉಮಾ ಭಾರತಿರವರು ಈ ವಿಷಯವನ್ನು ಖಚಿತಪಡಿಸಿದ್ದಾರೆ.

53. ಸಿಐಐ ನೀಡುವ "ರಾಷ್ಟ್ರೀಯ ಗುಣಮಟ್ಟ ಪ್ರಶಸ್ತಿ"ಯನ್ನು 2016ನೇ ಸಾಲಿಗೆ ಯಾವ ಸಂಸ್ಥೆಗೆ ನೀಡಲಾಗಿದೆ?
ಅ) ಬಿಇಎಂಎಲ್
ಆ) ಹೆಚ್ಎಎಲ್
ಇ) ಬಿಇಎಲ್
ಈ) ಇಸ್ರೋ
ಬಿಇಎಂಎಲ್
ಕಾನ್ಫೆಡರೇಷನ್ ಆಫ್ ಇಂಡಿಯನ್ ಇಂಡಸ್ಟ್ರೀಸ್ (ಸಿಐಐ) ಮತ್ತು ಎಕ್ಸಪೋರ್ಟ್-ಇಂಪೋರ್ಟ್ ಬ್ಯಾಂಕ್ (EXIM) ಜಂಟಿಯಾಗಿ ನೀಡುವ "ರಾಷ್ಟ್ರೀಯ ಗುಣಮಟ್ಟ ಪ್ರಶಸ್ತಿ"ಯನ್ನು ಪ್ರಸ್ತಕ ಸಾಲಿನಲ್ಲಿ ಭಾರತ್ ಅರ್ಥ್ ಮೂವರ್ಸ್ ಲಿಮಿಟೆಡ್ (ಬಿಇಎಂಎಲ್)ಗೆ ನೀಡಲಾಗಿದೆ.

54. ಈ ಕೆಳಗಿನ ಯಾವ ಬ್ಯಾಂಕ್ "ಅತ್ಯುತ್ತಮ ಎಂಎಸ್ಎಂಇ" ಬ್ಯಾಂಕ್ ಪುರಸ್ಕಾರ ಪಡೆದುಕೊಂಡಿದೆ?
ಅ) ಸಿಂಡಿಕೇಟ್ ಬ್ಯಾಂಕ್
ಆ) ಕರ್ಣಾಟಕ ಬ್ಯಾಂಕ್
ಇ) ಕೆನರಾ ಬ್ಯಾಂಕ್
ಈ) ವಿಜಯಾ ಬ್ಯಾಂಕ್
ಕರ್ಣಾಟಕ ಬ್ಯಾಂಕ್
ಅಸೋಸಿಯೆಟೆಡ್ ಚೇಂಬರ್ಸ್ ಆಫ್ ಕಾಮರ್ಸ್ ಅಂಡ್ ಇಂಡಸ್ಟ್ರೀಸ್ ಆಫ್ ಇಂಡಿಯಾ (ಅಸೋಚಾಂ) ನೀಡುವ ಅತ್ಯುತ್ತಮ ಎಂಎಸ್ಎಂಇ ಬ್ಯಾಂಕ್ ಪುರಸ್ಕಾರವನ್ನು

www.karunaduexams.com

ಪಡೆದುಕೊಂಡಿದೆ. ದೆಹಲಿಯಲ್ಲಿ ನಡೆದ ಸಮಾರಂಭದಲ್ಲಿ ಕೇಂದ್ರ ಸರ್ಕಾರದ ಎಂಎಸ್ಎಂಇ ಸಚಿವಾಲಯದ ಉಪಸಚಿವ ಪರತಿಭಾಯಿ ಚೌಧರಿ ಪ್ರಶಸ್ತಿಯನ್ನು ವಿತರಿಸಿದರು.

55. ಇತ್ತೀಚೆಗೆ ನಿಧನರಾದ ಶ್ರೀನಿವಾಸ ಅಯ್ಯರ್ ರಾಮಸ್ವಾಮಿ ಯಾವ ಕ್ಷೇತ್ರಕ್ಕೆ ಸಂಬಂಧಿಸಿದ್ದಾರೆ?
ಅ) ಕಲೆ
ಆ) ಪತ್ರಿಕೋದ್ಯಮ
ಇ) ವಿಜ್ಞಾನ ಮತ್ತು ತಂತ್ರಜ್ಞಾನ
ಈ) ಸಂಗೀತ
ಪತ್ರಿಕೋದ್ಯಮ
ಪತ್ರಕರ್ತ, ರಾಜಕೀಯ ವಿಶ್ಲೇಷಕ, ಹಾಸ್ಯ ನಟ, ಚೋ ರಾಮಸ್ವಾಮಿ ನಿಧನರಾದರು. ರಾಮಸ್ವಾಮಿ ರವರು ರಾಜ್ಯಸಭಾ ಸದಸ್ಯ, ತಮಿಳುನಾಡು ಮಾಜಿ ಸಿಎಂ ದಿ.ಜಯಲಲಿತಾ ಅವರ ಹಿತೈಷಿಯೂ ಆಗಿದ್ದರು. ತುಘಲಕ್ ಪತ್ರಿಕೆಯ ಸ್ಥಾಪಕ ಸಂಪಾದಕರಾಗಿ ಕಾರ್ಯನಿರ್ವಹಿಸಿದ್ದ ಚೋ ರಾಮಸ್ವಾಮಿ ಅವರು ಕಠಿಣ ರಾಜಕೀಯ ವಿಮರ್ಶೆಗಳಿಗೆ ಖ್ಯಾತಿ ಪಡೆದಿದ್ದರು.

56. "ರಿಸೋರ್ಸ್‌ಸ್ಯಾಟ್–2 ಎ" ಉಪಗ್ರಹವನ್ನು ಈ ಕೆಳಗಿನ ಯಾವ ರಾಕೆಟ್ ಬಳಸಿ ಯಶಸ್ವಿಯಾಗಿ ಉಡಾಯಿಸಲಾಯಿತು?
ಅ) ಪಿಎಸ್ಎಲ್‌ವಿ– ಸಿ 23
ಆ) ಪಿಎಸ್ಎಲ್‌ವಿ– ಸಿ 36
ಇ) ಪಿಎಸ್ಎಲ್‌ವಿ– ಡಿ 16
ಈ) ಪಿಎಸ್ಎಲ್‌ವಿ– ಸಿ 40
ಪಿಎಸ್ಎಲ್‌ವಿ– ಸಿ 36
ಭಾರತೀಯ ಕೃಷಿ ಕ್ಷೇತ್ರಕ್ಕೆ ಹೆಚ್ಚಿನ ಪ್ರಯೋಜನವಾಗಬಲ್ಲ ದೂರ ಸಂವೇದಿ ಉಪಗ್ರಹ 'ರಿಸೋರ್ಸ್‌ಸ್ಯಾಟ್–2 ಎ' ಅನ್ನು ಸತೀಶ್ ಧವನ್ ಬಾಹ್ಯಾಕಾಶ ಕೇಂದ್ರದಲ್ಲಿ ಯಶಸ್ವಿಯಾಗಿ ಉಡಾಯಿಸಲಾಯಿತು. 1235 ಕೆ.ಜಿ ತೂಕದ ಮೂರು ಹಂತಗಳ ಕ್ಯಾಮೆರಾ ವ್ಯವಸ್ಥೆಯ ಪೇಲೋಡ್‌ಗಳನ್ನು ಹೊತ್ತ ಪಿಎಸ್ಎಲ್‌ವಿ– ಸಿ 36 ರಾಕೆಟ್ ನಿಗದಿತ ಸಮಯಕ್ಕೆ ಸರಿಯಾಗಿ ನಭಕ್ಕೆ ಜಿಗಿಯಿತು. ಇದರೊಂದಿಗೆ ಪಿಎಸ್ಎಲ್‌ವಿ ಉಡ್ಡಯನ ವಾಹನವು 38 ನೇ ಉಡಾವಣಾ ಹೆಗ್ಗಳಿಕೆಗೂ ಪಾತ್ರವಾಯಿತು.

57. ಪಾಕಿಸ್ತಾನದ ನೂತನ ಮುಖ್ಯ ನ್ಯಾಯಾಧೀಶರಾಗಿ ಯಾರನ್ನು ನೇಮಕ ಮಾಡಲಾಗಿದೆ?
ಅ) ಮಿಯಾನ್ ಸಾಕ್ವಿಬ್ ನಿಸಾರ್
ಆ) ಅನ್ವರ್ ಜಹೀರ್ ಜಮಲಿ
ಇ) ಮಿಯಾಂದರ್ ಸಾಹೀಬ್
ಈ) ಖುರ್ದಿಷ್ ಖಾನ್ ಜಮಲಿ
ಮಿಯಾನ್ ಸಾಕ್ವಿಬ್ ನಿಸಾರ್
ನ್ಯಾಯಮೂರ್ತಿ ಮಿಯಾನ್ ಸಾಕ್ವಿಬ್ ನಿಸಾರ್ ರವರು ಪಾಕಿಸ್ತಾನದ ನೂತನ ಮುಖ್ಯ ನ್ಯಾಯಾಧೀಶರಾಗಿ ನೇಮಕಗೊಂಡಿದ್ದು, ಡಿಸೆಂಬರ್ 31 ರಂದು ಅಧಿಕಾರ ವಹಿಸಿಕೊಳ್ಳಲಿದ್ದಾರೆ. ಪ್ರಸ್ತುತ ಮುಖ್ಯ ನ್ಯಾಯಾಧೀಶರಾಗಿರುವ ಅನ್ವರ್ ಜಹೀರ್ ಜಮಲಿ

www.karunaduexams.com

ರವರು ಡಿಸೆಂಬರ್ 30 ರಂದು ನಿವೃತ್ತರಾಗಲಿದ್ದಾರೆ. ನಿಸಾರ್ ರವರು ಪಾಕಿಸ್ತಾನದ 25ನೇ ಮುಖ್ಯ ನ್ಯಾಯಾಧೀಶ.

58. ಫಾರ್ಚೂನ್ ನಿಯತಕಾಲಿಕೆ ಈ ಕೆಳಗಿನ ಯಾವ ಸಂಸ್ಥೆಯನ್ನು "ವರ್ಷದ ಸಂಸ್ಥೆ" ಎಂದು ಹೆಸರಿಸಿದೆ?
ಅ) ನಿಕೆ
ಆ) ಆ್ಯಪಲ್
ಇ) ಗೂಗಲ್ ಅಲ್ಫಾಬೆಟ್
ಈ) ಸ್ಯಾಮಸಂಗ್
ಗೂಗಲ್ ಅಲ್ಫಾಬೆಟ್
ಫಾರ್ಚೂನ್ ನಿಯತಕಾಲಿಕೆಯ ವರ್ಷದ ಸಂಸ್ಥೆಯಾಗಿ ಗೂಗಲ್ ಪೋಷಕ ಸಂಸ್ಥೆ ಅಲ್ಫಾಬೆಟ್ ಹೊರಹೊಮ್ಮಿದೆ. ಫಾರ್ಚೂನ್ ನಿಯತಕಾಲಿಕೆಯ ವಾರ್ಷಿಕ ಬ್ಲೂ ರಿಬ್ಬನ್ ಪಟ್ಟಿಯಲ್ಲಿ ಅಲ್ಫಾಬೆಟ್ ಪ್ರಥಮ ಸ್ಥಾನ ಪಡೆದುಕೊಂಡಿದೆ. ನಿಕೆ ಮತ್ತು ಆ್ಯಪಲ್ ಎರಡು ಮತ್ತು ಮೂರನೇ ಸ್ಥಾನದಲ್ಲಿವೆ.

59. ಈ ಕೆಳಗಿನ ಯಾರು 2016ನೇ ಸಾಲಿನ ಟೈಮ್ಸ್ ವರ್ಷದ ವ್ಯಕ್ತಿಯಾಗಿ ಆಯ್ಕೆಯಾಗಿದ್ದಾರೆ?
ಅ) ಬರಾಕ್ ಒಬಾಮ
ಆ) ನರೇಂದ್ರ ಮೋದಿ
ಇ) ಡೋನಾಲ್ಡ್ ಟ್ರಂಪ್
ಈ) ಮೈಕಲ್ ಜೋರ್ಡನ್
ಡೋನಾಲ್ಡ್ ಟ್ರಂಪ್
2016 ನೇ ಸಾಲಿನ ಟೈಮ್ಸ್ ವರ್ಷದ ವ್ಯಕ್ತಿಯಾಗಿ ಅಮೆರಿಕದ ನಿಯೋಜಿತ ಅಧ್ಯಕ್ಷ ಡೋನಾಲ್ಡ್ ಟ್ರಂಪ್ ಆಯ್ಕೆಯಾಗಿದ್ದಾರೆ. ದಿನ ಪತ್ರಿಕೆಗಳಲ್ಲಿ ಯಾರು ಹೆಚ್ಚು ಪ್ರಚಲಿತದಲ್ಲಿರುತ್ತಾರೋ ಅಂತಹವರನ್ನು ಟೈಮ್ಸ್ ಸಂಪಾದಕರು ವರ್ಷದ ವ್ಯಕ್ತಿಯಾಗಿ ಆಯ್ಕೆ ಮಾಡುತ್ತಾರೆ. ಟೈಮ್ಸ್ ವರ್ಷದ ವ್ಯಕ್ತಿ ಸ್ಪರ್ಧೆಯಲ್ಲಿ ಅಮೆರಿಕಾ ಅಧ್ಯಕ್ಷೀಯ ಚುನಾವಣೆಯಲ್ಲಿ ಟ್ರಂಪ್ ಎದುರು ಸೋತ ಹಿಲರಿ ಕ್ಲಿಂಟನ್ 2ನೇ ಸ್ಥಾನ, ಹಾಕರ್ಸ್ 3ನೇ ಸ್ಥಾನ, ಟರ್ಕಿಯ ಅಧ್ಯಕ್ಷ ಎರ್ ಡೋಗನ್ 4 ನೇ ಸ್ಥಾನ, CRISPR ವಿಜ್ಞಾನಿಗಳು 5ನೇ ಸ್ಥಾನ ಹಾಗೂ ಬೆಯಾಂನ್ಸ್ 6 ನೇ ಸ್ಥಾನ ಪಡೆದಿದ್ದಾರೆ. ಇತ್ತೀಚೆಗಷ್ಟೇ ಶೇ. 18 ಮತಗಳಿಂದ ಟೈಮ್ಸ್ ವರ್ಷದ ವ್ಯಕ್ತಿ ಓದುಗರ ಸಮೀಕ್ಷೆಯಲ್ಲಿ ಭಾರತದ ಪ್ರಧಾನಿ ನರೇಂದ್ರ ಮೋದಿ ಅವರು ಮುನ್ನಡೆ ಸಾಧಿಸಿದ್ದರು. ಟ್ರಂಪ್, ಜೂಲಿಯನ್ ಅಸ್ಸಾಂಜೆ, ಒಬಾಮಾ ಅವರನ್ನು ಹಿಂದಿಕ್ಕಿ ಟೈಮ್ಸ್ ಓದುಗರ ವರ್ಷದ ವ್ಯಕ್ತಿಯಾಗಿ ಆಯ್ಕೆ ಮೋದಿ ಆಯ್ಕೆ ಆಗಿದ್ದರು.

60. 2016 ವಿಶ್ವ ಪ್ರಭಾವಿ ಭಾಷೆ ಸೂಚ್ಯಂಕದಲ್ಲಿ ಹಿಂದಿ ಎಷ್ಟನೇ ಸ್ಥಾನದಲ್ಲಿದೆ?
ಅ) ಎರಡು
ಆ) ಐದು
ಇ) ಹತ್ತು
ಈ) ಹದಿನೈದು
ಹತ್ತು
ವಿಶ್ವ ಆರ್ಥಿಕ ವೇದಿಕೆ ಹೊರತಂದಿರುವ 2016 ವಿಶ್ವ ಪ್ರಭಾವಿ ಭಾಷೆ ಸೂಚ್ಯಂಕದಲ್ಲಿ ಹಿಂದಿ ಭಾಷೆ ಹತ್ತನೇ ಸ್ಥಾನದಲ್ಲಿದೆ. ಸೂಚ್ಯಂಕದಲ್ಲಿ ಇಂಗ್ಲೀಷ್ ಪ್ರಥಮ ಸ್ಥಾನದಲ್ಲಿದೆ. ವಿಶ್ವ ಆರ್ಥಿಕ

www.karunaduexams.com

ವೇದಿಕೆ ಮುನ್ನೋಟದ ಪ್ರಕಾರ 2050ರ ವೇಳೆಗೆ ಹಿಂದಿ ಭಾಷೆ 9ನೇ ಸ್ಥಾನ ಪಡೆದುಕೊಳ್ಳಲಿದೆ ಎನ್ನಲಾಗಿದೆ.

61. ಈ ಕೆಳಗಿನ ರಾಷ್ಟ್ರಗಳನ್ನು ಗಮನಿಸಿ:
I) ಜಪಾನ್
II) ವಿಯೆಟ್ನಾಂ
III) ರಷ್ಯಾ
IV) ಮಂಗೋಲಿಯಾ
ಡಿಸೆಂಬರ್ 10, 2016ರ ಅಂತ್ಯಕ್ಕೆ ಭಾರತ ಮೇಲಿನ ಯಾವ ದೇಶಗಳೊಂದಿಗೆ ನಾಗರಿಕ ಪರಮಾಣು ಸಹಕಾರ ಒಪ್ಪಂದಕ್ಕೆ ಸಹಿ ಹಾಕಿದೆ?
ಅ) I & II
ಆ) I, II & III
ಇ) II, III & IV
ಈ) I, II, III & IV
I, II, III & IV
ಇತ್ತೀಚೆಗೆ ಭಾರತ ಮತ್ತು ವಿಯೆಟ್ನಾಂ ನಾಗರಿಕ ಪರಮಾಣು ಸಹಕಾರ ಒಪ್ಪಂದಕ್ಕೆ ಸಹಿ ಹಾಕಿವೆ. ಕಳೆದ ತಿಂಗಳಲ್ಲಿ ಜಪಾನ್ ನೊಂದಿಗೆ ಈ ಒಪ್ಪಂದಕ್ಕೆ ಸಹಿಹಾಕಲಾಗಿತ್ತು. ಇಲ್ಲಿಯವರೆಗೆ ಅಮೆರಿಕ, ಫ್ರಾನ್ಸ್, ಮಂಗೋಲಿಯಾ, ನಮೀಬಿಯಾ, ಅರ್ಜೇಂಟಿನಾ, ಕೆನಡಾ, ಕಝಕಸ್ತಾನ ಮತ್ತು ದಕ್ಷಿಣ ಕೊರಿಯಾ ಹಾಗೂ ಇತ್ತೀಚೆಗೆ ಜಪಾನ್ ಮತ್ತು ವಿಯೆಟ್ನಾಂ ರಾಷ್ಟ್ರಗಳೊಂದಿಗೆ ನಾಗರಿಕ ಪರಮಾಣು ಸಹಕಾರ ಒಪ್ಪಂದಕ್ಕೆ ಸಹಿ ಹಾಕಲಾಗಿದೆ.

62. "ವೀಣಾ ಮಂಕರ್(Veena Mankar)" ರವರು ಯಾವ ಬ್ಯಾಂಕಿನ್ ಕಾರ್ಯನಿರ್ವಾಹಕೇರತ ಮುಖ್ಯಸ್ಥೆಯಾಗಿ (Non-Executive Chairman) ನೇಮಕಗೊಂಡಿದ್ದಾರೆ?
ಅ) ಎಕ್ಸಿಸ್ ಬ್ಯಾಂಕ್
ಆ) ಹೆಚ್ ಡಿ ಎಫ್ ಸಿ ಬ್ಯಾಂಕ್
ಇ) ಐಸಿಐಸಿಐ ಬ್ಯಾಂಕ್
ಈ) ಕಾರ್ಪೋರೇಷನ್ ಬ್ಯಾಂಕ್
ಹೆಚ್ ಡಿ ಎಫ್ ಸಿ ಬ್ಯಾಂಕ್
ವೀಣಾ ಮಂಕರ್ ರವರನ್ನು ಹೆಚ್ ಡಿ ಎಫ್ ಸಿ ಬ್ಯಾಂಕ್ ನ ಕಾರ್ಯನಿರ್ವಾಹಕೇತರ ಮುಖ್ಯಸ್ಥರನ್ನಾಗಿ ನಿರ್ದೇಶಕ ಮಂಡಳಿ ನೇಮಕ ಮಾಡಿದೆ. ಡಿಸೆಂಬರ್ 9, 2016 ರಿಂದ ಜುಲೈ 26, 2018 ರವರೆಗೆ ಅವಧಿಗೆ ಮಂಕರ್ ನೇಮಕಗೊಂಡಿದ್ದಾರೆ.

63. "ಭಾರತ ಸಶಸ್ತ್ರ ಪಡೆಗಳ ಧ್ವಜ ದಿನ (Armed Force Flag Day)" ಯಾವ ದಿನದಂದು ಆಚರಿಸಲಾಗುತ್ತದೆ?
ಅ) ಡಿಸೆಂಬರ್ 5
ಆ) ಡಿಸೆಂಬರ್ 6
ಇ) ಡಿಸೆಂಬರ್ 7
ಈ) ಡಿಸೆಂಬರ್ 8
ಡಿಸೆಂಬರ್ 7
ಡಿಸೆಂಬರ್ 7 ರಂದು ಸಶಸ್ತ್ರ ಪಡೆಗಳ ಧ್ವಜ ದಿನವನ್ನು ಆಚರಿಸಲಾಗುತ್ತದೆ. ದೇಶಕ್ಕಾಗಿ ಪ್ರಾಣಬಿಟ್ಟ ಧೀರ ಯೋಧರನ್ನು ಸ್ಮರಿಸಲು ಈ ದಿನವನ್ನು ಆಚರಿಸಲಾಗುತ್ತದೆ. ಈ

www.karunaduexams.com

ದಿನದಂದು ಸಾರ್ವಜನಿಕರಿಂದ ಹಣ ಸಂಗ್ರಹ ಮಾಡಿ ಯೋಧರ ಕಲ್ಯಾಣಕ್ಕಾಗಿ ಬಳಸಲಾಗುವುದು.

64. ವರ್ಧಾ ಚಂಡಮಾರುತ ಅಪ್ಪಳಿಸಲಿರುವ ದೇಶ ________?
ಅ) ಶ್ರೀಲಂಕಾ
ಆ) ಭಾರತ
ಇ) ಬಾಂಗ್ಲಾದೇಶ
ಈ) ಚೀನಾ
ಭಾರತ
ಬಂಗಾಳಕೊಲ್ಲಿಯಲ್ಲಿ ಉಂಟಾಗಿರುವ ವರ್ಧಾ ಚಂಡಮಾರುತ ಡಿ.12ರ ವೇಳೆಗೆ ಆಂಧ್ರದ ನೆಲ್ಲೂರ ಮತ್ತು ಮಚಲೀಪಟ್ಟಣಂ ನಡುವೆ ಪ್ರವೇಶಿಸಲಿದೆ. ಕರಾವಳಿಗೆ ಸಮೀಪಿಸುತ್ತಿದ್ದಂತೆಯೇ 130 ಕಿ.ಮೀ. ವೇಗದಲ್ಲಿ ಗಾಳಿಯೂ ಬೀಸುವ ಎಚ್ಚರಿಕೆಯನ್ನು ನೀಡಲಾಗಿದೆ.

65. ಈ ಕೆಳಗಿನ ಯಾವುದು ಭಾರತಕ್ಕೆ ಅತಿ ಹೆಚ್ಚು ನೈಸರ್ಗಿಕ ಅನಿಲ ಪೂರೈಸುವ ದೇಶವಾಗಿದೆ?
ಅ) ಕತಾರ್
ಆ) ಸೌಧಿ ಅರೇಬಿಯಾ
ಇ) ಇರಾನ್
ಈ) ಇರಾಕ್
ಕತಾರ್ ದೇಶ ಭಾರತಕ್ಕೆ ಅತಿ ಹೆಚ್ಚು ನೈಸರ್ಗಿಕ ಅನಿಲ ಪೂರೈಸುವ ದೇಶವಾಗಿದೆ. ಭಾರತ ಆಮದು ಮಾಡಿಕೊಳ್ಳುವ ನೈಸರ್ಗಿಕ ಅನಿಲದ ಶೇ 66% ರಷ್ಟನ್ನು ಕತಾರ್ ಪೂರೈಸುತ್ತದೆ.

66. ವಿಶ್ವದ ಅತಿ ದೊಡ್ಡ ಕ್ರಿಕೆಟ್ ಸ್ಟೇಡಿಯಂ ಯಾವ ರಾಜ್ಯದಲ್ಲಿ ಸ್ಥಾಪಿಸಲಾಗುತ್ತಿದೆ?
ಅ) ರಾಜಸ್ಥಾನ
ಆ) ಗುಜರಾತ್
ಇ) ಮಧ್ಯ ಪ್ರದೇಶ
ಈ) ಕರ್ನಾಟಕ
ಗುಜರಾತ್
ಗುಜರಾತ್ ನ ಅಹ್ಮದಾಬಾದ್'ನ ಮೊಟೇರಾದಲ್ಲಿರುವ ಸರ್ದಾರ್ ಪಟೇಲ್ ಸ್ಟೇಡಿಯಂನ ಪುನರ್ನಿರ್ಮಾಣದ ಕಾರ್ಯ ನಡೆಯಲಿದ್ದು, ವಿಶ್ವದ ಅತಿದೊಡ್ಡ ಸ್ಟೇಡಿಯಂ ಆಗಿ ಪರಿವರ್ತನೆಯಾಗಲಿದೆ. ಬಿಜೆಪಿ ರಾಷ್ಟ್ರಾಧ್ಯಕ್ಷ ಅಮಿತ್ ಶಾ ನೇತೃತ್ವದ ಗುಜರಾತ್ ಕ್ರಿಕೆಟ್ ಸಂಸ್ಥೆಯು ಈ ಕಾರ್ಯ ಕೈಗೆತ್ತಿಕೊಂಡಿದೆ. 1.1 ಲಕ್ಷ ಸೀಟು ಸಾಮರ್ಥ್ಯದ ಸ್ಟೇಡಿಯಂ ಇದಲಾಗಲಿದೆ. ಒಂದು ಲಕ್ಷ ಸೀಟು ಸಾಮರ್ಥ್ಯ ಇರುವ ಮೆಲ್ಬೋರ್ನ್'ನ ಎಂಸಿಜಿ ಮೈದಾನವು ಸದ್ಯ ವಿಶ್ವದ ಅತಿ ದೊಡ್ಡ ಕ್ರಿಕೆಟ್ ಸ್ಟೇಡಿಯಂ ಎನಿಸಿದೆ. ಕೋಲ್ಕತಾದ ಈಡನ್ ಗಾರ್ಡನ್ಸ್ ದಶಕಗಳ ಹಿಂದಿನವರೆಗೂ ಆ ಹೆಸರು ಗಳಿಸಿಕೊಂಡಿತ್ತು. ಆದರೆ, ಮೈದಾನವನ್ನು ಚಿಕ್ಕದು ಮಾಡಿದ್ದರಿಂದ ಆ ದಾಖಲೆಯು ಮೆಲ್ಬೋರ್ನ್ ಸ್ಟೇಡಿಯಂಗೆ ಹೋಗಿದೆ.

67. 9ನೇ ಏಷ್ಯನ್ ರೈಫಲ್ ಮತ್ತು ಪಿಸ್ತೂಲ್ ಶೂಟಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಮೊದಲ ಸ್ಥಾನ ಪಡೆದ ದೇಶ ಯಾವುದು?
ಅ) ಚೀನಾ
ಆ) ಭಾರತ

www.karunaduexams.com

ಇ) ಶ್ರೀಲಂಕಾ
ಈ) ಬಾಂಗ್ಲದೇಶ
ಚೀನಾ
ಚೀನಾದ ಶೂಟರ್‌ಗಳ ತಂಡವು 9ನೇ ಏಷ್ಯನ್ ರೈಫಲ್ ಮತ್ತು ಫಿಸ್ತೂಲ್ ಶೂಟಿಂಗ್ ನಲ್ಲಿ ಪ್ರಥಮ ಸ್ಥಾನ ಪಡೆದುಕೊಂಡಿತು. ಭಾರತ ಶೂಟರ್ ಗಳ ತಂಡ ಎರಡನೇ ಸ್ಥಾನ ಪಡೆಯಿತು. ಭಾರತ ತಂಡವು ಒಟ್ಟು 15 ಪದಕಗಳನ್ನು (ಆರು ಚಿನ್ನ, ಐದು ಬೆಳ್ಳಿ ಮತ್ತು ನಾಲ್ಕು ಕಂಚು) ಗೆದ್ದಿತು. ಚೀನಾ ದೇಶದ ತಂಡವು 32 ಪದಕಗಳನ್ನು (14 ಚಿನ್ನ, 10 ಬೆಳ್ಳಿ, ಎಂಟು ಕಂಚು) ಗೆದ್ದು ಮೊದಲ ಸ್ಥಾನ ಪಡೆಯಿತು.

68. "ವರ್ಷದ ಮಕ್ಕಳ ಐಕಾನ್ (Kids Icon of the Year)" ಬಿರುದಿಗೆ ಪಾತ್ರರಾದ ಬಾಲಿವುಡ್ ನಟ ಯಾರು?
ಅ) ಅಕ್ಷಯ್ ಕುಮಾರ್
ಆ) ಶಾರೂಕ್ ಖಾನ್
ಇ) ಸಲ್ಮಾನ್ ಖಾನ್
ಈ) ರಣವೀರ್ ಸಿಂಗ್
ಶಾರೂಕ್ ಖಾನ್
ಬಾಲಿವುಡ್ ನ ಪ್ರಖ್ಯಾತ ನಟ ಶಾರೂಕ್ ಖಾನ್ ರವರು ವರ್ಷದ ಮಕ್ಕಳ ಐಕಾನ್ ಪ್ರಶಸ್ತಿಗೆ ಭಾಜನರಾಗಿದ್ದಾರೆ. ನಿಕೊಲೆಡನ್ ಕಿಡ್ಸ್ ಚಾಯ್ಸ್ ಆವಾರ್ಡ್ ನಲ್ಲಿ ಖಾನ್ ಅವರಿಗೆ ಪ್ರಶಸ್ತಿಯನ್ನು ವಿತರಿಸಲಾಯಿತು.

69. ಇತ್ತೀಚೆಗೆ ಸುದ್ದಿಯಲ್ಲಿರುವ ತ್ರಿ-ನೇತ್ರ (Terrain Imaging for Diesel Drivers, Infrared Enhanced Optical and Radar Assisted (Tri-Netra) system) ಯಾವುದಕ್ಕೆ ಸಂಬಂಧಿಸಿದೆ?
ಅ) ರೈಲ್ವೆ ಇಲಾಖೆ
ಆ) ಭಾರತೀಯ ನೌಕ ಪಡೆ
ಇ) ಇಸ್ರೋ
ಈ) ನಾಗರಿಕ ವಿಮಾನಯಾನ
ರೈಲ್ವೆ ಇಲಾಖೆ
ರೈಲು ಅಪರಾಧಗಳನ್ನು ತಗ್ಗಿಸುವ ಸಲುವಾಗಿ ಭಾರತೀಯ ರೈಲ್ವೆ ತ್ರಿ-ನೇತ್ರ Terrain Imaging for Diesel Drivers, Infrared Enhanced Optical and Radar Assisted (Tri-Netra) ವ್ಯವಸ್ಥೆಯನ್ನು ಜಾರಿಗೆ ತರುತ್ತಿದೆ.

70. ಸಂವಿಧಾನದ ಪ್ರಕಾರ ಅಟಾರ್ನಿ ಜನರಲ್ ಅವರನ್ನು ನೇಮಕ ಮಾಡುವವರು?
ಅ) ಪ್ರಧಾನ ಮಂತ್ರಿ
ಆ) ರಾಷ್ಟ್ರಪತಿ
ಇ) ಸಂಸತ್ತು
ಈ) ಲೋಕಸಭಾ ಸ್ಪೀಕರ್
ರಾಷ್ಟ್ರಪತಿ

www.karunaduexams.com

71. 2016 ಜಾಗತಿಕ ಭಯೋತ್ಪಾದನೆ ಸೂಚ್ಯಂಕ (Global Terrorism Index) ನಲ್ಲಿ ಭಾರತ ಎಷ್ಟನೇ ಸ್ಥಾನದಲ್ಲಿದೆ?
ಅ) 9
ಆ) 6
ಇ) 7
ಈ) 10
7
2016 ಜಾಗತಿಕ ಭಯೋತ್ಪಾದನೆ ಸೂಚ್ಯಂಕದಲ್ಲಿ ಭಾರತ 163 ರಾಷ್ಟ್ರಗಳ ಪೈಕಿ 7ನೇ ಸ್ಥಾನದಲ್ಲಿದೆ. ಸಿಡ್ನಿ ಮೂಲದ "ಇನ್ಸ್ಟಿಟ್ಯೂಟ್ ಫಾರ್ ಎಕಾನಮಿಕ್ಸ್ ಅಂಡ್ ಪೀಸ್" ಜಾಗತಿಕ ಭಯೋತ್ಪಾದನೆ ಸೂಚ್ಯಂಕವನ್ನು ಬಿಡುಗಡೆಗೊಳಿಸುತ್ತಿದ್ದು, 2015 ರಲ್ಲಿ ನಡೆದ ಭಯೋತ್ಪಾದನೆ ಪ್ರಕರಣಗಳನ್ನು ಆಧರಿಸಿ ಸೂಚ್ಯಂಕವನ್ನು ಅಭಿವೃದ್ದಿಪಡಿಸಲಾಗಿದೆ. ಸೂಚ್ಯಂಕದಲ್ಲಿ ಇರಾಕ್ ಮೊದಲನೆ ಸ್ಥಾನದಲ್ಲಿದೆ. ಆಫ್ಘಾನಿಸ್ತಾನ, ನೈಜೀರಿಯಾ, ಪಾಕಿಸ್ತಾನ ಮತ್ತು ಸಿರಿಯಾ ಕ್ರಮವಾಗಿ ಎರಡು, ಮೂರು, ನಾಲ್ಕು ಮತ್ತು ಐದನೇ ಸ್ಥಾನದಲ್ಲಿವೆ.

72. "ದೀಪಾ ಕಮಾರ್ಕರ್: ದಿ ಸ್ಮಾಲ್ ವಂಡರ್ (Deepa Kamarkar: The Small Wonder)" ಪುಸ್ತಕದ ಲೇಖಕರು ಯಾರು?
ಅ) ದೀಪಾ ಕಮಾರ್ಕರ್
ಆ) ಬಿಬ್ವೇಶ್ವರ್ ನಂದಿ
ಇ) ಆನಂದ್ ಚಂದ್ರಕಾಂತ್
ಈ) ರಾಜ್ ಕುಮಾರ್ ಸಿಂಗ್
ದೀಪಾ ಕಮಾರ್ಕರ್: ದಿ ಸ್ಮಾಲ್ ವಂಡರ್ ಪುಸ್ತಕವನ್ನು ಕ್ರೀಡಾ ಪತ್ರಕರ್ತ ವಿಮಲ್ ಮೋಹನ್, ದಿಗ್ವಿಜಯ್ ಸಿಂಗ್ ದಿಯೊ ಮತ್ತು ದೀಪಾ ಕಮಾರ್ಕರ್ ರವರ ಕೋಚ್ ಬಿಬೇಶ್ವರ್ ನಂದಿ ರವರು ಬರೆದಿದ್ದಾರೆ. ದೀಪಾ ಕಮಾರ್ಕರ್ ರವರನ್ನು ಕುರಿತಾದ ಹಲವಾರು ಮಹತ್ವದ ವಿಷಯಗಳನ್ನು ಪುಸ್ತಕ ಒಳಗೊಂಡಿದೆ.

73. ಆನ್ ಲೈನ್ ಪೈರಸಿ ವಿರುದ್ದ ಹೋರಾಡಲು "ಇಂಟರ್ನೆಟ್ ಮತ್ತು ಮೊಬೈಲ್ ಅಸೋಸಿಯೇಷನ್ ಆಫ್ ಇಂಡಿಯಾ (IAMAI)" ಯಾವ ಸಮಿತಿಯನ್ನು ರಚಿಸಲಾಗಿದೆ?
ಅ) ಅಜಿತ್ ಮೋಹನ್ ಸಮಿತಿ
ಆ) ಭರತ್ ಕೃಷ್ಣನ್ ಸಮಿತಿ
ಇ) ರಾಜೇಂದ್ರ ಸಿಂಗ್ ಸಮಿತಿ
ಈ) ಸುರೇಶ್ ಚಂದ್ರ ಸಮಿತಿ
ಅಜಿತ್ ಮೋಹನ್ ಸಮಿತಿ
ಆನ್ ಲೈನ್ ಪೈರಸಿ ವಿರುದ್ದ ಹೋರಾಡುವ ಸಲುವಾಗಿ "ಇಂಟರ್ನೆಟ್ ಮತ್ತು ಮೊಬೈಲ್ ಅಸೋಸಿಯೇಷನ್ ಆಫ್ ಇಂಡಿಯಾ (IAMAI)" ಸಮಿತಿಯನ್ನು ರಚಿಸಿದೆ. ಹಾಟ್ ಸ್ಟಾರ್ ಮುಖ್ಯಸ್ಥ ಅಜಿತ್ ಮೋಹನ್ ರವರು ಸಮಿತಿಯ ಅಧ್ಯಕ್ಷರಾಗಿದ್ದಾರೆ. ಡಿಜಿಟಲ್ ಮನೋರಂಜನೆಯ ಹಿತಾಸಕ್ತಿಯನ್ನು ಕಾಪಾಡಲು ಶಿಫಾರಸ್ಸು ಮಾಡುವುದು ಸಮಿತಿಯ ಹೊಣೆಗಾರಿಕೆಯಾಗಿದೆ.

www.karunaduexams.com

74. ಇತ್ತೀಚೆಗೆ ಈ ಕೆಳಗಿನ ಯಾವ ಸಮಿತಿ ಡಿಜಿಟಲ್ ನಗದು ಪಾವತಿ ಕುರಿತಾದ ತನ್ನ ಅಂತಿಮ ವರದಿಯನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಿತು?

ಅ) ರತನ್ ವಟಲ್ ಸಮಿತಿ

ಆ) ಹೆಚ್ ಆರ್ ಖಾನ್ ಸಮಿತಿ

ಇ) ಶೈಲಜಾ ಗೋಪಿನಾಥನ್ ಸಮಿತಿ

ಈ) ಮಂಜು ಭಾರ್ಗವ ಸಮಿತಿ

ರತನ್ ವಟಲ್ ಸಮಿತಿ

ಡಿಜಿಟಲ್ ನಗದು ಪಾವತಿ ಕುರಿತಾಗಿ ರಚಿಸಲಾಗಿದ್ದ ರತನ್ ಪಿ ವಟಲ್ ಸಮಿತಿ ತನ್ನ ವರದಿಯನ್ನು ವಿತ್ತ ಸಚಿವ ಅರುಣ್ ಜೇಟ್ಲಿ ರವರಿಗೆ ಸಲ್ಲಿಸಿದೆ. ಡಿಜಿಟಲ್ ನಗದು ಪಾವತಿ ಪ್ರೇರಣೆಗೆ ಮಧ್ಯಮ ಅವಧಿ ನೀತಿ ಜಾರಿಗೆ ತರಲು ಶಿಫಾರಸ್ಸು ಮಾಡಿದೆ. ಅಲ್ಲದೇ ನಗದು ರಹಿತ ಪಾವತಿಗೆ ಸ್ಪರ್ಧಾತ್ಮಕ ವಾತಾವರಣ ಸೃಜನೆ ಮಾಡುವಂತೆ ಸಮಿತಿ ತಿಳಿಸಿದೆ.

75. ಈ ಕೆಳಗಿನ ಯಾವ ದೇಶ "ಫೆನ್ಯೂನ್-4 (Fengyun-4)" ಸುಧಾರಿತ ಹವಾಮಾನ ಉಪಗ್ರಹವನ್ನು ಯಶಸ್ವಿಯಾಗಿ ಉಡಾಯಿಸಿದೆ?

ಅ) ಚೀನಾ

ಆ) ರಷ್ಯಾ

ಇ) ಅಮೆರಿಕ

ಈ) ಜಪಾನ್

ಚೀನಾ

ಚೀನಾದ ಹೊಸ ಪೀಳಿಗೆಯ ಸುಧಾರಿತ ಹವಾಮಾನ ಉಪಗ್ರಹ "ಫೆನ್ಯೂನ್-4" ಯನ್ನು ಯಶಸ್ವಿಯಾಗಿ ಕಕ್ಷೆಗೆ ಸೇರಿಸಲಾಗಿದೆ. ಲಾಂಗ್ ಮಾರ್ಚ್-3ಬಿ ರಾಕೆಟ್ ಬಳಸಿ ಕ್ಸಿಚಾಂಗ್ ಉಪಗ್ರಹ ಉಡಾವಣ ಕೇಂದ್ರದಿಂದ ಯಶಸ್ವಿಯಾಗಿ ಉಡಾಯಿಸಲಾಯಿತು. ಫೆನ್ಯೂನ್-4 ಭೂಸ್ಥಿರ ಕಕ್ಷೆ ಉಪಗ್ರಹವಾಗಿದೆ.

76. ಇತ್ತೀಚೆಗೆ ನಿಧನರಾದ ಗಗನಯಾತ್ರಿ "ಜಾನ್ ಗ್ಲೆನ್' ಯಾವ ದೇಶದವರು?

ಅ) ಅಮೆರಿಕ

ಆ) ಫ್ರಾನ್ಸ್

ಇ) ರಷ್ಯಾ

ಈ) ಇಸ್ರೇಲ್

ಅಮೆರಿಕ

ಅಮೆರಿಕದ ಗಗನಯಾತ್ರಿ "ಜಾನ್ ಗ್ಲೆನ್" ಅನಾರೋಗ್ಯದ ನಿಮಿತ್ತ ನಿಧನರಾದರು. ಗ್ಲೇನ್ ರವರು ಅಂತರಿಕ್ಷದಲ್ಲಿ ಭೂಮಿಯನ್ನು ಸುತ್ತು ಹಾಕಿದ ಅಮೆರಿಕದ ಮೊದಲ ವ್ಯಕ್ತಿ ಮತ್ತು ಬಾಹ್ಯಾಕಾಶ ಯಾತ್ರೆ ಕೈಗೊಂಡ ಅತಿ ಹಿರಿಯ ಗಗನಯಾತ್ರಿ ಎನಿಸಿದ್ದರು. ಗ್ಲೆನ್ 1962 ರಲ್ಲಿ ಅಟ್ಲಾಸ್ ಹೆಸರಿನ ರಾಕೆಟ್‌ನಲ್ಲಿ ಭೂಮಿಗೆ ಸುತ್ತು ಹಾಕಿದ್ದರು. ಈ ರಾಕೆಟ್ ನಿರ್ದಿಷ್ಟ ಕಕ್ಷೆಯಲ್ಲಿ ಐದು ಗಂಟೆ ಕಾಲ ಭೂಮಿಗೆ ಸುತ್ತುಹಾಕಿತ್ತು. ತಮ್ಮ 77ನೇ ವಯಸ್ಸಿನಲ್ಲಿ ಬಾಹ್ಯಾಕಾಶ ಯಾತ್ರೆ ಕೈಗೊಂಡು ಇತಿಹಾಸ ನಿರ್ಮಿಸಿದ್ದರು.

www.karunaduexams.com

77. “ಬಿಲ್ ಇಂಗ್ಲೀಷ್ (Bill English)” ರವರು ಯಾವ ದೇಶದ ನೂತನ ಪ್ರಧಾನಿಯಾಗಿ ಆಯ್ಕೆಯಾಗಿದ್ದಾರೆ?
ಅ) ಆಸ್ಟ್ರೇಲಿಯಾ
ಆ) ನ್ಯೂಜಿಲ್ಯಾಂಡ್
ಇ) ಫ್ರಾನ್ಸ್
ಈ) ಜರ್ಮನಿ
ನ್ಯೂಜಿಲ್ಯಾಂಡ್
ನ್ಯೂಜಿಲ್ಯಾಂಡ್ ನ ಆಡಳಿತ ಪಕ್ಷವಾದ ನ್ಯಾಷನಲ್ ಪಾರ್ಟಿ ಬಿಲ್ ಇಂಗ್ಲೀಷ್ ರವರನ್ನು ನೂತನ ಪ್ರಧಾನಿಯಾಗಿ ಆಯ್ಕೆಮಾಡಿದೆ. ಜಾನ್ ಕೀ ರವರು ವೈಯುಕ್ತಿಕ ಕಾರಣದಿಂದ ಪ್ರಧಾನಿ ಹುದ್ದೆಗೆ ರಾಜೀನಾಮೆ ನೀಡಿದ ಕಾರಣ ಬಿಲ್ ಇಂಗ್ಲೀಷ್ ರವರನ್ನು ನೂತನ ಪ್ರಧಾನಿಯಾಗಿ ನೇಮಕಮಾಡಲಾಗಿದೆ. ಪಾಲ್ ಬೆನೆಟ್ ರವರನ್ನು ಉಪ ಪ್ರಧಾನಿಯಾಗಿ ನೇಮಕಮಾಡಲಾಗಿದೆ.

78. ಈ ಕೆಳಗಿನ ಯಾವ ದೇಶದಲ್ಲಿ ಜಗತ್ತಿನಲ್ಲೆ ಮೊದಲ ಬಾರಿಗೆ ದೇಶ ಪ್ಲಾಸ್ಟಿಕ್ ನೋಟುಗಳನ್ನು ಬಳಕೆಗೆ ತರಲಾಗಿದೆ?
ಅ) ಇಂಗ್ಲೆಂಡ್
ಆ) ಆಸ್ಟ್ರೇಲಿಯಾ
ಇ) ಅಮೆರಿಕ
ಈ) ದಕ್ಷಿಣ ಆಫ್ರಿಕ
ಆಸ್ಟ್ರೇಲಿಯಾ
ಪ್ಲಾಸ್ಟಿಕ್ ನೋಟುಗಳನ್ನು ಮೊದಲು ಬಳಕೆಗೆ ಬಂದದ್ದು ಆಸ್ಟ್ರೇಲಿಯಾದಲ್ಲಿ. ಅಲ್ಲಿ 1988ರಿಂದಲೇ ಬಳಕೆಯಲ್ಲಿದೆ. ಬ್ರೂನೆ, ನ್ಯೂಜಿಲೆಂಡ್, ಪಪುವಾ ನ್ಯೂಗಿನಿ, ರೊಮಾನಿಯ, ವಿಯೆಟ್ನಾಂ, ಕೆನಡಾಗಳಲ್ಲಿ ಪ್ಲಾಸ್ಟಿಕ್ ನೋಟುಗಳ ಬಳಕೆ ಇದೆ. ಬ್ರಿಟನ್‌ನಲ್ಲಿ ಈಗ ಭಾಗಶಃ ನೋಟುಗಳಷ್ಟೆ ಪ್ಲಾಸ್ಟಿಕ್ ನೋಟುಗಳಾಗಿದ್ದು, 2020ಕ್ಕೆ ಸಂಪೂರ್ಣವಾಗಿ ಬಳಕೆಗೆ ಬರಲಿದೆ ‘ಬೈಆಕ್ಸಿಯಲ್ ಓರಿಯೆಂಟೆಡ್ ಪಾಲಿಪ್ರೊಪೈಲೀನ್’ ಎಂಬ ಪಾರದರ್ಶಕ ಪ್ಲಾಸ್ಟಿಕ್ ಹಾಳೆಗಳನ್ನು ಬಳಸಿ ಈ ನೋಟುಗಳನ್ನು ಮುದ್ರಿಸಲಾಗುತ್ತದೆ. ಭಾರತ ಸರ್ಕಾರ ಇದೀಗ ಪ್ರಾಯೋಗಿಕವಾಗಿ ಪ್ಲಾಸ್ಟಿಕ್ ನೋಟುಗಳನ್ನು ಪರಿಚಯಿಸಲು ಸಿದ್ಧತೆ ನಡೆಸಿದೆ.

79. 2016 ಮಾನವ ಹಕ್ಕು ದಿನದ ಧ್ಯೇಯವಾಕ್ಯ ________?
ಅ) Every Rights Deserves
ಆ) Stand up for someone’s rights today
ಇ) We are all one so protect rights
ಈ) My voice counts
Stand up for someone’s rights today
ವಿಶ್ವ ಮಾನವ ಹಕ್ಕು ದಿನವನ್ನು ಪ್ರತಿವರ್ಷ ಡಿಸೆಂಬರ್ 10 ರಂದು ಆಚರಿಸಲಾಗುತ್ತದೆ. ಸಾರ್ವತ್ರಿಕ ಮಾನವ ಹಕ್ಕು ಘೋಷಣೆ ಸ್ಮರಣಾರ್ಥ ಡಿಸೆಂಬರ್ 10 ರಂದು ಈ ದಿನವನ್ನು ಆಚರಿಸಲಾಗುತ್ತದೆ. ವಿಶ್ವಸಂಸ್ಥೆಯ ಸಾಮಾನ್ಯ ಸಭೆ 1948ರಲ್ಲಿ ಸಾರ್ವತ್ರಿಕ ಮಾನವ ಹಕ್ಕು ಘೋಷಣೆಯನ್ನು ಅಂಗೀಕರಿಸಿತು. 2016 ಮಾನವ ಹಕ್ಕು ದಿನದ ಧ್ಯೇಯವಾಕ್ಯ Stand up for someone’s rights today.

www.karunaduexams.com

80. “2016 ಐಬಿಎಸ್‌ಎಫ್ ವಿಶ್ವ ಬಿಲಿಯರ್ಡ್ ಲಾಂಗ್ ಅಪ್ ಟೈಟಲ್ (IBSF World Billiards Long Up title)” ಗೆದ್ದುಕೊಂಡವರು ಯಾರು?
ಅ) ಪಂಕಜ್ ಅಡ್ವಾಣಿ
ಆ) ಸೌರವ್ ಕೊತಾರಿ
ಇ) ಪೀಟರ್ ಗಿಲ್ ಕ್ರಿಸ್ಟ್
ಈ) ರೂಪೇಶ್ ಷಾ
ಪೀಟರ್ ಗಿಲ್ ಕ್ರಿಸ್ಟ್
ಸಿಂಗಾಪುರದ ಪೀಟರ್ ಗಿಲ್ ಕ್ರಿಸ್ಟ್ ರವರು ಭಾರತದ ಸೌರವ್ ಕೊತಾರಿ ರವರನ್ನು ಮಣಿಸಿ “2016 ಐಬಿಎಸ್‌ಎಫ್ ವಿಶ್ವ ಬಿಲಿಯರ್ಡ್ ಲಾಂಗ್ ಅಪ್ ಟೈಟಲ್ ಗೆದ್ದುಕೊಂಡರು. ಬೆಂಗಳೂರಿನಲ್ಲಿ ನಡೆದ ಈ ಚಾಂಪಿಯನ್ ಷಿಪ್ ನಲ್ಲಿ ಭಾರತದ ರೂಪೇಶ್ ಷಾ ಮತ್ತು ಧ್ವಜ್ ಹರಿಯ ರವರು ಜಂಟಿಯಾಗಿ ಮೂರನೇ ಸ್ಥಾನ ಪಡೆದುಕೊಂಡರು.

81. “ವನಜೀವನ್” ಬುಡಕಟ್ಟು ಜನರ ಜೀವನೋಪಾಯ ಸಂಪನ್ಮೂಲ ಕೇಂದ್ರವನ್ನು ಯಾವ ರಾಜ್ಯದಲ್ಲಿ ಉದ್ಘಾಟಿಸಲಾಗುವುದು?
ಅ) ಒಡಿಶಾ
ಆ) ಪಶ್ಚಿಮ ಬಂಗಾಳ
ಇ) ಜಾರ್ಖಂಡ್
ಈ) ಮಧ್ಯ ಪ್ರದೇಶ
ಒಡಿಶಾ
ವಿಶ್ವಸಂಸ್ಥೆ ಅಭಿವೃದ್ದಿ ಕಾರ್ಯಕ್ರಮ (UNDP) ಮತ್ತು ರಾಷ್ಟ್ರೀಯ ಪರಿಶಿಷ್ಠ ಪಂಗಡ ಹಣಕಾಸು ಮತ್ತು ಅಭಿವೃದ್ದಿ ನಿಗಮ ಸಹಯೋಗದೊಂದಿಗೆ ಕೇಂದ್ರ ಬುಡಕಟ್ಟು ವ್ಯವಹಾರಗಳ ಸಚಿವಾಲಯು “ವನಜೀವನ್” ಬುಡಕಟ್ಟು ಜನರ ಜೀವನೋಪಾಯ ಸಂಪನ್ಮೂಲ ಕೇಂದ್ರವನ್ನು ಒಡಿಶಾದಲ್ಲಿ ಡಿಸೆಂಬರ್ 22, 2016 ರಂದು ಉದ್ಘಾಟಿಸಲಿದೆ. ಮಾನವ ಅಭಿವೃದ್ದಿ ಸೂಚ್ಯಂಕದಲ್ಲಿ ಹಿಂದುಳಿದಿರುವ ಆರು ರಾಜ್ಯಗಳ ಆಯ್ದಾ ಜಿಲ್ಲೆಗಳಲ್ಲಿ ಬುಡಕಟ್ಟು ಜನಾಂಗದವರ ಜೀವನೋಪಾಯ ಸಮಸ್ಯೆಗಳನ್ನು ಗುರುತಿಸುವ ಕಾರ್ಯಕ್ರಮವೇ “ವನಜೀವನ್”. ಅಸ್ಸಾಂ, ಗುಜರಾತ್, ಮಧ್ಯ ಪ್ರದೇಶ, ರಾಜಸ್ತಾನ, ಒಡಿಶಾ ಮತ್ತು ತೆಲಂಗಣ ಈ ಆರು ರಾಜ್ಯಗಳಾಗಿವೆ.

82. ವಿಶ್ವ ಬಿಲಿಯರ್ಡ್ಸ್ ಚಾಂಪಿಯನ್‌ಷಿಪ್ (150-ಅಪ್ ಪಾಯಿಂಟ್ ಮಾದರಿ)ನಲ್ಲಿ ಪ್ರಶಸ್ತಿ ಗೆದ್ದುಕೊಂಡವರು ______?
ಅ) ಪಂಕಜ್ ಅಡ್ವಾಣಿ
ಆ) ಪೀಟರ್ ಗಿಲ್ ಕ್ರಿಸ್ಟ್
ಇ) ಗೀತ್ ಸೇತಿ
ಈ) ಆದಿತ್ಯಾ ಮೆಹ್ತಾ
ಪಂಕಜ್ ಅಡ್ವಾಣಿ
ಪಂಕಜ್ ಅಡ್ವಾಣಿ ಅವರು ವಿಶ್ವ ಬಿಲಿಯರ್ಡ್ಸ್ ಚಾಂಪಿಯನ್‌ಷಿಪ್ 150–ಅಪ್ ಪಾಯಿಂಟ್ ಮಾದರಿಯಲ್ಲಿ ಪ್ರಶಸ್ತಿಯನ್ನು ಗೆದ್ದುಕೊಂಡರು. ರಾಜ್ಯ ಬಿಲಿಯರ್ಡ್ಸ್ ಸಂಸ್ಥೆಯ ಕೊಠಡಿಯಲ್ಲಿ ನಡೆದ ಫೈನಲ್‌ನಲ್ಲಿ ಕರ್ನಾಟಕದ ಪಂಕಜ್ 151–33, 150–95, 124–150, 101–150, 150–50, 152–37, 86–150, 151–104, 150–15ರಲ್ಲಿ ಸಿಂಗಪುರದ ಪೀಟರ್ ಗಿಲ್‌ಕ್ರಿಸ್ಟ್

ಅವರನ್ನು ಪರಾಭವಗೊಳಿಸಿದರು. ಇದರೊಂದಿಗೆ ಬಿಲಿಯರ್ಡ್ಸ್‌ನಲ್ಲಿ 11ನೇ ವಿಶ್ವ ಪ್ರಶಸ್ತಿಯನ್ನು ಎತ್ತಿ ಹಿಡಿದರು.

83. ನೂತನವಾಗಿ ಅಸ್ತಿತ್ವಕ್ಕೆ ಬಂದಿರುವ ಭಾರತ ಬಾಕ್ಸಿಂಗ್ ಫೆಡರೇಷನ್‌ನ ಕಾರ್ಯಕಾರಿ ಮಂಡಳಿಗೆ ಪುರುಷ ಬಾಕ್ಸರ್‌ಗಳ ಪ್ರತಿನಿಧಿಯಾಗಿ ಯಾರು ಆಯ್ಕೆಯಾಗಿದ್ದಾರೆ?

ಅ) ಶಿವ ಥಾಪ

ಆ) ಮನೋಜ್ ಕುಮಾರ್

ಇ) ಅಖಿಲ್ ಕುಮಾರ್

ಈ) ವಿಕಾಸ್ ಕೃಷ್ಣನ್

ಮನೋಜ್ ಕುಮಾರ್

ಬಾಕ್ಸರ್ ಮನೋಜ್ ಕುಮಾರ್ ಅವರು ನೂತನವಾಗಿ ಅಸ್ತಿತ್ವಕ್ಕೆ ಬಂದಿರುವ ಭಾರತ ಬಾಕ್ಸಿಂಗ್ ಫೆಡರೇಷನ್‌ನ ಕಾರ್ಯಕಾರಿ ಮಂಡಳಿಗೆ ಪುರುಷ ಬಾಕ್ಸರ್‌ಗಳ ಪ್ರತಿನಿಧಿಯಾಗಿ ಆಯ್ಕೆಯಾಗಿದ್ದಾರೆ. ಮನೋಜ್ ಕುಮಾರ್ ರವರು ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ ಚಿನ್ನ ಗೆದ್ದ ಸಾಧನೆ ಮಾಡಿದ್ದರು. ಚುನಾವಣೆಯಲ್ಲಿ ಮನೋಜ್ ಅವರು 27 ಮತಗಳನ್ನು ಪಡೆದು ಈ ಸ್ಥಾನಕ್ಕೆ ಆಯ್ಕೆಯಾಗಿದ್ದಾರೆ.

84. ಕೇಂದ್ರ ಸರ್ಕಾರದ "ಆನ್ ಲೈನ್ ನದಿ ನೀರು ಮತ್ತು ವಾಯು ಗುಣಮಟ್ಟ ನಿರ್ವಹಣೆ ವ್ಯವಸ್ಥೆ" ಅನುಷ್ಠಾನಕ್ಕೆ ಯಾವ ತಂತ್ರಜ್ಞಾನ ಸಂಸ್ಥೆ ಕೈಜೋಡಿಸಿದೆ?

ಅ) ಇನ್ಫೋಸಿಸ್

ಆ) ಇಂಟೆಲ್

ಇ) ಮೈಕ್ರೋಸಾಫ್ಟ್

ಈ) ರಿಲಾಯನ್ಸ್

ಇಂಟೆಲ್

ನೀರು ಮತ್ತು ವಾಯು ಮಾಲಿನ್ಯದ ಮೇಲೆ ಸಂಶೋಧನೆ ನಡೆಸುವ ಸಲುವಾಗಿ ಕೇಂದ್ರ ಸರ್ಕಾರ ಇಂಟೆಲ್ ಸಂಸ್ಥೆಯೊಂದಿಗೆ ಒಪ್ಪಂದಕ್ಕೆ ಸಹಿಹಾಕಿದೆ. ಒಪ್ಪಂದದಿ ನದಿ ನೀರು ಮತ್ತು ವಾಯು ಗುಣಮಟ್ಟ ನಿರ್ವಹಣೆ ವ್ಯವಸ್ಥೆ ಅನುಷ್ಠಾನಗೊಳಿಸಲಾಗುವುದು.

85. ಈ ಕೆಳಗಿನ ಯಾರು ಅಮೆರಿಕದ ನೂತನ ವಿದೇಶಾಂಗ ಕಾರ್ಯದರ್ಶಿಯಾಗಿ ನೇಮಕಗೊಂಡಿದ್ದಾರೆ?

ಅ) ಜಾನ್ ಕೆರ್ರಿ

ಆ) ರೆಕ್ಸ್ ಟಿಲರ್ ಸನ್

ಇ) ಕೇವಿನ್ ರುಡ್

ಈ) ಸ್ಟ್ಯಾನ್ ಹುಡ್

ರೆಕ್ಸ್ ಟಿಲರ್ ಸನ್

ಅಮೆರಿಕದ ನಿಯೋಜಿತ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ನೂತನ ವಿದೇಶಾಂಗ ಕಾರ್ಯದರ್ಶಿಯಾಗಿ ಉದ್ಯಮಿ ಹಾಗೂ ಎಕ್ಸಾನ್ ಮೊಬಿಲ್ ಆಯಿಲ್ ಕಂಪನಿಯ ಸಿಇಒ ರೆಕ್ಸ್ ಟಿಲರ್‌ಸನ್ ಅವರನ್ನು ನೇಮಕ ಮಾಡಿದ್ದಾರೆ.

86. "ಫಾರಿನ್ ಪಾಲಿಸಿ ನಿಯತಕಾಲಿಕೆಯ 2016 ಜಾಗತಿಕ ಚಿಂತಕರು" ಪಟ್ಟಿಯಲ್ಲಿ ಸ್ಥಾನ ಪಡೆದ ಭಾರತದ ಸಚಿವೆ ಯಾರು?

ಅ) ಸುಷ್ಮಾ ಸ್ವರಾಜ್

ಆ) ನಿರ್ಮಲಾ ಸೀತಾರಾಮನ್
ಇ) ಸ್ಮೃತಿ ಇರಾನಿ
ಈ) ಉಮಾ ಭಾರತಿ
ಸುಷ್ಮಾ ಸ್ವರಾಜ್
ವಿದೇಶಾಂಗ ವ್ಯವಹಾರ ಸಚಿವೆ ಸುಷ್ಮಾ ಸ್ವರಾಜ್ ಅವರನ್ನು 'ಫಾರಿನ್ ಪಾಲಿಸಿ' ನಿಯತಕಾಲಿಕವು '2016ರ ಜಾಗತಿಕ ಚಿಂತಕಿ' ಎಂಬುದಾಗಿ ಹೆಸರಿಸಿದೆ. ಲೋಕೋಪಕಾರಿ ದಂಪತಿಗಳಾದ ಅನುಪಮ ಮತ್ತು ವಿನೀತ್ ನಾಯರ್ ರವರು ಈ ಪಟ್ಟಿಯಲ್ಲಿ ಸ್ಥಾನ ಪಡೆದ ಮತ್ತೊಬ್ಬ ಭಾರತೀಯರಾಗಿದ್ದಾರೆ. ಸುಷ್ಮಾ ಸ್ವರಾಜ್ ರವರನ್ನು ನಿರ್ಣಯ ಕೈಗೊಳ್ಳುವ ವಿಭಾಗದಲ್ಲಿ ಹಿಲರಿ ಕ್ಲಿಂಟನ್, ಆಂಗೇಲಾ ಮರ್ಕೆಲ್ ಮತ್ತು ಜಸ್ಟಿನ್ ಟ್ರುಡಿಯು ಸೇರಿದಂತೆ 15 ಮಂದಿ ಜಾಗತಿಕ ಚಿಂತಕರ ಸಾಲಿಗೆ ಸೇರ್ಪಡೆಗೊಳಿಸಲಾಗಿದೆ.

87. 90ನೇ ಅಖಿಲ ಭಾರತ ಮರಾಠಿ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಯಾರು ಆಯ್ಕೆಯಾಗಿದ್ದಾರೆ?
ಅ) ವೈಭವ್ ಪಾಟೀಲ್
ಆ) ಭೂಷಣ್ ಬಿಬ್ವೆ
ಇ) ಅಕ್ಷಯ್ ಕುಮಾರ್ ಎಂ ಕಾಳೆ
ಈ) ಆನಂದ್ ಯಾದವ್
ಪ್ರಸಿದ್ದ ಲೇಖಕ ಮತ್ತು ಡಾ. ಅಕ್ಷಯ್ ಕುಮಾರ್ ಎಂ ಕಾಳೆ

88. "ಅಂತಾರಾಷ್ಟ್ರೀಯ ಪರ್ವತ ದಿನ (International Mountain Day)" ಯಾವ ದಿನದಂದು ಆಚರಿಸಲಾಗುತ್ತದೆ?
ಅ) ಡಿಸೆಂಬರ್ 11
ಆ) ಡಿಸೆಂಬರ್ 10
ಇ) ಡಿಸೆಂಬರ್ 12
ಈ) ಡಿಸೆಂಬರ್ 13
ಡಿಸೆಂಬರ್ 11
ಅಂತಾರಾಷ್ಟ್ರೀಯ ಪರ್ವತ ದಿನವನ್ನು ಡಿಸೆಂಬರ್ 11 ರಂದು ಆಚರಿಸಲಾಗುತ್ತದೆ. "Mountain cultures: Celebrating diversity and strengthening identity" ಇದು ಈ ವರ್ಷ ಪರ್ವತ ದಿನದ ಧ್ಯೇಯವಾಕ್ಯ.

89. ವಿಶ್ವದ ಅತ್ಯಂತ ಆಳದ ಮತ್ತು ಉದ್ದದ ಸಂಚಾರ ಸುರಂಗ "ಗಾತ್ಹರ್ಡ್ ಬೇಸ್ ಟನಲ್ (Gotthard Base Tunnel)" ಯಾವ ದೇಶದಲ್ಲಿದೆ?
ಅ) ಸ್ವಿಟ್ಜರ್ಲ್ಯಾಂಡ್
ಆ) ರಷ್ಯಾ
ಇ) ಕೆನಡಾ
ಈ) ಜಪಾನ್
ಸ್ವಿಟ್ಜರ್ಲ್ಯಾಂಡ್
ವಿಶ್ವದ ಅತ್ಯಂತ ಆಳದ ಮತ್ತು ಉದ್ದದ ಸಂಚಾರ ಸುರಂಗ "ಗಾತ್ಹರ್ಡ್ ಬೇಸ್ ಟನಲ್" ಸ್ವಿಟ್ಜರ್ಲ್ಯಾಂಡ್ ನಲ್ಲಿದೆ. ಡಿಸೆಂಬರ್ 11 ರಂದು ಈ ಸಂಚಾರ ಸುರಂಗದಲ್ಲಿ ಅಧಿಕೃತವಾಗಿ ರೈಲು ಸಂಚಾರ ಆರಂಭಿಸಲಾಯಿತು. 57 ಕಿ.ಮೀ ಉದ್ದದ ಈ ಟನಲ್ ಉತ್ತರ ಮತ್ತು ದಕ್ಷಿಣ ಐರೋಪ್ಯ ನಡುವೆ ಆಲ್ಪ್ಸ್ ಪರ್ವತದಡಿ ಸಂಚಾರ ಸಂಪರ್ಕ ಕಲ್ಪಿಸುತ್ತದೆ. ಜಪಾನಿನ ಸೈಕನ್



www.karunaduexams.com

ರೈಲು ಸುರಂಗ ಮಾರ್ಗ ಇದುವರೆಗೂ ವಿಶ್ವದ ಅತಿ ದೊಡ್ಡ ಸುರಂಗವೆನಿಸಿತ್ತು. ಇದರ ಉದ್ದ 53.9 ಕಿ.ಮೀ.

90. ಐತಿಹಾಸಿಕ "ಚಂದ್ರಗಿರಿ ಕೋಟೆ" ಯಾವ ರಾಜ್ಯದಲ್ಲಿದೆ?
ಅ) ಆಂಧ್ರ ಪ್ರದೇಶ
ಆ) ತಮಿಳುನಾಡು
ಇ) ಕರ್ನಾಟಕ
ಈ) ಮಹಾರಾಷ್ಟ್ರ
ಚಂದ್ರಗಿರಿ ಕೋಟೆ ಆಂಧ್ರ ಪ್ರದೇಶದ ತಿರುಪತಿಯಲ್ಲಿದೆ. ಭಾರತೀಯ ಪುರಾತತ್ವ ಇಲಾಖೆಯಡಿ ಕೋಟೆಯನ್ನು ಸಂರಕ್ಷಿಸಲಾಗಿದೆ. ಕೇರಳದ ಕಾಸರಗೋಡು ಜಿಲ್ಲೆಯಲ್ಲೂ ಇದೇ ಹೆಸರಿನ ಕೋಟೆಯನ್ನು ಕಾಣಬಹುದು.

91. ಈ ಕೆಳಗಿನ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಗಳನ್ನು ಗಮನಿಸಿ:
I) ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ
II) ರಾಜೀವ್ ಗಾಂಧಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ
III) ಇಂದಿರಾಗಾಂಧಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ
IV) ಸರ್ದಾರ ವಲ್ಲಬ್ ಬಾಯಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ
ಮೇಲಿನ ಯಾವುವು ಕಾರ್ಬನ್ ನ್ಯೂಟ್ರಲ್ ಸ್ಥಾನಮಾನ ಪಡೆದುಕೊಂಡ ವಿಮಾನ ನಿಲ್ದಾಣಗಳಾಗಿವೆ?
ಅ) I & II
ಆ) II & III
ಇ) I, II & III
ಈ) ಮೇಲಿನ ಎಲ್ಲವೂ
II & III
ಹೈದ್ರಾಬಾದಿನ ರಾಜೀವ್ ಗಾಂಧಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಏಷ್ಯಾ ಫೆಸಿಫಿಕ್ ವಲಯದಲ್ಲಿ ಕಾರ್ಬನ್ ನ್ಯೂಟ್ರಲ್ ಸ್ಥಾನಮಾನ ಪಡೆದುಕೊಂಡ ಎರಡನೇ ವಿಮಾನ ನಿಲ್ದಾಣವೆಂಬ ಗೌರವಕ್ಕೆ ಇತ್ತೀಚೆಗೆ ಪಾತ್ರವಾಗಿದೆ. ಇದಕ್ಕೂ ಮುಂಚೆ ನವದೆಹಲಿಯ ಇಂದಿರಾಗಾಂಧಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಕಾರ್ಬನ್ ನ್ಯೂಟ್ರಲ್ ಸ್ಥಾನಮಾನ ಪಡೆದುಕೊಂಡ ಏಷ್ಯಾ ಫೆಸಿಫಿಕ್ ವಲಯದ ಮೊದಲ ವಿಮಾನ ನಿಲ್ದಾಣವಾಗಿತ್ತು. ಕಾರ್ಬನ್ ಹೊರಸೂಸುವಿಕೆಯನ್ನು ಗಣನೀಯವಾಗಿ ತಗ್ಗಿಸಿ ಸಾಧನೆ ಮಾಡುವ ವಿಮಾನ ನಿಲ್ದಾಣಗಳಿಗೆ ಈ ಸ್ಥಾನಮಾನವನ್ನು ನೀಡಲಾಗುತ್ತದೆ.

92. ಈ ಮುಂದಿನ ಯಾವುದನ್ನು "ನಗೆ ಅನಿಲವೆಂದು (Laughing Gas)" ಕರೆಯಲಾಗುತ್ತದೆ?
ಅ) ನೈಟ್ರೋಜನ್
ಆ) ನೈಟ್ರಸ್ ಆಕ್ಸೈಡ್
ಇ) ನೈಟ್ರಿಕ್ ಆಕ್ಸೈಡ್
ಈ) ನೈಟ್ರೋಜನ್ ಪೆಂಟಾ ಆಕ್ಸೈಡ್
ನೈಟ್ರಸ್ ಆಕ್ಸೈಡ್ (Nitrous Oxide)

93. ದೇಶದ ಮೊದಲ ಭೂಚಲಚರ ಬಸ್ (Amphibious Bus) ಯೋಜನೆಯನ್ನು ಯಾವ ರಾಜ್ಯದಲ್ಲಿ ಪ್ರಾರಂಭಿಸಲಾಗಿದೆ?

www.karunadueexams.com

ಅ) ಪಂಜಾಬ್
ಆ) ಕೇರಳ
ಇ) ಮಹಾರಾಷ್ಟ್ರ
ಈ) ಗುಜರಾತ್
ಪಂಜಾಬ್
ದೇಶದ ಮೊದಲ ಭೂಜಲಚರ ಬಸ್ ಸೇವೆಯನ್ನು ಪಂಜಾಬ್ ರಾಜ್ಯ ಸರ್ಕಾರ ಆರಂಭಿಸಿದೆ. "ಹರಿಕೆ ಕ್ರೂಸ್" ಹೆಸರಿನ ಈ ಬಸ್ ಸೇವೆಯನ್ನು ಪಂಜಾಬ್ ನ ಅಮೃತ್ ಸರದ ಬಳಿ ಇರುವ ಹರಿಕೆ ಸರೋವರದಲ್ಲಿ ಆರಂಭಿಸಲಾಗಿದೆ. ಭೂಮಿ ಮತ್ತು ನೀರು ಎರಡರ ಮೇಲೂ ಈ ಬಸ್ ಸಂಚರಿಸಲಿದೆ. ಇದಕ್ಕಾಗಿ ಪಂಜಾನ್ ಸರ್ಕಾರ ರೂ 11 ಕೋಟಿ ವ್ಯಯಿಸಿದೆ. 34 ಆಸನಗಳನ್ನು ಹೊಂದಿರುವ ಈ ಬಸ್ ಅಮೃತಸರದಿಂದ ಹರಿಕೆ ಸರೋವರದ ವರೆಗೆ 13 ಕಿ.ಮೀ ಚಲಿಸಲಿದೆ. ಆನಂತರ 4 ಕಿ.ಮೀ ನೀರಿನ ಮೇಲೆ ಚಲಿಸುತ್ತದೆ.

94. ಯಾವ ರಾಜ್ಯ ಸಾರ್ವಜನಿಕ ಪಡಿತರ ವಿತರಣೆ ವ್ಯವಸ್ಥೆಯನ್ನು ಬಲಗೊಳಿಸಲು ಟಾಟಾ ಟ್ರಸ್ಟ ನೊಂದಿಗೆ ಒಪ್ಪಂದಕ್ಕೆ ಸಹಿ ಹಾಕಿದೆ?
ಅ) ಉತ್ತರ ಪ್ರದೇಶ
ಆ) ಜಾರ್ಖಂಡ್
ಇ) ಅರುಣಾಚಲ ಪ್ರದೇಶ
ಈ) ತೆಲಂಗಣ
ಉತ್ತರ ಪ್ರದೇಶ
ಉತ್ತರ ಪ್ರದೇಶ ಸರ್ಕಾರ ರಾಜ್ಯದ ಸಾರ್ವಜನಿಕ ಪಡಿತರ ವಿತರಣೆ ವ್ಯವಸ್ಥೆಯನ್ನು ಬಲಪಡಿಸುವ ಸಲುವಾಗಿ ಟಾಟಾ ಟ್ರಸ್ಟ ನೊಂದಿಗೆ ಕೈಜೋಡಿಸಿದೆ. ಅದರಂತೆ ಲಕ್ನೋದ ನ್ಯಾಯಬೆಲೆ ಅಂಗಡಿಗಳಲ್ಲಿ ಎಲೆಕ್ಟ್ರಾನಿಕ್ ಪಾಯಿಂಟ್ ಆಫ್ ಸೇಲ್ ಡಿವೈಸ್ (Electronic point of sale of device)ಗಳನ್ನು ಅಳವಡಿಸಿದ್ದು, ಆಧಾರ್ ಕಾರ್ಡ್ ಆಧರಿತ ವಿತರಣೆ ವ್ಯವಸ್ಥೆಯನ್ನು ಜಾರಿಗೆ ತರಲಾಗಿದೆ.

95. "2016 ಫಿಫಾ ಬ್ಯಾಲನ್ ಡಿ ಒರ್ ಆರ್ಡರ್ (FIFA Ballon d' Or Award)" ಪ್ರಶಸ್ತಿ ಪಡೆದ ಫುಟ್ಬಾಲ್ ಆಟಗಾರ ಯಾರು?
ಅ) ನೇಮರ್
ಆ) ಕ್ರಿಸ್ಟಿಯಾನೋ ರೋನಾಲ್ಡೊ
ಇ) ಲಿಯೊನೆಲ್ ಮೆಸ್ಸಿ
ಈ) ಅಂಟೊನೆ ಗ್ರೀಜ್ ಮನ್
ಕ್ರಿಸ್ಟಿಯಾನೋ ರೋನಾಲ್ಡೊ
ಪೋರ್ಚಗೀಸ್ ನ ಪ್ರಖ್ಯಾತ ಫುಟ್ಬಾಲ್ ಆಟಗಾರ ಕ್ರಿಸ್ಟಿಯಾನೋ ರೋನಾಲ್ಡೊ ರವರು 2016 ಫಿಫಾ ಬ್ಯಾಲನ್ ಡಿ ಒರ್ ಆರ್ಡರ್ ಪ್ರಶಸ್ತಿಯನ್ನು ತಮ್ಮದಾಗಿಸಿಕೊಂಡಿದ್ದಾರೆ. ರೋನಾಲ್ಡೊ ರವರಿಗೆ ಇದು 4ನೇ ಫಿಫಾ ಬ್ಯಾಲನ್ ಡಿ ಒರ್ ಆರ್ಡರ್ ಪ್ರಶಸ್ತಿಯಾಗಿದೆ.

96. ಭಾರತದ ಅತಿ ದೊಡ್ಡ ಒಳಾಂಗಣ ಕ್ರೀಡಾಂಗಣ (Indoor Stadium) ಯಾವ ರಾಜ್ಯದಲ್ಲಿ ಸ್ಥಾಪನೆಯಾಗಲಿದೆ?
ಅ) ಗುಜರಾತ್
ಆ) ಪಶ್ಚಿಮ ಬಂಗಾಳ
ಇ) ಆಂಧ್ರ ಪ್ರದೇಶ

www.karunaduexams.com

ಈ) ಹರಿಯಾಣ
ಪಶ್ಚಿಮ ಬಂಗಾಳ
ಪಶ್ಚಿಮ ಬಂಗಾಳದ ಕೊಲ್ಕತ್ತ ಬಳಿ ದೇಶದ ಅತಿ ದೊಡ್ಡ ಒಳಾಂಗಣ ಕ್ರೀಡಾಂಗಣ ಸ್ಥಾಪನೆಯಾಗಲಿದೆ. ಸುಮಾರು 10 ಎಕರೆ ವಿಸ್ತೀರ್ಣದಲ್ಲಿ ತಲೆಯೆತ್ತಲಿರುವ ಈ ಕ್ರೀಡಾಂಗಣದಲ್ಲಿ ಒಂದೇ ಬಾರಿಗೆ 15,400 ಜನರು ಕೂತು ವೀಕ್ಷಿಸಬಹುದಾಗಿದೆ. ಲಾನ್ ಟೆನ್ನಿಸ್, ಖೋಖೋ, ಕಬಡ್ಡಿ, ಬ್ಯಾಡ್ಮಿಂಟನ್, ಬ್ಯಾಸ್ಕೆಟ್ ಬಾಲ್ ಮತ್ತು ಟೆನ್ನಿಸ್ ಕೋರ್ಟ್ ಗಳನ್ನು ಇದು ಒಳಗೊಂಡಿರಲಿದೆ.

97. 6ನೇ ಏಷ್ಯಾ ಫೆಸಿಫಿಕ್ ವಸತಿ ಮತ್ತು ನಗರಾಭಿವೃದ್ದಿ ಅಧಿಕಾರಿಗಳ ಸಮ್ಮೇಳನ ಯಾವ ನಗರದಲ್ಲಿ ಆರಂಭಗೊಂಡಿದೆ?
ಅ) ರಾಂಚಿ
ಆ) ಕೊಚ್ಚಿ
ಇ) ನವ ದೆಹಲಿ
ಈ) ಕೊಲ್ಕತ್ತ
ನವ ದೆಹಲಿ
6ನೇ ಏಷ್ಯಾ ಫೆಸಿಫಿಕ್ ವಸತಿ ಮತ್ತು ನಗರಾಭಿವೃದ್ದಿ ಅಧಿಕಾರಿಗಳ ಸಮ್ಮೇಳನವನ್ನು ಕೇಂದ್ರ ನಗರಾಭಿವೃದ್ದಿ ಸಚಿವ ವೆಂಕಯ್ಯ ನಾಯ್ಡು ರವರು ನವದೆಹಲಿಯಲ್ಲಿ ಉದ್ಘಾಟಿಸಿದರು. ಮೂರು ದಿನಗಳ ಕಾಲ ನಡೆಯುವ ಸಮ್ಮೇಳನದಲ್ಲಿ ನಗರೀಕರಣ ಮತ್ತು ನಗರೀಕರಣಕ್ಕೆ ಸಂಬಂಧಿಸಿದ ಸಮಸ್ಯೆಗಳ ಬಗ್ಗೆ ಚರ್ಚಿಸಲಾಗುವುದು.

98. ಏಷ್ಯಾ ಅಭಿವೃದ್ದಿ ಬ್ಯಾಂಕ್ ನ "ಏಷ್ಯಾ ಡೆವಲೆಪ್ ಮೆಂಟ್ ಔಟ್ ಲುಕ್-2016" ಪ್ರಕಾರ ಭಾರತದ ಆರ್ಥಿಕ ಬೆಳವಣಿಗೆ 2016-17 ಸಾಲಿನಲ್ಲಿ ಎಷ್ಟಿರಲಿದೆ?
ಅ) 7.2%
ಆ) 7.4%
ಇ) 7.0%
ಈ) 7.6%
7.0%
ಏಷ್ಯಾ ಅಭಿವೃದ್ದಿ ಬ್ಯಾಂಕ್ ನ "ಏಷ್ಯಾ ಡೆವಲೆಪ್ ಮೆಂಟ್ ಔಟ್ ಲುಕ್-2016" ಪ್ರಕಾರ ಭಾರತದ ಆರ್ಥಿಕ ಬೆಳವಣಿಗೆ 2016-17 ಸಾಲಿನಲ್ಲಿ ಶೇ 7.0% ಇರಲಿದೆ. ಈ ಮುಂಚೆ ಶೇ 7.4% ಇರಲಿದೆ ಎನ್ನಲಾಗಿತ್ತು. ಕೃಷಿ ಕ್ಷೇತ್ರದಲ್ಲಿ ಮಂದಗತಿ ಬೆಳವಣಿಗೆ, ಬಂಡವಾಳ ಹೂಡಿಕೆಯಲ್ಲಿ ಕೊರತೆ ಮತ್ತು ಕೇಂದ್ರ ಸರ್ಕಾರದ ನೋಟು ರದ್ದು ನಿರ್ಣಯದಿಂದ ನಗದು ಕೊರತೆ ಉಂಟಾಗಿರುವುದು ಬೆಳವಣಿಗೆ ಕುಂಠಿತವಾಗಲು ಕಾರಣ ಎನ್ನಲಾಗಿದೆ.

99. ವಿಶ್ವ ಬ್ಯಾಡ್ಮಿಂಟನ್ ಫೆಡರೇಶನ್ ನೀಡುವ "2016 ವರ್ಷದ ಸುಧಾರಿತ ಆಟಗಾರ್ತಿ ಪ್ರಶಸ್ತಿ (Most Improved Player)" ಯಾರಿಗೆ ಲಭಿಸಿದೆ?
ಅ) ಕ್ಯಾರೊಲಿನಾ ಮರಿನ್
ಆ) ಪಿ ವಿ ಸಿಂಧು
ಇ) ಸೈನಾ ನೆಹ್ವಾಲ್
ಈ) ಯೂ ಚೆನ್
ಪಿ ವಿ ಸಿಂಧು

www.karunaduexams.com

ರಿಯೋ ಒಲಿಂಪಿಕ್ಸ್‌ನಲ್ಲಿ ಬೆಳ್ಳಿ ಪದಕ ಜಯಿಸಿದ ಭಾರತದ ಬ್ಯಾಡ್ಮಿಂಟನ್ ಆಟಗಾರ್ತಿ ಪಿ.ವಿ. ಸಿಂಧು ವಿಶ್ವ ಬ್ಯಾಡ್ಮಿಂಟನ್ ಫೆಡರೇಶನ್ (ಬಿಡಬ್ಲ್ಯೂಎಫ್) ನೀಡುವ 'ವರ್ಷದ ಸುಧಾರಿತ ಆಟಗಾರ್ತಿ' ಪ್ರಶಸ್ತಿಗೆ ಪಡೆದುಕೊಂಡಿದ್ದಾರೆ. ದುಬೈನಲ್ಲಿ ನಡೆದ ಕಾರ್ಯಕ್ರಮದಲ್ಲಿ ಸಿಂಧು ಪ್ರಶಸ್ತಿ ಸ್ವೀಕರಿಸಿದ್ದಾರೆ. ಪುರುಷರ ವಿಭಾಗ ವರ್ಷದ ಆಟಗಾರ ಪ್ರಶಸ್ತಿ ಮಲೇಷಿಯಾದ ಆಟಗಾರ ಲಿ ಚಾಂಗ್ ವಿ ಪಾಲಾಯಿತು.

100. ಇತ್ತೀಚೆಗೆ ನಿಧನರಾದ ಖ್ಯಾತ ಅರ್ಥಶಾಸ್ತ್ರಜ್ಞ ಮತ್ತು ನೊಬೆಲ್ ಪ್ರಶಸ್ತಿ ಪುರಸ್ಕೃತ ಥಾಮಸ್ ಶೆಲ್ಲಿಂಗ್ ಯಾವ ದೇಶದವರು?

ಅ) ಅಮೆರಿಕ

ಆ) ಫ್ರಾನ್ಸ್

ಇ) ಜಪಾನ್

ಈ) ಜರ್ಮನಿ

ಅಮೆರಿಕ

ಖ್ಯಾತ ಅರ್ಥಶಾಸ್ತ್ರಜ್ಞ ಮತ್ತು ನೊಬೆಲ್ ಪ್ರಶಸ್ತಿ ಪುರಸ್ಕೃತ ಥಾಮಸ್ ಶೆಲ್ಲಿಂಗ್ ನಿಧನರಾದರು. 2005ರಲ್ಲಿ ಅರ್ಥಶಾಸ್ತ್ರ ವಿಭಾಗದಲ್ಲಿ ರಾಬರ್ಟ್ ಔಮನ್ನ್ ರೊಂದಿಗೆ ಥಾಮಸ್ ಶೆಲ್ಲಿಂಗ್ ರವರು ಜಂಟಿ ನೊಬೆಲ್ ಪ್ರಶಸ್ತಿಗೆ ಭಾಜನರಾಗಿದ್ದರು. ಹಾರ್ವರ್ಡ್ ವಿಶ್ವವಿದ್ಯಾಲಯ ಹಾಗೂ ಮೆರಿಲ್ಯಾಂಡ್ ವಿಶ್ವವಿದ್ಯಾಲಯಗಳಲ್ಲಿ ಪ್ರೊಫೆಸರ್ ಆಗಿದ್ದ ಥಾಮಸ್ ಶೆಲ್ಲಿಂಗ್ ಅವರು, ಪರಮಾಣು ತಂತ್ರಗಾರಿಕೆಯನ್ನು ಗೇಮ್ ಥಿಯರಿ ಮೂಲಕ ವಿವರಿಸಿದ್ದರು. ಥಾಮಸ್ ಶೆಲ್ಲಿಂಗ್ ಅವರ ಗೇಮ್ ಥಿಯರಿ ಗಣಿತಶಾಸ್ತ್ರದ ಅಧ್ಯಯನವಾಗಿದ್ದು, ಸ್ಪರ್ಧಾತ್ಮಕ ಸಂದರ್ಭಗಳ ತಂತ್ರಗಾರಿಕೆಯಾಗಿವೆ. ಇವರ ಸಾಧನೆಯನ್ನು ಪುರಸ್ಕರಿಸಿ ಅವರಿಗೆ 2005ರಲ್ಲಿ ನೊಬೆಲ್ ಪಾರಿತೋಷಕ ನೀಡಲಾಗಿತ್ತು.

101. ಇಂಡಿಯನ್ ಕೌನ್ಸಿಲ್ ಆಫ್ ಫುಡ್ ಅಂಡ್ ಅಗ್ರಿಕಲ್ಚರ್ (ICAF)ನ 2016 ಜಾಗತಿಕ ಕೃಷಿ ನಾಯಕತ್ವ ಪ್ರಶಸ್ತಿಯನ್ನು ಯಾರಿಗೆ ನೀಡಲಾಗಿದೆ?
ಅ) ಶರದ್ ಪವರ್
ಆ) ರತನ್ ಟಾಟಾ
ಇ) ರಾಜೇಂದ್ರ ಸಿಂಗ್
ಈ) ಸ್ವಾಮಿನಾಥನ್
ರತನ್ ಟಾಟಾ
ಟಾಟಾ ಸನ್ಸ್ ನ ಹಂಗಾಮಿ ಅಧ್ಯಕ್ಷರಾದ ರತನ್ ಟಾಟಾ ರವರಿಗೆ ಇಂಡಿಯನ್ ಕೌನ್ಸಿಲ್ ಆಫ್ ಫುಡ್ ಅಂಡ್ ಅಗ್ರಿಕಲ್ಚರ್ (ICAF)ನ 2016 ಜಾಗತಿಕ ಕೃಷಿ ನಾಯಕತ್ವ ಪ್ರಶಸ್ತಿಯನ್ನು ನೀಡಲಾಗಿದೆ. ಮಹಾರಾಷ್ಟ್ರದ ಮುಂಬೈನಲ್ಲಿ ನಡೆದ ಸಮಾರಂಭದಲ್ಲಿ ಪ್ರಶಸ್ತಿಯನ್ನು ಪ್ರಧಾನ ಮಾಡಲಾಯಿತು. ತಮ್ಮ ಎರಡು ದಶಕಗಳ ಅವಧಿಯಲ್ಲಿ ಟಾಟಾ ಸನ್ಸ್ ಸಂಸ್ಥೆಯನ್ನು ಜಾಗತಿಕ ಮಟ್ಟದಲ್ಲಿ ಕೊಂಡಯ್ಯುವಲ್ಲಿ ರತನ್ ಟಾಟಾ ರವರು ನೀಡಿರುವ ಕೊಡುಗೆಯನ್ನು ಗಮನಿಸಿ ಈ ಪ್ರಶಸ್ತಿಯನ್ನು ನೀಡಲಾಗಿದೆ.

www.karunaduexams.com

102. ಫೋರ್ಬ್ಸ್ ನಿಯತಕಾಲಿಕೆಯ "2016ನೇ ಸಾಲಿನ ವಿಶ್ವದ ಅತ್ಯಂತ ಪ್ರಭಾವಶಾಲಿ ವ್ಯಕ್ತಿಗಳ ಪಟ್ಟಿಯಲ್ಲಿ ಮೊದಲ ಸ್ಥಾನ ಯಾರಿಗೆ ಲಭಿಸಿದೆ?

ಅ) ನರೇಂದ್ರ ಮೋದಿ

ಆ) ಡೋನಾಲ್ಡ್ ಟ್ರಂಪ್

ಇ) ವ್ಲಾದಿಮಿರ್ ಪುಟಿನ್

ಈ) ಹಿಲರಿ ಕ್ಲಿಂಟನ್

ವ್ಲಾದಿಮಿರ್ ಪುಟಿನ್

ಫೋರ್ಬ್ಸ್ ನಿಯತಕಾಲಿಕೆಯ "2016ನೇ ಸಾಲಿನ ವಿಶ್ವದ ಅತ್ಯಂತ ಪ್ರಭಾವಶಾಲಿ ವ್ಯಕ್ತಿಗಳ ಪಟ್ಟಿಯಲ್ಲಿ ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅಗ್ರಸ್ಥಾನದಲ್ಲಿದ್ರೆ, ಎರಡನೇ ಸ್ಥಾನ ಅಮೆರಿಕದ ನೂತನ ಅಧ್ಯಕ್ಷರಾಗಿ ಆಯ್ಕೆಯಾಗಿರುವ ಡೊನಾಲ್ಡ್ ಟ್ರಂಪ್ ಅವರ ಪಾಲಾಗಿದೆ. ಪುಟಿನ್ ಸತತ ನಾಲ್ಕನೇ ಬಾರಿ ಮೊದಲ ಸ್ಥಾನದಲ್ಲಿ ಕಾಣಿಸಿಕೊಂಡಿರೋದು ವಿಶೇಷ. ಒಟ್ಟು 74 ಪ್ರಭಾವಶಾಲಿ ನಾಯಕರನ್ನು ಫೋರ್ಬ್ಸ್ ಪಟ್ಟಿ ಮಾಡಿದೆ. ಪ್ರಧಾನಿ ನರೇಂದ್ರ ಮೋದಿ ವಿಶ್ವದ 10 ಪ್ರಭಾವಶಾಲಿ ನಾಯಕರಲ್ಲಿ ಒಬ್ಬರು. ಈ ಪಟ್ಟಿಯಲ್ಲಿ ನಮೋಗೆ 9ನೇ ಸ್ಥಾನ ಲಭಿಸಿದೆ.

103. "2016 ದಿ ಎಕಾನಮಿಕ್ ಟೈಮ್ಸ್ ಏಷ್ಯನ್ ಬ್ಯುಸಿನೆಸ್ ಲೀಡರ್ ಸಮಾವೇಶ" ಯಾವ ದೇಶದಲ್ಲಿ ನಡೆಯಿತು?

ಅ) ಭಾರತ

ಆ) ಜಪಾನ್

ಇ) ಮಲೇಷಿಯಾ

ಈ) ಮ್ಯಾನ್ಮಾರ್

ಮಲೇಷಿಯಾ

2016 ದಿ ಎಕಾನಮಿಕ್ ಟೈಮ್ಸ್ ಏಷ್ಯನ್ ಬ್ಯುಸಿನೆಸ್ ಲೀಡರ್ ಸಮಾವೇಶ ಮಲೇಷಿಯಾದ ಕೌಲಲಾಂಪುರದಲ್ಲಿ ಡಿಸೆಂಬರ್ 14-15 ರಂದು ನಡೆಯಿತು. ಜಾಗತಿಕ ಮಟ್ಟದಲ್ಲಿ ಏಷ್ಯಾ ವಲಯವನ್ನು ವ್ಯವಹಾರ ಸ್ನೇಹಿಯನ್ನಾಗಿಸುವುದು ಈ ಸಮಾವೇಶದ ಉದ್ದೇಶ. ಸಮಾವೇಶದಲ್ಲಿ ಏಷ್ಯಾ ಮತ್ತು ಜಗತ್ತಿನ 400 ಕ್ಕೂ ಹೆಚ್ಚು ಸಿ ಮಟ್ಟದ ಕಾರ್ಯನಿರ್ವಾಹಕ ಅಧಿಕಾರಿಗಳು ಸಮಾವೇಶದಲ್ಲಿ ಭಾಗವಹಿಸಿದ್ದರು.

104. ಇತ್ತೀಚೆಗೆ ಬ್ರೆಜಿಲ್ ನ ರಿಯೋ ಡಿ ಜನೈರೊ ನಗರವನ್ನು ಅಧಿಕೃತವಾಗಿ ವಿಶ್ವ ಪರಂಪರಿಕ ಪಟ್ಟಿಗೆ ಸೇರ್ಪಡೆಗೊಳಿಸಲಾಗಿದೆ. ರಿಯೋ ಡಿ ಜನೈರೊ ನಗರವನ್ನು ಈ ಹೆಸರಿನಿಂದಲೂ ಕರೆಯಲಾಗುತ್ತದೆ ________?

ಅ) ಡೈಮೆಂಡ್ ಸಿಟಿ

ಆ) ಮಾರ್ವಲಸ್ ಸಿಟಿ

ಇ) ಮೌಂಟೇನ್ ಸಿಟಿ

ಈ) ಲೇಕ್ ಸಿಟಿ

ಮಾರ್ವಲಸ್ ಸಿಟಿ

ಬ್ರೆಜಿಲ್ ನ ರಿಯೋ ಡಿ ಜನೈರೊ ನಗರವನ್ನು ಅಧಿಕೃತವಾಗಿ ವಿಶ್ವ ಪರಂಪರಿಕ ಪಟ್ಟಿಗೆ ಸೇರ್ಪಡೆಗೊಳಿಸಲಾಗಿದೆ. ರಿಯೊ ಡಿ ಜನೈರೊ ನಗರಕ್ಕೆ ಯುನೆಸ್ಕೊ ಮಾನ್ಯತೆಯನ್ನು 2012ರಲ್ಲಿ ನೀಡಲಾಗಿತ್ತು. ಆದರೆ ಬ್ರೆಝಿಲ್ ನ ಅಧಿಕಾರಿಗಳು ಫ್ಲೆಮೆಂಗೊ ಪಾರ್ಕ್, ಶುಗರ್ ಲೋಫ್ ಪರ್ವತ, ಕೊರ್ಕವಡೊ, ಕೊಪಕಬಾನ ಸಮುದ್ರ, ಬೊಟಾನಿಕಲ್ ಗಾರ್ಡನ್ ಮತ್ತು ತಿಜುಕಾ ಅರಣ್ಯವನ್ನು ಹೇಗೆ ರಕ್ಷಣೆ ಮಾಡುತ್ತಾರೆ ಎಂಬ ಬಗ್ಗೆ ವರದಿ ಸಲ್ಲಿಸಲು 4 ವರ್ಷಗಳ

www.karunaduexams.com

ಕಾಲ ಸಮಯ ನೀಡಲಾಗಿತ್ತು. ಹೀಗಾಗಿ ಈ ವರ್ಷ ವಿಶ್ವ ಪಾರಂಪರಿಕ ತಾಣದ ಪಟ್ಟಿಯಲ್ಲಿ ರಿಯೊದ ಹೆಸರು ಅಧಿಕೃತವಾಗಿ ಸೇರಿಕೊಂಡಿದೆ. ರಿಯೋ ಡಿ ಜನ್ಯೆರೊ ನಗರ ಮಾರ್ವಲಸ್ ಸಿಟಿ (Marvellous City ) ಎಂಬ ನಿಕ್ ನೇಮ್ ಹೊಂದಿದೆ.

105. ಯಾವ ರಾಜ್ಯದಲ್ಲಿ ದೇಶದ ಮೊದಲ ಸ್ವಯಂಪ್ರೇರಿತ ಮಹಿಳಾ ಪೊಲೀಸ್ (Woman Police Volunteer) ಅಭಿಯಾನವನ್ನು ಆರಂಭಿಸಲಾಗಿದೆ?

ಅ) ಹರಿಯಾಣ
ಆ) ರಾಜಸ್ತಾನ
ಇ) ಮಧ್ಯ ಪ್ರದೇಶ
ಈ) ಕರ್ನಾಟಕ

ಹರಿಯಾಣ

ದೇಶದ ಮೊದಲ ಸ್ವಯಂಪ್ರೇರಿತ ಮಹಿಳಾ ಪೊಲೀಸ್ ಅಭಿಯಾನವನ್ನು ಹರಿಯಾಣದ ಕರ್ನಲ್ ಮತ್ತು ಮಹೇಂದ್ರಘರ್ ಜಿಲ್ಲೆಯಲ್ಲಿ ಆರಂಭಿಸಲಾಗಿದೆ. ಪೊಲೀಸ್ ಮತ್ತು ನಾಗರಿಕ ಜೊತೆ ಸಂಪರ್ಕ ಕೊಂಡಿಯಂತೆ ಇವರು ಕಾರ್ಯನಿರ್ವಹಿಸಲಿದ್ದಾರೆ. ಸ್ವಯಂಪ್ರೇರಿತ ಮಹಿಳಾ ಪೊಲೀಸ್ ಅಭಿಯಾನವನ್ನು ಕೇಂದ್ರ ಗೃಹ ಸಚಿವಾಲಯದ ಸಹಯೋಗದೊಂದಿಗೆ ಪ್ರಾರಂಭಿಸಲಾಗಿದೆ. ಸ್ವಯಂಪ್ರೇರಿತ ಮಹಿಳಾ ಪೊಲೀಸರಿಗೆ ರಾಜ್ಯ ಪೊಲೀಸ್ ಅಧಿಕಾರಿಗಳಿಂದ ತರಭೇತಿ ನೀಡಲಾಗುವುದು.

106. "2016 EKUVERIN" ಜಂಟಿ ಸಮರಭ್ಯಾಸ ಭಾರತ ಮತ್ತು ಯಾವ ದೇಶದ ನಡುವೆ ಪ್ರಾರಂಭಗೊಂಡಿದೆ?

ಅ) ಪಾಕಿಸ್ತಾನ
ಆ) ಆಫ್ಘಾನಿಸ್ತಾನ
ಇ) ಮಾಲ್ಡೀವ್ಸ್
ಈ) ಮ್ಯಾನ್ಮಾರ್

ಮಾಲ್ಡೀವ್ಸ್

ಭಾರತ ಮತ್ತು ಮಾಲ್ಡೀವ್ಸ್ ನಡುವಿನ ಜಂಟಿ ಸಮರಭ್ಯಾಸ "EKUVERIN"ನ 7ನೇ ಆವೃತ್ತಿ ಮಾಲ್ಡೀವ್ಸ್ ನ ಲಾಮು ಅಟಾಲ್ ನಲ್ಲಿ ಪ್ರಾರಂಭಗೊಂಡಿತು. ಉಭಯ ದೇಶಗಳ ನಡುವಿನ ಈ ಸಮರಭ್ಯಾಸ 14 ದಿನಗಳ ಕಾಲ ನಡೆಯಲಿದೆ. ಭಯೋತ್ಪಾದನೆ ವಿರುದ್ದ ಕಾರ್ಯಾಚರಣೆ ನಡೆಸುವುದು ಸೇರಿದಂತೆ ಉಭಯ ದೇಶಗಳ ನಡುವೆ ರಕ್ಷಣಾ ಸಂಬಂಧವನ್ನು ಬಲಗೊಳಿಸುವುದು ಈ ಸಮರಭ್ಯಾಸದ ಉದ್ದೇಶವಾಗಿದೆ.

107. ದೇಶದ ಮೊದಲ ತೃತೀಯ ಲಿಂಗಿ ಶಾಲೆ (Transgender School) ಈ ಕೆಳಗಿನ ಯಾವ ನಗರದಲ್ಲಿ ಸ್ಥಾಪನೆಗೊಳ್ಳಲಿದೆ?

ಅ) ಕೊಚ್ಚಿ
ಆ) ಮುಂಬೈ
ಇ) ಕೊಲ್ಕತ್ತ
ಈ) ಬೆಂಗಳೂರು

ಕೊಚ್ಚಿ

ದೇಶದ ಮೊದಲ ತೃತೀಯ ಲಿಂಗಿ ಶಾಲೆ ಕೇರಳದ ಕೊಚ್ಚಿಯಲ್ಲಿ ಸ್ಥಾಪನೆಯಾಗಲಿದೆ. ತೃತೀಯ ಲಿಂಗಿ ಹಕ್ಕುಗಳ ಹೋರಾಟಗಾರ ಮತ್ತು ಕಲಾವಿದ ಕಲ್ಕಿ ಸುಬ್ರಮಣ್ಯಂ ರವರು ಈ ಶಾಲೆಯನ್ನು ಕೊಚ್ಚಿಯ ಸಹಜ್ ಇಂಟರ್ ನ್ಯಾಷನಲ್ ಸ್ಕೂಲ್ ನಲ್ಲಿ ಸ್ಥಾಪಿಸಲಿದ್ದಾರೆ. ಆರು

www.karunaduexams.com

ಜನ ತೃತೀಯ ಲಿಂಗಿಗಳು ಈ ಶಾಲೆಯನ್ನು ನಡೆಸಲಿದ್ದು, ಹತ್ತು ತೃತೀಯ ಲಿಂಗಿ ಮಕ್ಕಳಿಗೆ ವಿದ್ಯಾಭ್ಯಾಸ ಅವಕಾಶ ಕಲ್ಪಿಸಲಿದ್ದಾರೆ.

108. ಭಾರತೀಯ ಬ್ಯಾಂಕ್ಸ್ ಅಸೋಸಿಯೇಶನ್ ನ ನೂತನ ಮುಖ್ಯಕಾರ್ಯನಿರ್ವಾಹಕರಾಗಿ ಯಾರು ನೇಮಕಗೊಂಡಿದ್ದಾರೆ?

ಅ) ಮಹಾಂತೇಶ್ ಪಾಟೀಲ್

ಆ) ವಿ ಜಿ ಕಣ್ಣನ್

ಇ) ಕಿರಣ್ ದೇಸಾಯಿ

ಈ) ಸರ್ಜಿತ್ ಸಿಂಗ್

ವಿ ಜಿ ಕಣ್ಣನ್

ಭಾರತೀಯ ಸ್ಟೇಟ್ ಬ್ಯಾಂಕ್ ನ ಮಾಜಿ ಮ್ಯಾನೇಜಿಂಗ್ ಡೈರೆಕ್ಟರ್ ವಿ ಜಿ ಕಣ್ಣನ್ ರವರು ಭಾರತೀಯ ಬ್ಯಾಂಕ್ಸ್ ಅಸೋಸಿಯೇಶನ್ ನ ನೂತನ ಮುಖ್ಯಕಾರ್ಯನಿರ್ವಾಹಕರಾಗಿ ನೇಮಕಗೊಂಡಿದ್ದಾರೆ. ಎಂ. ವಿ ಟಂಕಸಾಲೆ ಅವರಿಂದ ತೆರವಾಗಿದ್ದ ಸ್ಥಾನಕ್ಕೆ ಕಣ್ಣನ್ ನೇಮಕಗೊಂಡಿದ್ದಾರೆ.

109. "ಐಸಿಸಿ 2016 ವರ್ಷದ ಮಹಿಳಾ ಕ್ರಿಕೆಟ್ ತಂಡ"ಕ್ಕೆ ಆಯ್ಕೆಯಾಗಿರುವ ಭಾರತದ ಮಹಿಳಾ ಕ್ರಿಕೆಟ್ ಆಟಗಾರ್ತಿ ಯಾರು?

ಅ) ಜೂಲನ್ ಗೋಸ್ವಾಮಿ

ಆ) ಮೈಥಲಿ ರಾಜ್

ಇ) ಸ್ಮೃತಿ ಮಂದನ

ಈ) ವೇದಾ ಕೃಷ್ಣಮೂರ್ತಿ

ಸ್ಮೃತಿ ಮಂದನ

ಭಾರತದ ಪ್ರಸಿದ್ದ ಬ್ಯಾಟ್ಸ್ ವುಮನ್ ಆದ ಸ್ಮೃತಿ ಮಂದನ ರವರು "ಐಸಿಸಿ 2016 ವರ್ಷದ ಮಹಿಳಾ ಕ್ರಿಕೆಟ್ ತಂಡ"ಕ್ಕೆ ಆಯ್ಕೆಯಾಗಿರುವ ಭಾರತದ ಏಕೈಕ ಮಹಿಳಾ ಕ್ರಿಕೆಟ್ ಆಟಗಾರ್ತಿ. ವೆಸ್ಟ್ ಇಂಡೀಸ್ ನ ಸ್ಟಫನಿ ಟೈಲರ್ ಈ ತಂಡದ ನಾಯಕಿ. ಇದೇ ಮೊದಲ ಬಾರಿಗೆ ಐಸಿಸಿ ವರ್ಷದ ಮಹಿಳಾ ಕ್ರಿಕೆಟ್ ತಂಡವನ್ನು ಘೋಷಿಸಿದೆ.

110. "ಚಾಗೋಸ್ ದ್ವೀಪಸಮೂಹ (Chagos Archipelago)" ಎಲ್ಲಿದೆ?

ಅ) ಫೆಸಿಫಿಕ್ ಸಾಗರ

ಆ) ಹಿಂದೂ ಮಹಾಸಾಗರ

ಇ) ಮೆಡಿಟರೆನಿಯನ್ ಸಮುದ್ರ

ಈ) ಅಟ್ಲಾಂಟಿಕ್ ಸಾಗರ

ಹಿಂದೂ ಮಹಾಸಾಗರ

111. ವಿಶ್ವಸಂಸ್ಥೆಯ ಉಪ ಕಾರ್ಯದರ್ಶಿಯಾಗಿ ನೇಮಕಗೊಂಡಿರುವ ಅಮಿನ ಮೊಹಮ್ಮದ್ ರವರು ಯಾವ ದೇಶದವರು?

ಅ) ನೈಜೀರಿಯಾ

ಆ) ಇಥೋಪಿಯ

ಇ) ಸೌದಿ ಅರೇಬಿಯಾ

ಈ) ಮಂಗೋಲಿಯ

www.karunaduexams.com

ನೈಜೀರಿಯಾದ ಪರಿಸರ ಸಚಿವ ಅಮಿನ ಮೊಹಮ್ಮದ್ ರವರು ವಿಶ್ವಸಂಸ್ಥೆಯ ಉಪ ಕಾರ್ಯದರ್ಶಿಯಾಗಿ ಆಯ್ಕೆಯಾಗಿದ್ದಾರೆ. ವಿಶ್ವಸಂಸ್ಥೆಯ ಮಹಾ ಪ್ರಧಾನ ಕಾರ್ಯದರ್ಶಿ ಅಂಟೊನಿಯೊ ಗುಟೆರಸ್ ರವರು ಅಮಿನ ಅವರನ್ನು ಈ ಹುದ್ದೆಗೆ ನೇಮಕ ಮಾಡಿದ್ದಾರೆ.

112. ಈ ಮುಂದಿನ ಯಾವುದು ದೇಶದ ಮೊದಲ ಕಾರ್ಬನ್ ನ್ಯೂಟ್ರಲ್ ಜಿಲ್ಲೆ ಎನಿಸಲಿದೆ?

ಅ) ಪಣಜಿ

ಆ) ಮಜುಲಿ

ಇ) ಗ್ಯಾಂಟಕ್

ಈ) ಶಿಮ್ಲಾ

ಮಜುಲಿ

ವಿಶ್ವ ಪ್ರಸಿದ್ದ ನದಿ ದ್ವೀಪ ಜಿಲ್ಲೆ "ಮಜುಲಿ" ಭಾರತದ ಮೊದಲ ಕಾರ್ಬನ್ ನ್ಯೂಟ್ರಲ್ ಜಿಲ್ಲೆ ಎಂಬ ಗೌರವಕ್ಕೆ ಪಾತ್ರವಾಗಲು ಸಿದ್ದವಾಗಿದೆ. 2020 ರ ವೇಳೆಗೆ ಮಜುಲಿ ಕಾರ್ಬನ್ ನ್ಯೂಟ್ರಲ್ ಜಿಲ್ಲೆಯಾಗಿ ಹೊರಹೊಮ್ಮಲಿದೆ. ಇದಕ್ಕಾಗಿ ಹವಾಮಾನ ಬದಲಾವಣೆ ಮತ್ತು ಹಸಿರು ಮನೆ ಅನಿಲ ಹೊರಸೂಸುವಿಕೆಯನ್ನು ತಡೆಯಲು ಅಸ್ಸಾಂ ಸರ್ಕಾರ "ಸಸ್ಟೈನೆಬಲ್ ಆಕ್ಷನ್ ಫಾರ್ ಕ್ಲೈಮೆಟ್ ರಿಸೈಲೆಂಟ್ ಡೆಮಲಪ್ ಮೆಂಟ್ ಇನ್ ಮಜುಲಿ" ಯೋಜನೆ ಜಾರಿಗೊಳಿಸಿದೆ.

113. ಭಾರತೀಯ ಜೀವ ವಿಮಾ ನಿಗಮ (LIC)ದ ನೂತನ ಮುಖ್ಯಸ್ಥರಾಗಿ ಯಾರು ನೇಮಕಗೊಂಡಿದ್ದಾರೆ?

ಅ) ವಿ ಕೆ ಶರ್ಮಾ

ಆ) ಉಷಾ ಷಣ್ಮುಗಂ

ಇ) ಎಂ. ಕೆ. ರಾಯ್

ಈ) ರಮಣಿ ಶಂಕರ್

ವಿ ಕೆ ಶರ್ಮಾ

ಭಾರತೀಯ ಜೀವ ವಿಮಾ ನಿಗಮ (LIC)ದ ನೂತನ ಮುಖ್ಯಸ್ಥರಾಗಿ ವಿ ಕೆ ಶರ್ಮಾ ನೇಮಕಗೊಂಡಿದ್ದಾರೆ. ಶರ್ಮಾ ರವರು ಇದುವರೆಗೂ ಹಂಗಾಮಿ ಅಧ್ಯಕ್ಷರಾಗಿ ಕಾರ್ಯನಿರ್ವಹಿಸುತ್ತಿದ್ದರು. ಮುಂದಿನ ಐದು ವರ್ಷಗಳ ಕಾಲ ಇವರು ಅಧ್ಯಕ್ಷರಾಗಿ ಇರಲಿದ್ದಾರೆ.

114. "ತಾಲ್ ಫವಂಗ್ ಕುಟ್ ಉತ್ಸವ (Tal Favang Kut Festival)" ಯಾವ ರಾಜ್ಯದಲ್ಲಿ ಪ್ರಸಿದ್ದ ಸುಗ್ಗಿ ಹಬ್ಬ?

ಅ) ಅಸ್ಸಾಂ

ಆ) ನಾಗಲ್ಯಾಂಡ್

ಇ) ಮಿಜೋರಾಂ

ಈ) ಸಿಕ್ಕಿಂ

ಮಿಜೋರಾಂ

ವಿಜೋರಾಂನ ಪ್ರಸಿದ್ದ ಸುಗ್ಗಿ ಹಬ್ಬ ತಾಲ್ ಫವಂಗ್ ಕುಟ್ ಉತ್ಸವ ಮಿಜೋರಾಂನ ಐಜ್ವಾಲ್ ನಲ್ಲಿ ಆರಂಭಗೊಂಡಿದೆ. ಮಿಜೋರಾಂನ ಪ್ರವಾಸೋದ್ಯಮ ಇಲಾಖೆ ಮತ್ತು ಮಿಜೋರಾಂ ಸರ್ಕಾರ ಈ ಹಬ್ಬವನ್ನು ಆಯೋಜಿಸುತ್ತಿದೆ. ತಾಲ್ ಫವಂಗ್ ಕುಟ್ ಉತ್ಸವ ಸುಗ್ಗಿ ಉತ್ಸವವಾಗಿದ್ದು ಭತ್ತದ ಬೆಳೆಯನ್ನು ಕಟಾವು ಮಾಡಿದ ನಂತರ ಆಚರಿಸಲಾಗುವುದು.

www.karunaduexams.com

115. 6ನೇ ಬ್ರಿಕ್ಸ್ ಆರೋಗ್ಯ ಸಚಿವರ ಸಭೆ ಈ ಕೆಳಗಿನ ಯಾವ ನಗರದಲ್ಲಿ ನಡೆಯಿತು?
ಅ) ಬೀಜಿಂಗ್
ಆ) ನವದೆಹಲಿ
ಇ) ಕೇಪ್ ಟೌನ್
ಈ) ಮಾಸ್ಕೋ
ನವದೆಹಲಿ
ನವದೆಹಲಿಯಲ್ಲಿ 6ನೇ ಬ್ರಿಕ್ಸ್ ಆರೋಗ್ಯ ಸಚಿವರ ಸಭೆಯನ್ನು ಆಯೋಜಿಸಲಾಗಿತ್ತು. ಬ್ರಿಕ್ಸ್ ರಾಷ್ಟ್ರಗಳ ನಡುವೆ ಆರೋಗ್ಯ ಕ್ಷೇತ್ರದಲ್ಲಿ ಸಹಕಾರ ಸಾಧಿಸುವುದು ಮತ್ತು ಗೋವಾದಲ್ಲಿ ನಡೆದ ಬ್ರಿಕ್ಸ್ ಶೃಂಗಸಭೆಯಲ್ಲಿ ಆರೋಗ್ಯ ಕ್ಷೇತ್ರದ ಮೇಲೆ ಮಾಡಲಾದ ಘೋಷಣೆಯನ್ನು ಅಂಗೀಕರಿಸುವ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು. 7ನೇ ಬ್ರಿಕ್ಸ್ ಆರೋಗ್ಯ ಸಚಿವರ ಸಭೆ 2017ರಲ್ಲಿ ಚೀನಾದಲ್ಲಿ ನಡೆಯಲಿದೆ.

116. ಈ ಕೆಳಗಿನ ಯಾವ ಕೇಂದ್ರ ಸಚಿವಾಲಯ "ಸ್ವಸ್ಥ್ಯ ರಕ್ಷಾ ಕಾರ್ಯಕ್ರಮ (Swasthya Raksha Programme)" ಕ್ಕೆ ಚಾಲನೆ ನೀಡಿದೆ?
ಅ) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ
ಆ) ಆಯುಷ್ ಸಚಿವಾಲಯ
ಇ) ಪರಿಸರ ಸಚಿವಾಲಯ
ಈ) ಕುಡಿಯುವ ನೀರು ಮತ್ತು ನೈರ್ಮಲ್ಯ ಸಚಿವಾಲಯ
ಆಯುಷ್ ಸಚಿವಾಲಯ
ಹಳ್ಳಿಗಳಲ್ಲಿ ಆರೋಗ್ಯ ಮತ್ತು ಆರೋಗ್ಯ ಶಿಕ್ಷಣವನ್ನು ಉತ್ತೇಜಿಸುವ ಸಲುವಾಗಿ ಆಯುಷ್ ಸಚಿವಾಲಯ ಸ್ವಸ್ಥ್ಯ ರಕ್ಷಾ ಕಾರ್ಯಕ್ರಮವನ್ನು ಆರಂಭಿಸಿದೆ. ಸ್ವಸ್ಥ್ಯ ಪರೀಕ್ಷಣಾ ಕ್ಯಾಂಪ್ ಆಯೋಜಿಸುವುದು ಮತ್ತು ಆರೋಗ್ಯ/ಸ್ವಚ್ಛತೆ ಬಗ್ಗೆ ಅರಿವು ಮೂಡಿಸುವುದು ಈ ಕಾರ್ಯಕ್ರಮದ ಪ್ರಮುಖ ಉದ್ದೇಶ.

117. ಬಡವರಿಗೆ ಕಡಿಮೆ ದರದಲ್ಲಿ ಊಟ ಉಪಹಾರ ಪೂರೈಸುವ "ಅನ್ನಪೂರ್ಣ ರಸೊಯಿ" ಯೋಜನೆಯನ್ನು ಯಾವ ರಾಜ್ಯ ಇತ್ತೀಚೆಗೆ ಜಾರಿಗೆ ತಂದಿದೆ?
ಅ) ಗುಜರಾತ್
ಆ) ರಾಜಸ್ತಾನ
ಇ) ಮಧ್ಯ ಪ್ರದೇಶ
ಈ) ಹರಿಯಾಣ
ರಾಜಸ್ತಾನ
ಬಡವರಿಗೆ ಕಡಿಮೆ ದರದಲ್ಲಿ ಊಟ ಉಪಹಾರ ಪೂರೈಸುವ ಸಲುವಾಗಿ ರಾಜಸ್ತಾನ ಸರ್ಕಾರ ಅನ್ನಪೂರ್ಣ ರಸೊಯಿ ಯೋಜನೆಯನ್ನು ಜಾರಿಗೆ ತಂದಿದೆ. ಜೈಪುರದ ಮುನಿಸಿಪಾಲ್ ಕಾರ್ಪೋರೇಶನ್ ಕ್ಯಾಂಪಸ್ ನಲ್ಲಿ ಈ ಯೋಜನೆಗೆ ಚಾಲನೆ ನೀಡಲಾಯಿತು. ಪ್ರಾರಂಭಿಕ ಹಂತದಲ್ಲಿ 12 ನಗರಗಳಲ್ಲಿ ಈ ಯೋಜನೆಯನ್ನು ಜಾರಿಗೊಳಿಸಲಾಗುವುದು. ಆ ನಂತರ ರಾಜ್ಯದಾದ್ಯಂತ ವಿಸ್ತರಿಸಲಾಗುವುದು. ಯೋಜನೆಯಡಿ ಬಡ ಜನರಿಗೆ ರೂ 5ಕ್ಕೆ ಉಪಹಾರವನ್ನು ಮತ್ತು ರೂ 8ಕ್ಕೆ ಊಟವನ್ನು ನೀಡಲಾಗುವುದು. ರಾಜಸ್ತಾನದ ಸಾಂಪ್ರದಾಯಿಕ ಆಹಾರಗಳಾದ ದಾಲ್ ಬಾತಿ, ಕೂರ್ಮ, ಬಾಜ್ರ ರೊಟ್ಟಿ ಮತ್ತು ಕಿಚಡಿ ದೊರೆಯಲಿದೆ.

www.karunaduexams.com

118. ಕೇಂದ್ರ ಕಡಲ ಮೀನುಗಳ ಸಂಶೋಧನಾ ಸಂಸ್ಥೆ (Central Marine Fisheries Research Institute) ಎಲ್ಲಿದೆ?

ಅ) ಕೊಲ್ಕತ್ತಾ

ಆ) ಮಂಗಳೂರು

ಇ) ಕೊಚ್ಚಿ

ಈ) ಚೆನ್ನೈ

ಕೊಚ್ಚಿ

ಕೇಂದ್ರ ಕಡಲ ಮೀನುಗಳ ಸಂಶೋಧನಾ ಸಂಸ್ಥೆ ಕೇರಳದ ಕೊಚ್ಚಿಯಲ್ಲಿದೆ. 1947 ರಲ್ಲಿ ಕೃಷಿ ಸಚಿವಾಲಯದಡಿ ಈ ಸಂಸ್ಥೆಯನ್ನು ಸ್ಥಾಪಿಸಲಾಯಿತು. ಆನಂತರ 1967 ರಲ್ಲಿ ಭಾರತೀಯ ಕೃಷಿ ಸಂಶೋಧನಾ ಮಂಡಳಿಗೆ ವರ್ಗಾವಣೆ ಮಾಡಲಾಯಿತು.

119. ಈ ಕೆಳಗಿನ ಗ್ರಹಗಳನ್ನು ಗಮನಿಸಿ:

I) ಗುರು

II) ಮಂಗಳ

III) ಶುಕ್ರ

IV) ಭೂಮಿ

ಈ ಮೇಲಿನ ಯಾವ ಗ್ರಹಗಳು ಟ್ರೋಜನ್ ಕ್ಷುದ್ರಗ್ರಹಗಳನ್ನು ಹೊಂದಿವೆ?

ಅ) I, II & III

ಆ) II, III & IV

ಇ) I, II & IV

ಈ) I, II, III & IV

I, II, III & IV

ಯಾವುದೇ ಕ್ಷುದ್ರಗ್ರಹ ಒಂದು ಗ್ರಹದ ಜೊತೆಯಲ್ಲಿ ಒಂದೇ ಕಕ್ಷೆಯಲ್ಲಿ ಪರಿಭ್ರಮಿಸಿದರೆ ಅದನ್ನು ಟ್ರೋಜನ್ ಕ್ಷುದ್ರಗ್ರಹ ಎನ್ನಲಾಗುತ್ತದೆ. ಆದರೆ ಈ ಕ್ಷುದ್ರಗ್ರಹಗಳು ಯಾವುದೇ ಸಮಯದಲ್ಲೂ ಗ್ರಹಕ್ಕೆ ಅಪ್ಪಳಿಸುವುದಿಲ್ಲ. ನಮ್ಮ ಸೌರವ್ಯೂಹದಲ್ಲಿ ಆರು ಗ್ರಹಗಳು ಅಂದರೆ ಗುರು, ನೆಪ್ಚೂನ್, ಮಂಗಳ, ಶುಕ್ರ, ಯುರೇನಸ್ ಮತ್ತು ಭೂಮಿ ಟ್ರೋಜನ್ ಕ್ಷುದ್ರಗ್ರಹಗಳನ್ನು ಹೊಂದಿವೆ. 2010TK7 ಭೂಮಿಯ ಏಕೈಕ ಟ್ರೋಜನ್ ಕ್ಷುದ್ರಗ್ರಹವಾಗಿದೆ.

120. "ಡೆಕ್ಕನ್ ಒಡಿಸಿ (Deccan Odyssey)" ಯಾವ ರಾಜ್ಯದ ವಿಲಾಸಿ ಪ್ರವಾಸಿ ರೈಲು?

ಅ) ಕರ್ನಾಟಕ

ಆ) ಆಂಧ್ರ ಪ್ರದೇಶ

ಇ) ಮಹಾರಾಷ್ಟ್ರ

ಈ) ತಮಿಳುನಾಡು

ಮಹಾರಾಷ್ಟ್ರ

ಡೆಕ್ಕನ್ ಒಡಿಸಿ ಮಹಾರಾಷ್ಟ್ರ ರಾಜ್ಯದ ವಿಲಾಸಿ ಪ್ರವಾಸಿ ರೈಲು. ಮಹಾರಾಷ್ಟ್ರ ಸರ್ಕಾರ ಮತ್ತು ಭಾರತೀಯ ರೈಲ್ವೆ ಜಂಟಿಯಾಗಿ ಈ ರೈಲನ್ನು ಆರಂಭಿಸಿದೆ. ರಾಜಸ್ತಾನದ "ಪ್ಯಾಲೇಸ್ ಆನ್ ವೀಲ್" ಮಾದರಿಯಲ್ಲೇ ಈ ರೈಲನ್ನು ಆರಂಭಿಸಲಾಗಿದ್ದು, 2004 ರಿಂದ ಈ ರೈಲು ಸಂಚರಿಸುತ್ತಿದೆ. 21 ಭೋಗಿ ಹೊಂದಿರುವ ಈ ರೈಲು ಮಹಾರಾಷ್ಟ್ರ, ಆಂಧ್ರಪ್ರದೇಶ ಮತ್ತು ಕರ್ನಾಟಕದಾದ್ಯಂತ ಸಂಚರಿಸುತ್ತಿದೆ. ಇತ್ತೀಚೆಗೆ ಈ ರೈಲು ಕರ್ನಾಟಕದ ವಿಜಯಪುರಕ್ಕೆ ಆಗಮಿಸಿತ್ತು. ಇದೇ ಮಾದರಿಯಲ್ಲಿ ಕರ್ನಾಟಕ ರಾಜ್ಯ ಸಹ "ಗೋಲ್ಡನ್ ಚಾರಿಯಟ್" ರೈಲನ್ನು ಆರಂಭಿಸಿದೆ.

www.karunaduexams.com

121. ದೇಶದ ಮೊಟ್ಟ ಮೊದಲ “ಭಾರತೀಯ ಕೌಶಲ್ಯ ಸಂಸ್ಥೆ (Indian Institute of Skills)” ಯಾವ ರಾಜ್ಯದಲ್ಲಿ ಸ್ಥಾಪನೆಯಾಗಲಿದೆ?

ಅ) ಉತ್ತರ ಪ್ರದೇಶ

ಆ) ಮಹಾರಾಷ್ಟ್ರ

ಇ) ಕರ್ನಾಟಕ

ಈ) ಜಾರ್ಖಂಡ್

ಉತ್ತರ ಪ್ರದೇಶ

ಭಾರತದ ಮೊಟ್ಟ ಮೊದಲ “ಭಾರತೀಯ ಕೌಶಲ್ಯ ಸಂಸ್ಥೆ”ಗೆ ಪ್ರಧಾನಿ ಮೋದಿ ರವರು ಉತ್ತರ ಪ್ರದೇಶದ ಖಾನ್ಪುರದಲ್ಲಿ ಶಂಕುಸ್ಥಾಪನೆ ನೇರವೇರಿಸಿದರು. ಪ್ರಧಾನಿ ಮೋದಿರವರು ಸಿಂಗಾಪುರದ ಇನ್ಸ್ಟಿಟ್ಯೂಟ್ ಆಫ್ ಟೆಕ್ನಿಕಲ್ ಎಜುಕೇಷನ್ ಗೆ ಭೇಟಿ ನೀಡಿದ ವೇಳೆ ಈ ಸಂಸ್ಥೆಯ ಸ್ಥಾಪನೆ ಬಗ್ಗೆ ನಿಲುವು ತಳಿದಿದ್ದರು. ಕೌಶಲ್ಯ ಅಭಿವೃದ್ದಿ ಸಚಿವಾಲಯ ಮತ್ತು ಸಿಂಗಾಪುರದ ಇನ್ಸ್ಟಿಟ್ಯೂಟ್ ಆಫ್ ಟೆಕ್ನಿಕಲ್ ಎಜುಕೇಷನ್ ಪಾಲುದಾರಿಕೆಯೊಂದಿಗೆ ಈ ಸಂಸ್ಥೆಯನ್ನು ಸ್ಥಾಪಿಸಲಾಗುತ್ತಿದೆ.

122. ಗುಪ್ತದಳದ (Intelligence Bureau) ನೂತನ ನಿರ್ದೇಶಕರಾಗಿ ಈ ಕೆಳಗಿನ ಯಾರು ನೇಮಕಗೊಂಡಿದ್ದಾರೆ?

ಅ) ಎಸ್ ಕೆ ಶರ್ಮಾ

ಆ) ರಾಜೀವ್ ಜೈನ್

ಇ) ಕುಮಾರ ಸುಂದರಂ

ಈ) ಅನಿಲ್ ಧಸ್ಮಾನಾ

ರಾಜೀವ್ ಜೈನ್

ರಾಜೀವ್ ಜೈನ್, 1980ನೇ ಬ್ಯಾಚ್ ನ ಜಾರ್ಖಂಡ್ ಕೇಡರ್ ನ ಐಪಿಎಸ್ ಅಧಿಕಾರಿ ರವರು ಗುಪ್ತದಳದ ನೂತನ ನಿರ್ದೇಶಕರಾಗಿ ನೇಮಕಗೊಂಡಿದ್ದಾರೆ. ಜೈನ್ ರವರು ಎರಡು ವರ್ಷಗಳ ಕಾಲ ಅಧಿಕಾರದಲ್ಲಿ ಇರಲಿದ್ದಾರೆ. ಪ್ರಸ್ತುತ ಜೈನ್ ರವರು ಗುಪ್ತದಳದ ವಿಶೇಷ ನಿರ್ದೇಶಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಗುಪ್ತದಳದ ನಿರ್ದೇಶಕರಾಗಿರುವ ದಿನೇಶ್ವರ್ ಶರ್ಮಾ ರವರು ಜನವರಿ 2017 ರಲ್ಲಿ ನಿವೃತ್ತಿ ಹೊಂದಲಿದ್ದು, ಅವರ ಸ್ಥಾನಕ್ಕೆ ಜೈನ್ ಅವರನ್ನು ನೇಮಕ ಮಾಡಲಾಗಿದೆ.

123. ಭಾರತೀಯ ಸ್ಟೇಟ್ ಬ್ಯಾಂಕ್ ಇತ್ತೀಚೆಗೆ “ಸ್ಟೇಟ್ ಬ್ಯಾಂಕ್ ಮೊಬಿಕ್ಯಾಶ್” ಡಿಜಿಟಲ್ ವ್ಯಾಲೆಟ್ ಅನ್ನು ಯಾವ ಟೆಲಿಕಾಂ ಸಂಸ್ಥೆಯೊಂದಿಗೆ ಆರಂಭಿಸಿದೆ?

ಅ) ಏರ್ ಟೆಲ್

ಆ) ಬಿಎಸ್ಎನ್ಎಲ್

ಇ) ಐಡಿಯಾ

ಈ) ವೊಡೊಫೊನ್

ಬಿಎಸ್ಎನ್ಎಲ್

ಭಾರತೀಯ ಸ್ಟೇಟ್ ಬ್ಯಾಂಕ್ ಇತ್ತೀಚೆಗೆ ಸ್ಟೇಟ್ ಬ್ಯಾಂಕ್ ಮೊಬಿಕ್ಯಾಶ್” ಡಿಜಿಟಲ್ ವ್ಯಾಲೆಟ್ ಮೊಬೈಲ್ ಅಪ್ಲಿಕೇಷನ್ ಅನ್ನು ಭಾರತ್ ಸಂಚಾರ್ ನಿಗಮ್ ಲಿಮಿಟೆಡ್ (BSNL) ಸಹಯೋಗದೊಂದಿಗೆ ಆರಂಭಿಸಿದೆ. ಈ ಅಪ್ಲಿಕೇಷನ್ ಮೂಲಕ ಗ್ರಾಹಕರು ಬಿಎಸ್ಎನ್ಎಲ್ ಔಟ್ ಲೆಟ್ ಗಳಲ್ಲಿ ನಗದು ಠೇವಣೆ ಮಾಡಬಹುದು ಮತ್ತು ತಮ್ಮ ಖಾತೆಯಿಂದ ಹಣವನ್ನು

ಪಡೆಯಬಹುದಾಗಿದೆ. ಪ್ರಾರಂಭಿಕ ಹಂತದಲ್ಲಿ ಪಂಜಾಬ್, ಗುಜರಾತ್, ರಾಜಸ್ತಾನ ಮತ್ತು ಬಿಹಾರ್ ರಾಜ್ಯಗಳಲ್ಲಿ ಈ ಸೇವೆ ಲಭ್ಯವಿದ್ದು, ಆನಂತರ ದೇಶದಾದ್ಯಂತ ಸಿಗಲಿದೆ.

124. "ಅಂತಾರಾಷ್ಟ್ರೀಯ ವಲಸಿಗರ ದಿನ"ವನ್ನು ಯಾವ ದಿನದಂದು ಆಚರಿಸಲಾಗುತ್ತದೆ?

ಅ) ಡಿಸೆಂಬರ್ 17

ಆ) ಡಿಸೆಂಬರ್ 18

ಇ) ಡಿಸೆಂಬರ್ 19

ಈ) ಡಿಸೆಂಬರ್ 20

ಡಿಸೆಂಬರ್ 18

ಅಂತಾರಾಷ್ಟ್ರೀಯ ವಲಸಿಗರ ದಿನ (International Migrants Day)ವನ್ನು ಡಿಸೆಂಬರ್ 18 ರಂದು ಪ್ರತಿ ವರ್ಷ ಆಚರಿಸಲಾಗುತ್ತಿದೆ. ವಲಸಿಗರ ಮತ್ತು ಅವರ ಕುಟುಂಬದವರ ಹಕ್ಕನ್ನು ರಕ್ಷಿಸುವ ಸಲುವಾಗಿ ಈ ದಿನವನ್ನು ಆಚರಿಸಲಾಗುವುದು.

125. 2016 ಪುರುಷರ ಜೂನಿಯರ್ ಹಾಕಿ ವಿಶ್ವ ಕಪ್ ನಲ್ಲಿ ಪ್ರಶಸ್ತಿ ಗೆದ್ದ ದೇಶ ಯಾವುದು?

ಅ) ಭಾರತ

ಆ) ಬೆಲ್ಜಿಯಂ

ಇ) ಪಾಕಿಸ್ತಾನ

ಈ) ಮಲೇಷಿಯಾ

ಭಾರತ

ಲಖನೌನದಲ್ಲಿ ನಡೆದ ಜೂನಿಯರ್ ಹಾಕಿ ವಿಶ್ವಕಪ್ ನಲ್ಲಿ ಭಾರತದ ಪುರುಷರ ತಂಡ ಬೆಲ್ಜಿಯಂ ತಂಡವನ್ನು ಮಣಿಸುವ ಮೂಲಕ ವಿಶ್ವ ಚಾಂಪಿಯನ್ ಪಟ್ಟವನ್ನು ಅಲಂಕರಿಸಿತು. ಭಾನುವಾರ ಸಂಜೆ ನಡೆದ ಟೂರ್ನಿಯ ಫೈನಲ್‌ನಲ್ಲಿ ಗುರ್ಜಂತ್ ಸಿಂಗ್ ಮತ್ತು ಸಿಮ್ರನ್‌ಜೀತ್ ಅವರು ಹೊಡೆದ ಗೋಲುಗಳ ಬಲದಿಂದ ಭಾರತ ತಂಡವು 2–1 ಗೋಲುಗಳಿಂದ ಬೆಲ್ಜಿಯಂ ವಿರುದ್ಧ ಗೆದ್ದು ಐತಿಹಾಸಿಕ ಸಾಧನೆ ಮಾಡಿತು.

15 ವರ್ಷಗಳ ನಂತರ ವಿಶ್ವಕಪ್‌ಗೆ ಮುತ್ತಿಕ್ಕಿತು. 2001ರಲ್ಲಿ ಹೋಬರ್ಟ್‌ನಲ್ಲಿ ವಿಶ್ವ ಚಾಂಪಿಯನ್ ಆಗಿದ್ದ ಭಾರತ ತಂಡವು ಪ್ರಶಸ್ತಿ ಬರ ಎದುರಿಸಿತ್ತು. ಆದರೆ, ಈ ಬಾರಿ ಹರ್ಜೀತ್ ಸಿಂಗ್ ನಾಯಕತ್ವದ ಉತ್ಸಾಹಿ ಯುವಪಡೆಯು ಮೇಜರ್ ಧ್ಯಾನ್‌ಚಂದ್ ಹಾಕಿ ಕ್ರೀಡಾಂಗಣದಲ್ಲಿ ಪ್ರಶಸ್ತಿ ಗೆದ್ದು ಬೀಗಿತು.

126. ಈ ಕೆಳಗಿನ ಯಾವ ಬಾಲಿವುಡ್ ನಟಿ ಅಸ್ಸಾಂ ಪ್ರವಾಸೋದ್ಯಮ ಇಲಾಖೆ ಪ್ರಚಾರ ರಾಯಭಾರಿಯಾಗಿ ನೇಮಕಗೊಂಡಿದ್ದಾರೆ?

ಅ) ಕತ್ರೀನಾ ಕೈಫ್

ಆ) ಪ್ರಿಯಾಂಕ ಚೋಪ್ರಾ

ಇ) ಸೋನಾಕ್ಷಿ ಸಿನ್ಹಾ

ಈ) ಮಲ್ಲಿಕಾ ಶೆರಾವತ್

ಪ್ರಿಯಾಂಕ ಚೋಪ್ರಾ

ಬಾಲಿವುಡ್ ನಟಿ ಪ್ರಿಯಾಂಕಾ ಚೋಪ್ರಾ ಅವರು ಅಸ್ಸಾಂ ಪ್ರವಾಸೋದ್ಯಮ ಇಲಾಖೆಯ ಪ್ರಚಾರ ರಾಯಭಾರಿಯಾಗಿ ನೇಮಕಗೊಂಡಿದ್ದಾರೆ. ಪ್ರಿಯಾಂಕಾ ಚೋಪ್ರಾ ಅವರನ್ನು ರಾಯಭಾರಿಯನ್ನಾಗಿ ನೇಮಕ ಮಾಡಿದ್ದೇವೆ' ಎಂದು ಅಸ್ಸಾಂನ ಪ್ರವಾಸೋದ್ಯಮ ಸಚಿವ

www.karunaduexams.com

ಹೇಮಂತ ಬಿಸ್ವ ಶರ್ಮ ತಿಳಿಸಿದ್ದಾರೆ.  ಪ್ರಿಯಾಂಕಾ ಅವರು ಸಂಭಾವನೆ ಪಡೆಯದೇ ಎರಡು ವರ್ಷದ ಒಪ್ಪಂದಕ್ಕೆ ಸಹಿ ಹಾಕಿದ್ದಾರೆ.

127. 2016 ವಿಶ್ವ ಸುಂದರಿ ಕಿರೀಟವನ್ನು ಗೆದ್ದುಕೊಂಡ "ಸ್ಟೆಪಾನಿಯಾ ಡೆಲ್ ವೇಲ್" ಯಾವ ದೇಶದವರು?
ಅ) ಅಮೆರಿಕ
ಆ) ಪ್ಯೂರ್ಟರಿಕೊ
ಇ) ವೆನೆಜುವೆಲಾ
ಈ) ಕೆನಡಾ
ಪ್ಯೂರ್ಟರಿಕೊ
ಪ್ಯೂರ್ಟರಿಕೊದ ಸುಂದರಿ ಸ್ಟೆಪಾನಿಯಾ ಡೆಲ್ ವೇಲ್ ಅವರು 2016ರ ವಿಶ್ವಸುಂದರಿ ಆಗಿ ಆಯ್ಕೆಯಾಗಿದ್ದಾರೆ. ಡೊಮಿನಿಕನ್ ಗಣರಾಜ್ಯ ಮತ್ತು ಇಂಡೊನೇಷ್ಯಾ, ಕೀನ್ಯಾ ಹಾಗೂ ಫಿಲಿಪ್ಪೀನ್ಸ್‌ನ ಸುಂದರಿಯರು ನಂತರದ ಸ್ಥಾನಗಳನ್ನು ಪಡೆದರು. ಭಾರತ ಪ್ರತಿನಿಧಿಸಿದ್ದ ಪ್ರಿಯದರ್ಶಿನಿ ಚಟರ್ಜಿ ಟಾಪ್ 20 ಸ್ಥಾನ ಪಡೆಯಲು ಮಾತ್ರ ಸಫಲರಾದರು.

128. ಈ ಕೆಳಗಿನ ಯಾರು ಗುಪ್ತಚರ ಸಂಸ್ಥೆ "ರಾ (RAW) (ರಿಸರ್ಚ್ ಅಂಡ್ ಅನಾಲಿಸಿಸ್ ವಿಂಗ್)" ನ ಮುಖ್ಯಸ್ಥರಾಗಿ ನೇಮಕಗೊಂಡಿದ್ದಾರೆ?
ಅ) ಅನಿಲ್ ಧಸ್ಮಾನ
ಆ) ದಿನೇಶ್ವರ್ ಶರ್ಮಾ
ಇ) ರಾಜೀವ್ ಚಂದ್ರಶೇಖರ್
ಈ) ಅಮಿರ್ ಚಂದ್ರ
ಅನಿಲ್ ಧಸ್ಮಾನ
1981ನೇ ಬ್ಯಾಚ್ ನ ಹಿರಿಯ ಐಪಿಎಸ್ ಅಧಿಕಾರಿ ಅನಿಲ್ ಧಸ್ಮಾನ ರವರು ಗುಪ್ತಚರ ಸಂಸ್ಥೆ ರಾ ನ ಮುಖ್ಯಸ್ಥರಾಗಿ ಎರಡು ವರ್ಷಗಳ ಅವಧಿ ನೇಮಕಗೊಂಡಿದ್ದಾರೆ. ರಾ ನ ಪ್ರಸ್ತುತ ಮುಖ್ಯಸ್ಥರಾಗಿರುವ ರಾಜಿಂದರ್ ಖನ್ನಾ ರವರು ಜನವರಿ 31, 2017 ರಂದು ನಿವೃತ್ತರಾಗಲಿದ್ದು, ಇವರ ಉತ್ತರಾಧಿಕಾರಿಯಾಗಿ ಧಸ್ಮಾನ ಅಧಿಕಾರವಹಿಸಿಕೊಳ್ಳಲಿದ್ದಾರೆ.

129. ಭಾರತೀಯ ಸೇನಾಪಡೆ ನೂತನ ಮುಖ್ಯಸ್ಥರಾಗಿ ಈ ಕೆಳಗಿನ ಯಾರು ನೇಮಕಗೊಂಡಿದ್ದಾರೆ?
ಅ) ಬಿಪಿನ್ ರಾವತ್
ಆ) ಪಿ.ಎಂ. ಹರಿಜ್
ಇ) ವೇಲು ನಾಯರ್
ಈ) ಪ್ರವೀಣ್ ಬಕ್ಷಿ
ಬಿಪಿನ್ ರಾವತ್
ಲೆಫ್ಟಿನೆಂಟ್ ಜನರಲ್ ಬಿಪಿನ್ ರಾವತ್ ಅವರನ್ನು ಸೇನಾ ಪಡೆಯ ನೂತನ ಮುಖ್ಯಸ್ಥರನ್ನಾಗಿ ಕೇಂದ್ರ ಸರ್ಕಾರ ನೇಮಕ ಮಾಡಿದೆ. ಸೇನಾ ಪಡೆಯ ಉಪ ಮುಖ್ಯಸ್ಥರಾಗಿರುವ ರಾವತ್ ಅವರು, ಇಬ್ಬರು ಹಿರಿಯ ಅಧಿಕಾರಿಗಳನ್ನು (ಅತ್ಯಂತ ಹಿರಿಯ ಸೇನಾ ಕಮಾಂಡರ್, ಪೂರ್ವ ಕಮಾಂಡ್‌ನ ಮುಖ್ಯಸ್ಥ ಪ್ರವೀಣ್ ಬಕ್ಷಿ ಮತ್ತು ದಕ್ಷಿಣ ಕಮಾಂಡ್‌ನ ಮುಖ್ಯಸ್ಥ ಪಿ.ಎಂ. ಹರಿಜ್) ಹಿಂದಿಕ್ಕಿ ಭೂ ಸೇನೆಯ ಮುಖ್ಯಸ್ಥರ ಹುದ್ದೆಗೆ ನೇಮಕವಾಗಿದ್ದಾರೆ. ಸೇನಾ ಪಡೆ ಮುಖ್ಯಸ್ಥ ಜನರಲ್ ದಲ್ಬೀರ್ ಸಿಂಗ್ ಸುಹಾಗ್ ಅಧಿಕಾರಾವಧಿ ಡಿಸೆಂಬರ್ 31ಕ್ಕೆ ಕೊನೆಗೊಳ್ಳಲಿದ್ದು, ರಾವತ್ ಅವರು ಸುಹಾಗ್ ಸ್ಥಾನವನ್ನು ತುಂಬಲಿದ್ದಾರೆ.

www.karunaduexams.com

130. “ಹರಕಹ್-ಅಲ್-ಯಾಕ್ವಿನ್ (Harakah-Al-Yaqin)” ಬಂಡುಕೋರ ಗುಂಪು ಯಾವ ದೇಶಕ್ಕೆ ಸಂಬಂಧಿಸಿದೆ?
ಅ) ಮ್ಯಾನ್ಮಾರ್
ಆ) ಮಲೇಷಿಯಾ
ಇ) ಪಾಕಿಸ್ತಾನ
ಈ) ಶ್ರೀಲಂಕಾ
ಮ್ಯಾನ್ಮಾರ್
ಹರಕಹ್-ಅಲ್-ಯಾಕ್ವಿನ್ ಬಂಡುಕೋರ ಸಂಘಟನೆ ಮ್ಯಾನ್ಮಾರ್ ನ ಉತ್ತರ ರಾಖಿನ್ ರಾಜ್ಯದಲ್ಲಿ ಸಕ್ರಿಯವಾಗಿದೆ. ಇತ್ತೀಚೆಗೆ ಇಂಟರ್ನ್ಯಾಷನಲ್ ಕ್ರಿಸಿಸ್ ಗ್ರೂಫ್ ಈ ಸಂಘಟನೆಯ ನಾಯಕರು ಸೌಧಿ ಅರೇಬಿಯಾ ಮತ್ತು ಪಾಕಿಸ್ತಾನದೊಂದಿಗೆ ನಂಟು ಹೊಂದಿದ್ದಾರೆ ಎಂದು ವರದಿ ಮಾಡಿದೆ.

131. ಯಾವ ಕೇಂದ್ರ ಸಚಿವಾಲಯ ಹಿರಿಯ ನಾಗರಿಕರಿಗಾಗಿ “ಸಾಂಜಿ ಸಾಂಜ್ (Saanji Saanjh)” ಹೆಸರಿನ ರಾಷ್ಟ್ರೀಯ ಸುದ್ದಿಪತ್ರಿಕೆಯನ್ನು ಹೊರತಂದಿದೆ?
ಅ) ಮಾನವ ಸಂಪನ್ಮೂಲ ಅಭಿವೃದ್ದಿ ಸಚಿವಾಲಯ
ಆ) ದೂರಸಂಪರ್ಕ ಸಚಿವಾಲಯ
ಇ) ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯ
ಈ) ಗ್ರಾಮೀಣಭಿವೃದ್ದಿ ಸಚಿವಾಲಯ
ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯ
ಕೇಂದ್ರ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯ ಹಿರಿಯ ನಾಗರಿಕರಿಗಾಗಿ “ಸಾಂಜಿ ಸಾಂಜ್” ಹೆಸರಿನ ರಾಷ್ಟ್ರೀಯ ಸುದ್ದಿ ಪತ್ರಿಕೆಯನ್ನು ಹೊರತಂದಿದ್ದು, ಇದರ ಮೊದಲ ಆವೃತ್ತಿಯನ್ನು ನವದೆಹಲಿಯಲ್ಲಿ ಬಿಡುಗಡೆಗೊಳಿಸಲಾಗಿದೆ. ಹಿರಿಯ ನಾಗರಿಕರಿಗಾಗಿ ಸೇವೆ ಸಲ್ಲಿಸುತ್ತಿರುವ “ಹರಿಕೃತ್” ಹೆಸರಿನ NGO ಕಾರ್ಯದರ್ಶಿ ಜೆ.ವಿ.ಮನೀಷಾ ಬಜಾಜ್ ಈ ಸುದ್ದಿಪತ್ರಿಕೆಯ ಸಂಪಾದಕರು. ದ್ವಿಭಾಷೆಯಲ್ಲಿ ಪ್ರಕಟಣೆಗೊಳ್ಳುವ ಈ ಪತ್ರಿಕೆ 8 ಪುಟಗಳನ್ನು ಒಳಗೊಂಡಿದ್ದು, ಹಿರಿಯ ನಾಗರಿಕರಿಗೆ ಸಂಬಂಧಿಸಿದ ಸುದ್ದಿ ಸೇರಿದಂತೆ ಇತರೆ ಉಪಯೋಗಕರ ಮಾಹಿತಿಯನ್ನು ಹೊಂದಿದೆ.

132. ಕೇಂದ್ರ ಸರ್ಕಾರ ಇತ್ತೀಚೆಗೆ ಈ ಕೆಳಗಿನ ಯಾರ ಅಧ್ಯಕ್ಷತೆಯಲ್ಲಿ ಸಿಂಧೂ ಜಲ ಒಪ್ಪಂದ ಕುರಿತಾಗಿ ಉನ್ನತ ಮಟ್ಟದ ಕಾರ್ಯಪಡೆಯನ್ನು ರಚಿಸಿದೆ?
ಅ) ಅರವಿಂಗ ಪನಗರಿಯಾ
ಆ) ಶಶಿಕಾಂತ್ ದಾಸ್
ಇ) ನ್ರಿಪೇಂದ್ರ ಮಿಶ್ರಾ
ಈ) ಅಜಿತ್ ದೋವಲ್
ನ್ರಿಪೇಂದ್ರ ಮಿಶ್ರಾ
ಕೇಂದ್ರ ಸರ್ಕಾರ ಇತ್ತೀಚೆಗೆ ಸಿಂಧೂ ಜಲ ಒಪ್ಪಂದ ಕುರಿತಾಗಿ ಅಧ್ಯಯನ ನಡೆಸಲು ಉನ್ನತ ಮಟ್ಟದ ಕಾರ್ಯಪಡೆಯನ್ನು ರಚಿಸಿದ್ದು, ನರೇಂದ್ರ ಮೋದಿ ರವರ ಪ್ರಧಾನ ಕಾರ್ಯದರ್ಶಿ ನ್ರಿಪೇಂದ್ರ ಮಿಶ್ರಾ ರವರು ಕಾರ್ಯಪಡೆಯ ಅಧ್ಯಕ್ಷರಾಗಿರಲ್ಲಿದ್ದಾರೆ. ಪಾಕಿಸ್ತಾನದ ಜೊತೆಗಿನ ಸಿಂಧೂ ಜಲ ಒಪ್ಪಂದ ವಿವಿಧ ಆಯಾಮಗಳನ್ನು ಸಮಿತಿ ಅಧ್ಯಯನ ನಡೆಸಲಿದೆ. ರಾಷ್ಟ್ರೀಯ ವೈಜ್ಞಾನಿಕ ಸಲಹೆಗಾರ ಅಜಿತ್ ದೋವಲ್, ವಿದೇಶಾಂಗ ಕಾರ್ಯದರ್ಶಿ ಎಸ್.

www.karunaduexams.com

ಜೈಶಂಕರ್ ಮತ್ತು ಇಂಧನ, ಪರಿಸರ ಹಾಗೂ ಆರ್ಥಿಕ ಸಚಿವಾಲಯದ ಕಾರ್ಯದರ್ಶಿಗಳು ಸಮಿತಿಯ ಸದಸ್ಯರಾಗಿದ್ದಾರೆ.

133. ಇತ್ತೀಚೆಗೆ ನಿಧನರಾದ "ಸೌಮಿತ್ರ ಚೌಧರಿ"ರವರು ಯಾವ ಕ್ಷೇತ್ರಕ್ಕೆ ಸಂಬಂಧಿಸಿದ್ದಾರೆ?
ಅ) ಕ್ರೀಡೆ
ಆ) ಸಂಗೀತಾ
ಇ) ಅರ್ಥಶಾಸ್ತ್ರ
ಈ) ಕಲೆ
ಅರ್ಥಶಾಸ್ತ್ರ
ಪ್ರಸಿದ್ದ ಅರ್ಥಶಾಸ್ತ್ರಜ್ಞ ಹಾಗೂ ಹಿಂದಿನ ಯೋಜನಾ ಆಯೋಗದ ಸದಸ್ಯರಾಗಿದ್ದ ಡಾ. ಸೌಮಿತ್ರ ಚೌಧರಿ ರವರು ನಿಧನರಾದರು. ಯೋಜನಾ ಆಯೋಗದ ದೀರ್ಘಕಾಲ ಸದಸ್ಯರಾಗಿ ಸೇವೆ ಸಲ್ಲಿಸಿದವರಲ್ಲಿ ಚೌಧರಿ ರವರು ಒಬ್ಬರಾಗಿದ್ದರು. ಯೋಜನಾ ಆಯೋಗದ ಸದಸ್ಯರಾಗುವ ಮುಂಚೆ ಇವರು ಕ್ರೇಡಿಟ್ ರೇಟಿಂಗ್ ಏಜೆನ್ಸಿ ICRAದ ರಿಸರ್ಚ್ ಕೋ-ಆರ್ಡಿನೇಟರ್ ಮತ್ತು ಆರ್ಥಿಕ ಸಲಹೆಗಾರರಾಗಿ ಸೇವೆ ಸಲ್ಲಿಸಿದ್ದರು.

134. ಈ ಕೆಳಗಿನ ಯಾವ ಕೇಂದ್ರ ಸಚಿವಾಲಯವೂ 2016 ಡಿಟಿಜಲ್ ಇಂಡಿಯಾ ಪ್ರಶಸ್ತಿಯ ವೆಬ್ ರತ್ನ ವಿಭಾಗದಲ್ಲಿ ಚಿನ್ನದ ಪದಕ ಪಡೆದುಕೊಂಡಿದೆ?
ಅ) ಪ್ರವಾಸೋದ್ಯಮ ಸಚಿವಾಲಯ
ಆ) ಇಂಧನ ಸಚಿವಾಲಯ
ಇ) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ
ಈ) ಮಾನವ ಸಂಪನ್ಮೂಲ ಅಭಿವೃದ್ದಿ ಸಚಿವಾಲಯ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ
2016 ಡಿಟಿಜಲ್ ಇಂಡಿಯಾ ಪ್ರಶಸ್ತಿಯ ವೆಬ್ ರತ್ನ ವಿಭಾಗದಲ್ಲಿ ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ ಚಿನ್ನದ ಪದಕ ಪ್ರಶಸ್ತಿಯನ್ನು ಪಡೆದುಕೊಂಡಿದೆ. ಕೇಂದ್ರ ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯ ಡಿಜಿಟಲ್ ಇಂಡಿಯಾ ಪ್ರಶಸ್ತಿಯನ್ನು ನೀಡುತ್ತಿದೆ. ಇ-ಆಡಳಿತವನ್ನು ಪ್ರೇರಿಪಿಸುವ ಸಲುವಾಗಿ ಪ್ರಶಸ್ತಿಯನ್ನು ನೀಡಲಾಗುತ್ತಿದೆ.

135. ಭಾರತದ ಮೊದಲ ನಗದು ರಹಿತ (Cashless) ಬಜಾರು ಯಾವ ರಾಜ್ಯದಲ್ಲಿದೆ?
ಅ) ಕೇರಳ
ಆ) ಚತ್ತೀಸಘರ್
ಇ) ಮಧ್ಯ ಪ್ರದೇಶ
ಈ) ಹರಿಯಾಣ
ಚತ್ತೀಸಘರ್
ಚತ್ತೀಸಘರ್ ದಲ್ಲಿ ಭಾರತದ ಮೊದಲ ನಗದು ರಹಿತ ಬಜಾರು ಆರಂಭಗೊಂಡಿದೆ. ಈ ಬಜಾರಿನಲ್ಲಿರುವ ಸುಮಾರು 900ಕ್ಕೂ ಹೆಚ್ಚು ಅಂಗಡಿಗಳು ಪಿಒಎಸ್ (ಪಾಯಿಂಟ್ ಆಫ್ ಸೇಲ್), ಯುಪಿಐ ಮತ್ತಿತ್ತರ ಡಿಜಿಟಲ್ ವ್ಯವಸ್ಥೆ ಅಳವಡಿಸಿಕೊಳ್ಳುವ ಮೂಲಕ ಗ್ರಾಹಕರೊಂದಿಗೆ ವಹಿವಾಟು ನಡೆಸುತ್ತಿವೆ. ಜನರಿಗೆ ಡಿಜಿಟಲ್ ವಹಿವಾಟು ಬಗ್ಗೆ ಅರಿವು ಮೂಡಿಸುವ ರಾಜ್ಯಗಳ ಪೈಕಿ ಚತ್ತೀಸಘರ್ ಮುಂಚೂಣಿಯಲ್ಲಿದೆ. ಕೇಂದ್ರ ಸರ್ಕಾರದ ಅಂಕಿ ಅಂಶಗಳ ಪ್ರಕಾರ ಚತ್ತೀಸಘರ್ ದಲ್ಲಿ 5 ಲಕ್ಷಕ್ಕೂ ಹೆಚ್ಚು ಜನರಿಗೆ ಡಿಜಿಟಲ್ ವಹಿವಾಟು ಬಗ್ಗೆ ತರಭೇತಿ ನೀಡಲಾಗಿದೆ.


www.karunaduexams.com

136. ಇತ್ತೀಚೆಗೆ ನಿಧನರಾದ ಅನುಪಮ್ ಮಿಶ್ರಾ ರವರು ಯಾವ ಕ್ಷೇತ್ರದಲ್ಲಿ ಪ್ರಸಿದ್ಧರಾಗಿದ್ದರು?
ಅ) ಪರಿಸರ
ಆ) ಪತ್ರಿಕೋದ್ಯಮ
ಇ) ಜಲ ಸಂರಕ್ಷಣೆ
ಈ) ಮೇಲಿನ ಎಲ್ಲವೂ
ಮೇಲಿನ ಎಲ್ಲವೂ
ಪ್ರಖ್ಯಾತ ಪರಿಸರವಾದಿ, ಗಾಂಧೀ ಅನುಯಾಯಿ, ಪತ್ರಕರ್ತ, ಲೇಖಕ ಮತ್ತು ಜಲ ಸಂರಕ್ಷಣೆಗೆ ಧ್ವನಿಯಾಗಿದ್ದ ಅನುಪಮ್ ಮಿಶ್ರಾ ರವರು ನಿಧನರಾದರು. "ಆಜ್ ಭಿ ಖರೇ ಹೈನ್ ತಾಲಬ್", ಮತ್ತು "ರಾಜಸ್ತಾನ್ ಕಿ ರಜತ್ ಬೂಂದೇನ್" ಅವರ ಪ್ರಸಿದ್ಧ ಪುಸ್ತಕಗಳು.

137. 2015-16ನೇ ಸಾಲಿನಲ್ಲಿ ಭಾರತದಲ್ಲಿ ಅತಿ ಹೆಚ್ಚು ವಿದೇಶಿ ನೇರ ಬಂಡವಾಳ ಹೂಡಿರುವ ಮೊದಲ ಮೂರು ರಾಷ್ಟ್ರಗಳು _______?
ಅ) ಮಾರಿಷಸ್, ಸಿಂಗಾಪುರ, ಅಮೆರಿಕ
ಆ) ಮಾರಿಷಸ್, ಸಿಂಗಾಪುರ, ಯುಕೆ
ಇ) ಸಿಂಗಾಪುರ, ಮಾರಿಷಸ್, ಯುಕೆ
ಈ) ಸಿಂಗಾಪುರ, ಯುಕೆ, ಮಾರಿಷಸ್
ಮಾರಿಷಸ್, ಸಿಂಗಾಪುರ, ಅಮೆರಿಕ
ವಿದೇಶಿ ನೇರ ಬಂಡವಾಳ ಆಕರ್ಷಣೆಯಲ್ಲಿ ಭಾರತ ಹೊಸ ಮೈಲುಗಲ್ಲು ಸಾಧಿಸಿದೆ. ಏಪ್ರಿಲ್ 2000 ಮತ್ತು ಸೆಪ್ಟೆಂಬರ್ 2016 ಅವಧಿಯಲ್ಲಿ ಭಾರತ ಯುಎಸ್ 300 ಬಿಲಿಯನ್ ಡಾಲರ್ ನೇರ ಬಂಡವಾಳ ಹೂಡಿಕೆಯನ್ನು ಆಕರ್ಷಿಸಿದೆ. ಈ ಅವಧಿಯಲ್ಲಿ ಒಟ್ಟಾರೆಯಾಗಿ ಭಾರತ 310.26 ಬಿಲಿಯನ್ ಡಾಲರ್ ಬಂಡವಾಳವನ್ನು ಆಕರ್ಷಿಸಿದೆ. ಒಟ್ಟಾರೆ ವಿದೇಶಿ ನೇರ ಬಂಡವಾಳ ಹೂಡಿಕೆಯಲ್ಲಿ ಶೇ 33% ಮಾರಿಷಸ್ ನಿಂದ ಹರಿದು ಬಂದಿದೆ. ಮಾರಿಷಸ್ ನಂತರ ಸಿಂಗಾಪುರ, ಯುಎಸ್, ಯುಕೆ ಮತ್ತು ನೆದರ್ಲ್ಯಾಂಡ್ ಭಾರತಕ್ಕೆ ಅತಿ ಹೆಚ್ಚು ವಿದೇಶಿ ನೇರ ಬಂಡವಾಳ ಹೂಡಿರುವ ರಾಷ್ಟ್ರಗಳು.

138. ಈ ಮುಂದಿನದು ಭಾರತದ ಏಕೈಕ ಸಂಸ್ಕೃತ ದಿನಪತ್ರಿಕೆಯಾಗಿದೆ ________?
ಅ) ಸಹಿಷ್ಣು
ಆ) ಸುಧರ್ಮಾ
ಇ) ಜ್ಯೋತಿರ್ಗಮ
ಈ) ಅಹಿಂಸ
ಸುಧರ್ಮಾ
ಸುಧರ್ಮಾ' ಭಾರತದ ಏಕೈಕ ಸಂಸ್ಕೃತ ದಿನಪತ್ರಿಕೆ. ಈ ಪತ್ರಿಕೆ ಹೊರಬರುವುದು ಮೈಸೂರಿನಿಂದ. ಕೆ.ವಿ.ಸಂಪತ್ ಕುಮಾರ್ ಸಂಪಾದಕರು. ಇತ್ತೀಚೆಗೆ ಈ ದಿನಪತ್ರಿಕೆ ತುಂಬಾ ನಷ್ಟದಲ್ಲಿರುವ ಕಾರಣ ಮುಚ್ಚುವ ಸ್ಥಿತಿಗೆ ತಲುಪಿದೆ.

www.karunaduexams.com

139. ಗ್ರಾಮೀಣ ವಿದ್ಯುದ್ದೀಕರಣದ ಮೇಲೆ ನಿಗಾವಹಿಸುವ ಸಲುವಾಗಿ ಕೇಂದ್ರ ಇಂಧನ ಸಚಿವಾಲಯ ಈ ಕೆಳಗಿನ ಯಾವ ಆ್ಯಪ್ ಅನ್ನು ಇತ್ತೀಚೆಗೆ ಬಿಡುಗಡೆಗೊಳಿಸಿದೆ?

ಅ) SAMVAD

ಆ) GARV-II

ಇ) UJWALA

ಈ) POWER

GARV-II

ಗ್ರಾಮೀಣ ಕುಟುಂಬಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸುವ ಮಾಹಿತಿಯನ್ನು ಕಲೆಹಾಕುವ ಸಲುವಾಗಿ ಕೇಂದ್ರ ಇಂಧನ ಸಚಿವಾಲಯ GARV-II ಆ್ಯಪ್ ಅನ್ನು ಬಿಡುಗಡೆ ಮಾಡಿದೆ. ಕೇಂದ್ರ ಇಂಧನ, ಕಲ್ಲಿದ್ದಲು, ನಾವೀನ್ಯ ಮತ್ತು ನವೀಕರಣಗೊಳಿಸಬಹುದಾದ ಇಂಧನ ಸಚಿವ ಪಿಯುಷ್ ಗೋಯಲ್ ರವರು ಈ ಆ್ಯಪ್ ಅನ್ನು ಬಿಡುಗಡೆಗೊಳಿಸಿದರು.

140. ಬಾಹ್ಯಕಾಶದಲ್ಲಿ ಭಾರಿ ಪ್ರಮಾಣದಲ್ಲಿರುವ ತ್ಯಾಜ್ಯ ಪದಾರ್ಥಗಳನ್ನು ತೆರವುಗೊಳಿಸಲು ಯಾವ ದೇಶ ಇತ್ತೀಚೆಗೆ "ಕೌನೊಟೊರಿ (Kounotori)" ಬಾಹ್ಯಕಾಶ ನೌಕೆಯನ್ನು ಉಡಾಯಿಸಿದೆ?

ಅ) ಅಮೆರಿಕ

ಆ) ಜಪಾನ್

ಇ) ಚೀನಾ

ಈ) ರಷ್ಯಾ

ಜಪಾನ್

ಬಾಹ್ಯಾಕಾಶದಲ್ಲಿ ಭಾರಿ ಪ್ರಮಾಣದಲ್ಲಿ ತ್ಯಾಜ್ಯ ಪದಾರ್ಥಗಳು ಸೇರಿಕೊಂಡಿರುವುದು ಹೊಸ ಉಪಗ್ರಹಗಳ ಉಡಾವಣೆ, ವಿವಿಧ ಸಂಶೋಧನೆಗಳಿಗೆ ಅಡ್ಡಿ ಉಂಟು ಮಾಡುತ್ತಿದೆ. ಇದನ್ನು ತೆರವುಗೊಳಿಸಲು ಜಪಾನ್ ಕೌನೊಟೊರಿ (Kounotori)" ಎಂಬ ನೌಕೆಯನ್ನು ಉಡಾಯಿಸಿದೆ. ನಿಗದಿತ ಜಾಗಕ್ಕೆ ಈ ನೌಕೆ ತಲುಪುತ್ತಿದ್ದಂತೆ ಬೃಹತ್ ಗಾತ್ರದ ಬಲೆ ಬಿಚ್ಚಿಕೊಳ್ಳಲಿದೆ. ಬಾಹ್ಯಾಕಾಶದಲ್ಲಿನ ಅಪಾರ ತ್ಯಾಜ್ಯಗಳನ್ನು ಈ ಬಲೆಯಲ್ಲಿ ಸಂಗ್ರಹಿಸಲಾಗುತ್ತದೆ. ಈ ತ್ಯಾಜ್ಯಗಳನ್ನು ಬಲೆಯ ಸಮೇತ ಸ್ಫೋಟಗೊಳಿಸುವ ಮೂಲಕ ನಾಶ ಪಡಿಸಲಾಗುತ್ತದೆ. ಈ ರೀತಿ ಒಂದು ಬಾರಿಗೆ ನೂರಾರು ಟನ್ ತ್ಯಾಜ್ಯವನ್ನು ನಾಶ ಮಾಡಬಹುದಾಗಿದೆ.

141. ಈ ಕೆಳಗಿನವುಗಳನ್ನು ಗಮನಿಸಿ:

I) ಯುನಿಫೈಡ್ ಪೇಮೆಂಟ್ ಇಂಟರ್ ಫೇಸ್ (ಯುಪಿಐ)

II) ಆಧಾರ ಆಧರಿತ ಪಾವತಿ ವ್ಯವಸ್ಥೆ (ಎಇಪಿಎಸ್)

III) ಅನ್ ಸ್ಟ್ರಕ್ಚರ್ಡ್ ಸಪ್ಲೆಮೆಂಟರಿ ಸರ್ವೀಸ್ ಡಾಟ (ಯುಎಸ್ಎಸ್ ಡಿ)

IV) ಕ್ರೆಡಿಟ್ ಕಾರ್ಡ್

ಈ ಮೇಲಿನ ಯಾವ ವಿಧಾನದಡಿ ವ್ಯವಹರಿಸುವ ವ್ಯಾಪರಸ್ಥರು "ಡಿಜಿ ಧನ್ ಯೋಜನೆ"ಯಡಿ ಬಹುಮಾನ ಗೆಲ್ಲಲ್ಲು ಅರ್ಹರಾಗಿರುತ್ತಾರೆ?

ಅ) I, II & III

ಆ) II, III & IV

ಇ) I, II & IV

ಈ) ಮೇಲಿನ ಎಲ್ಲವೂ

I, II & III

www.karunaduexams.com

ನಗದುರಹಿತ ವಹಿವಾಟಿಗೆ ಉತ್ತೇಜನ ನೀಡುವ ಸಲುವಾಗಿ ಗ್ರಾಹಕರಿಗೆ ಹಾಗೂ ವ್ಯಾಪಾರಿಗಳಿಗೆ ಕೇಂದ್ರ ಸರ್ಕಾರ ‘ಲಕ್ಕಿ ಗ್ರಾಹಕ ಯೋಜನೆ’ ಮತ್ತು ‘ಡಿಜಿ ಧನ ವ್ಯಾಪಾರ ಯೋಜನೆ’ಗಳನ್ನು ಜಾರಿಗೊಳಿಸಿದೆ. ಭಾರತೀಯ ರಾಷ್ಟ್ರೀಯ ಪಾವತಿ ನಿಗಮ (ಎನ್‌ಪಿಸಿಐ) ಈ ಎರಡು ಯೋಜನೆಗಳನ್ನು ಅನುಷ್ಠಾನ ಮಾಡುವ ಹೊಣೆ ಹೊತ್ತುಕೊಂಡಿದೆ. ಯುಪಿಐ, ಸಾಮಾನ್ಯ ಮೊಬೈಲ್ ಮೂಲಕ (ಸ್ಮಾರ್ಟ್‌ಫೋನ್ ಬಿಟ್ಟು) ಹಣಪಾವತಿ ವ್ಯವಸ್ಥೆ (ಯುಎಸ್‌ಎಸ್‌ಡಿ), ಆಧಾರ್ ಆಧರಿತ ಪಾವತಿ ವ್ಯವಸ್ಥೆ (ಎಇಪಿಎಸ್) ಮತ್ತು ರೂಪೇ ಕಾರ್ಡ್‌ಗಳ ಮೂಲಕ ಹಣ ಪಾವತಿ ಮಾಡುವ ಗ್ರಾಹಕರು ಬಹುಮಾನ ಪಡೆಯಲು ಅರ್ಹರು. ಖಾಸಗಿ ಕ್ರೆಡಿಟ್ ಕಾರ್ಡುಗಳು ಮತ್ತು ಖಾಸಗಿ ಮೊಬೈಲ್–ವಾಲೆಟ್‌ಗಳ ಮೂಲಕ ಮಾಡುವ ಪಾವತಿ ಈ ಯೋಜನೆಯ ವ್ಯಾಪ್ತಿಗೆ ಬರುವುದಿಲ್ಲ.

142. ಈ ಮುಂದಿನ ಯಾವ ದೇಶ ಏಷ್ಯಾದ ಅತಿ ದೊಡ್ಡ ಕ್ಯಾಥೊಲಿಕ್ ರಾಷ್ಟ್ರವಾಗಿದೆ?

ಅ) ಫಿಲಿಫೈನ್ಸ್

ಆ) ಸೈಪ್ರಸ್

ಇ) ಜಪಾನ್

ಈ) ಜಾರ್ಜಿಯಾ

ಫಿಲಿಫೈನ್ಸ್

ಫಿಲಿಫೈನ್ಸ್ ಏಷ್ಯಾದ ಅತಿ ದೊಡ್ಡ ಕ್ಯಾಥೊಲಿಕ್ ರಾಷ್ಟ್ರ. ಫಿಲಿಫೈನ್ಸ್ ನ ಒಟ್ಟು ಜನಸಂಖ್ಯೆಯಲ್ಲಿ ಶೇ 92.5% ರಷ್ಟು ಜನರು ಕ್ಯಾಥೊಲಿಕ್ ಧರ್ಮಕ್ಕೆ ಸೇರಿದವರಾಗಿದ್ದಾರೆ.

143. ಈ ಕೆಳಗಿನ ಯಾವ ಬ್ಯಾಂಕ್ ವ್ಯಾಪರಸ್ಥರಿಗಾಗಿ “Easy Pay” ಮೊಬೈಲ್ ಆಧರಿತ ಅಪ್ಲಿಕೇಶನ್ ಹೊರತಂದಿದೆ?

ಅ) ಐಸಿಐಸಿಐ ಬ್ಯಾಂಕ್

ಆ) ಕೆನರಾ ಬ್ಯಾಂಕ್

ಇ) ಭಾರತೀಯ ಸ್ಟೇಟ್ ಬ್ಯಾಂಕ್

ಈ) ಆಕ್ಸಿಸ್ ಬ್ಯಾಂಕ್

ಐಸಿಐಸಿಐ ಬ್ಯಾಂಕ್

ಐಸಿಐಸಿಐ ಬ್ಯಾಂಕ್ ವ್ಯಾಪರಸ್ಥರಿಗಾಗಿ “ಈಸಿ ಪೇ” ಮೊಬೈಲ್ ಆಧರಿತ ಆ್ಯಪ್ ಅನ್ನು ಬಿಡುಗಡೆಗೊಳಿಸಿದೆ. ಇದೊಂದು ಸರಳೀಕೃತ ಅಪ್ಲಿಕೇಶನ್ ಆಗಿದ್ದು, ಯುಪಿಐ, ಕ್ಯೂಆರ್ ಕೋಡ್, ಕ್ರೆಡಿಟ್ ಮತ್ತು ಡೆಬಿಟ್ ಕಾರ್ಡ್ ಬಳಸಿ ಪಾವತಿ ಮಾಡಬಹುದಾಗಿದೆ.

144. “2018 ಮಹಿಳೆಯರ ವಿಶ್ವ ಹಾಕಿ ಕಪ್” ಆತಿಥ್ಯ ವಹಿಸಲಿರುವ ದೇಶ ಯಾವುದು?

ಅ) ಭಾರತ

ಆ) ಇಂಗ್ಲೆಂಡ್

ಇ) ಆಸ್ಟ್ರೇಲಿಯಾ

ಈ) ಜಪಾನ್

ಇಂಗ್ಲೆಂಡ್

“2018 ಮಹಿಳೆಯರ ವಿಶ್ವ ಹಾಕಿ ಕಪ್” ಜುಲೈ 7-21, 2018 ರಲ್ಲಿ ಲಂಡನ್, ಇಂಗ್ಲೆಂಡ್ ನಲ್ಲಿ ನಡೆಯಲಿದೆ. 2018 ಪುರುಷರ ವಿಶ್ವ ಹಾಕಿ ಕಪ್ ನವೆಂಬರ್ 28 ರಿಂದ ಡಿಸೆಂಬರ್ 16 ರವರೆಗೆ ಭಾರತದ ಒಡಿಶಾ ರಾಜ್ಯದಲ್ಲಿ ನಡೆಯಲಿದೆ.

www.karunaduexams.com

145. ಕೇಂದ್ರ ಗ್ರಾಹಕ ವ್ಯವಹಾರಗಳ ಸಚಿವಾಲಯ ಗ್ರಾಹಕರ ಕುಂದುಕೊರತೆಗಳನ್ನು ತ್ವರಿತವಾಗಿ ವಿಲೇವಾರಿ ಮಾಡಲು "OCMC"ಯನ್ನು ಪ್ರಾರಂಭಿಸಿದೆ. OCMC ಎಂದರೆ ________?

ಅ) Online Consumer Media Centre

ಆ) Online Consumer Mediation Centre

ಇ) Online Consumer Mitigation Centre

ಈ) Online Consumer Motivation Centre

Online Consumer Mediation Centre

ಗ್ರಾಹಕರ ಕುಂದುಕೊರತೆಗಳನ್ನು ತ್ವರಿತವಾಗಿ ಇತ್ಯರ್ಥಪಡಿಸಲು ಕೇಂದ್ರ ಗ್ರಾಹಕ ವ್ಯವಹಾರಗಳ ಸಚಿವ ರಾಮ್ ವಿಲಾಸ್ ಪಾಸ್ವನ್ ರವರು Online Consumer Mediation Centre ಅನ್ನು ಇತ್ತೀಚೆಗೆ ಉದ್ಘಾಟಿಸಿದರು. OCMC ಯನ್ನು ಬೆಂಗಳೂರಿನ ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ ಯೂನಿವರ್ಸಿಟಿ (NLSIU) ಸಹಯೋಗದೊಂದಿಗೆ ನವದೆಹಲಿಯಲ್ಲಿ ಆರಂಭಿಸಲಾಗಿದೆ. ಇದಲ್ಲದೇ "ಸ್ಮಾರ್ಟ್ ಗ್ರಾಹಕ" ಆ್ಯಪ್ ಮತ್ತು "14404" ಸಹಾಯವಾಣಿಯನ್ನು ಆರಂಭಿಸಲಾಯಿತು.

146. ಪೊಲವರಂ ಬಹು ಉದ್ದೇಶಿತ ನೀರಾವರಿ ಯೋಜನೆ (Polavarm Multipurpose Irrigation Project)ಯನ್ನು ಯಾವ ನದಿಗೆ ಸಂಬಂಧಿಸಿದೆ?

ಅ) ನರ್ಮದಾ ನದಿ

ಆ) ಗೋದಾವರಿ ನದಿ

ಇ) ಕೃಷ್ಣಾ ನದಿ

ಈ) ಮಹಾನದಿ

ಗೋದಾವರಿ ನದಿ

ಪೊಲವರಂ ಅಥವಾ ಇಂದಿರಸಾಗರ್ ಯೋಜನೆಯನ್ನು ಗೋದಾವರಿ ನದಿಯ ಮೇಲೆ ಆಂಧ್ರ ಪ್ರದೇಶದ ಪೊಲವರಂ ಮಂಡಲ್ ನ ಪಶ್ಚಿಮ ಗೋದಾವರಿ ಜಿಲ್ಲೆಯಲ್ಲಿ ನಿರ್ಮಿಸಲಾಗುತ್ತಿದೆ. ಇದೊಂದು ಬಹು ಉದ್ದೇಶಿತ ಯೋಜನೆಯಾಗಿದ್ದು, ಇದರಿಂದ ಆಂಧ್ರ ಪ್ರದೇಶದ ಕೃಷ್ಣಾ, ವಿಶಾಖಪಟ್ಟಣ, ಪೂರ್ವ ಗೋದಾವರಿ ಮತ್ತು ಪಶ್ಚಿಮ ಗೋದಾವರಿ ಜಿಲ್ಲೆಗಳಿಗೆ ಕುಡಿಯುವ ನೀರು ಸರಬರಾಜು ಮಾಡಲಾಗುವುದು. ಅಲ್ಲದೇ ಜಲ ವಿದ್ಯುತ್ ಉತ್ಪಾದನೆ ಹಾಗೂ ನೀರಾವರಿ ಉದ್ದೇಶಕ್ಕೂ ಈ ಯೋಜನೆಯನ್ನು ಕೈಗೆತ್ತಿಕೊಳ್ಳಲಾಗುತ್ತಿದೆ. ಇತ್ತೀಚೆಗೆ ಕೇಂದ್ರ ಸರ್ಕಾರ ರೂ 1,982 ಕೋಟಿಯನ್ನು ಈ ಯೋಜನೆಗಾಗಿ ಬಿಡುಗಡೆಗೊಳಿಸಿದೆ.

147. ಇತ್ತೀಚೆಗೆ "ನಾಕ್ ಟೆನ್ (Nock Ten)" ಚಂಡಮಾರುತ ಯಾವ ದೇಶಕ್ಕೆ ಅಪ್ಪಳಿಸಿತು?

ಅ) ಚೀನಾ

ಆ) ಫಿಲಿಫೈನ್ಸ್

ಇ) ಜಪಾನ್

ಈ) ದಕ್ಷಿಣ ಕೊರಿಯಾ

ಫಿಲಿಫೈನ್ಸ್

ಉತ್ತರ ಫಿಲಿಪ್ಪೀನ್ಸ್‌ನಲ್ಲಿ 'ನಾಕ್ ಟೆನ್' ಚಂಡಮಾರುತ ಅಪ್ಪಳಿಸಿದ್ದು, ಆರು ಮಂದಿಯನ್ನು ಬಲಿ ಪಡೆದುಕೊಂಡಿದೆ. ಚಂಡಮಾರುತದ ಅಬ್ಬರದಿಂದ ನೂರಾರು ಮನೆಗಳಿಗೆ ಹಾನಿಯಾಗಿದ್ದು, ಸಾವಿರಾರು ಮಂದಿ ಸುರಕ್ಷಿತ ಸ್ಥಳಗಳಿಗೆ ತೆರಳಿದ್ದಾರೆ.

www.karunaduexams.com

148. ಮೌಲಾನ ಅಜಾದ್ ರಾಷ್ಟ್ರೀಯ ಉರ್ದು ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್ ಪಡೆದ ಬಾಲಿವುಡ್ ನಟ ಯಾರು?
ಅ) ಶಾರೂಕ್ ಖಾನ್
ಆ) ಅಕ್ಷಯ್ ಕುಮಾರ್
ಇ) ಅಮಿತಾಬ್ ಬಚ್ಚನ್
ಈ) ಅಮಿರ್ ಖಾನ್
ಶಾರೂಕ್ ಖಾನ್
ಮೌಲಾನ ಆಜಾದ್ ರಾಷ್ಟ್ರೀಯ ಉರ್ದು ವಿಶ್ವವಿದ್ಯಾಲಯದ 6ನೇ ಘಟಿಕೋತ್ಸವದಲ್ಲಿ ಬಾಲಿವುಡ್ ನಟ ಶಾರೂಕ್ ಖಾನ್ ಗೆ ಗೌರವ ಡಾಕ್ಟರೇಟ್ ಪದವಿ ಪ್ರದಾನ ಮಾಡಿದೆ. ಅವರು ತಮ್ಮ ಚಿತ್ರಗಳಲ್ಲಿ ಉರ್ದು ಭಾಷೆಯನ್ನು ಬಳಸಿ ಪ್ರಚಾರ ಮಾಡಲು ನೆರವಾಗುವುದಕ್ಕೆ ಈ ಗೌರವ ನೀಡಲಾಗಿದೆ. ವಿಶ್ವವಿದ್ಯಾಲಯದ ಕುಲಪತಿ ಝುಫರ್ ಸರೇಶ್ ವಾಲಾ ಶಾರೂಕ್ ಖಾನ್ ಅವರಿಗೆ ಡಾಕ್ಟರೇಟ್ ಪದವಿ ಪ್ರದಾನ ಮಾಡಿದರು.

149. ಇತ್ತೀಚೆಗೆ ನಿಧನರಾದ ರಾಷ್ಟ್ರೀಯ ಲಾಂಛನವನ್ನು ವಿನ್ಯಾಸಗೊಳಿಸಿದ್ದ "ದೀನನಾಥ ಭಾರ್ಗವ" ಯಾವ ರಾಜ್ಯದವರು?
ಅ) ಮಧ್ಯ ಪ್ರದೇಶ
ಆ) ಗುಜರಾತ್
ಇ) ಕರ್ನಾಟಕ
ಈ) ತಮಿಳು ನಾಡು
ಮಧ್ಯ ಪ್ರದೇಶ
ರಾಷ್ಟ್ರೀಯ ಲಾಂಛನವಾಗಿ ಸಾರನಾಥದ ಸಿಂಹ ಬೋದಿಗೆ ಮತ್ತು ಅಶೋಕ ಚಕ್ರವನ್ನು ವಿನ್ಯಾಸಗೊಳಿಸಿದ್ದ ಮತ್ತು ಕರಡು ಸಂವಿಧಾನದ ಪುಟಗಳನ್ನು ಸುಂದರಗೊಳಿಸಿದ್ದ ತಂಡದಲ್ಲಿ ಸಹ ಕಲಾವಿದರಾಗಿದ್ದ ಮಧ್ಯ ಪ್ರದೇಶದ ದೀನನಾಥ ಭಾರ್ಗವ(89) ಅವರು ನಿಧನರಾದರು. 1927, ನ.1ರಂದು ಮಧ್ಯಪ್ರದೇಶದ ಬೆತುಲ್ ಜಿಲ್ಲೆಯ ಮುಲ್ತಾಯಿಯಲ್ಲಿ ಜನಿಸಿದ್ದ ಭಾರ್ಗವ ಅವರನ್ನು ಆಗ ಶಾಂತಿನಿಕೇತನದ ಕಲಾಭವನದ ಪ್ರಾಂಶುಪಾಲರಾಗಿದ್ದ ಖ್ಯಾತ ಕಲಾವಿದ ನಂದಲಾಲ್ ಬೋಸ್ ಅವರು ಭಾರತಿಯ ಸಂವಿಧಾನದ ಕರಡು ಪ್ರತಿಯ ಪುಟಗಳನ್ನು ವಿನ್ಯಾಸಗೊಳಿಸಿದ ತಂಡಕ್ಕೆ ಅಯ್ಕೆ ಮಾಡಿದ್ದರು. ಆಗ ಭಾರ್ಗವ ಶಾಂತಿ ನಿಕೇತನದಲ್ಲಿ ಫೈನ್ ಆರ್ಟ್ಸ್ ವಿದ್ಯಾರ್ಥಿಯಾಗಿದ್ದರು. ಸರಕಾರವು 1950,ಜ.2ರಂದು ರಾಷ್ಟ್ರೀಯ ಲಾಂಛನವನ್ನು ಅಳವಡಿಸಿಕೊಂಡಿತ್ತು.

150. ಭಾರತೀಯ ಷೇರು ವಿನಿಮಯ ಕೇಂದ್ರದ (Security Exchange Board of India-SEBI) ಮಾರ್ಗಸೂಚಿಯನ್ವಯ ಮ್ಯೂಚುಯಲ್ ಫಂಡ್ ಗಳನ್ನು ಅವುಗಳು ಹೊಂದಿರುವ 'ರಿಸ್ಕ'ಗಳಿಗೆ ಅನುಗುಣವಾಗಿ ಬಾಂಡ್ ಗಳಿಗೆ ಈ ಕೆಳಗಿನ ಬಣ್ಣಗಳನ್ನು ನೀಡಿದೆ, ಇವುಗಳಲ್ಲಿ ಸರಿಯಾಗಿ ಹೊಂದಾಣಿಕೆಯಾಗದಿರುವುದು ಯಾವುದು
ಅ) ನೀಲಿ ಬಣ್ಣ- ಕಡಿಮೆ ರಿಸ್ಕ ಸಂಕೇತ
ಆ) ಹಳದಿ ಬಣ್ಣ- ಮಧ್ಯಮ ರಿಸ್ಕ ಸಂಕೇತ
ಇ) ಕೆಂಪು ಬಣ್ಣ- ರಿಸ್ಕ ರಹಿತ ಸಂಕೇತ
ಈ) ಕಂದು ಬಣ್ಣ- ಅತಿ ಹೆಚ್ಚು ರಿಸ್ಕ ಸಂಕೇತ
ಇ) ಕೆಂಪು ಬಣ್ಣ- ರಿಸ್ಕ ರಹಿತ ಸಂಕೇತ

151. ಅಗ್ನಿ-5 ಕ್ಷಿಪಣಿಗೆ ಸಂಬಂಧಿಸಿದಂತೆ ಈ ಕೆಳಕಂಡ ಹೇಳಿಕೆಗಳನ್ನು ಗಮನಿಸಿ:

I) ಅಗ್ನಿ-5 ಖಂಡಾಂತರ ಕ್ಷಿಪಣಿಯಾಗಿದ್ದು, ಹೆಚ್ಎಎಲ್ ಇದನ್ನು ಅಭಿವೃದ್ದಿಪಡಿಸಿದೆ

II) ಈ ಕ್ಷಿಪಣಿಯ ದಾಳಿ ವ್ಯಾಪ್ತಿ 5,000 ಕಿ.ಮೀ ಗಿಂತಲೂ ಹೆಚ್ಚು

III) ಏಷ್ಯಾ ಖಂಡ ಸೇರಿದಂತೆ ಆಫ್ರಿಕಾ ಮತ್ತು ಯುರೋಪ್ ನ ಹಲವು ರಾಷ್ಟ್ರಗಳ ಮೇಲೆ ದಾಳಿ ನಡೆಸುವ ಸಾಮರ್ಥ್ಯವನ್ನು ಇದು ಹೊಂದಿದೆ

ಈ ಕೆಳಗೆ ನೀಡಿರುವ ಕೋಡ್ ಮೂಲಕ ಸರಿಯಾದ ಉತ್ತರವನ್ನು ಗುರುತಿಸಿ:

ಅ) I & II

ಆ) II & III

ಇ) I & III

ಈ) I, II & III

II & III

ಹೇಳಿಕೆ ಒಂದು ತಪ್ಪು. ಅಗ್ನಿ-5 ಕ್ಷಿಪಣಿಯನ್ನು ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ದಿ ಸಂಸ್ಥೆ (DRDO) ಅಭಿವೃದ್ದಿಪಡಿಸಿದೆ. ಈ ಕ್ಷಿಪಣಿಯ ದಾಳಿ ವ್ಯಾಪ್ತಿ 5,000 ಕಿ.ಮೀ ಗಿಂತಲೂ ಹೆಚ್ಚಿದೆ. ಆ ಮೂಲಕ ಈ ಕ್ಷಿಪಣಿ ಚೀನಾದ ಪ್ರತೀ ಸ್ಥಳವೂ ಸೇರಿದಂತೆ ಏಷ್ಯಾ, ಆಫ್ರಿಕಾ ಮತ್ತು ಯರೋಪ್ ಖಂಡದ ಹಲವು ರಾಷ್ಟ್ರಗಳ ಮೇಲೆ ದಾಳಿ ನಡೆಸುವ ಸಾಮರ್ಥ್ಯವನ್ನು ಕ್ಷಿಪಣಿ ಹೊಂದಿದೆ.

152. ದೇಶದ ಮೊದಲ ಎರಡನೇ ತಲೆಮಾರಿನ "ಎಥನಾಲ್ ಜೈವಿಕ ಶುದ್ದೀಕರಣ" ಘಟಕ ಯಾವ ರಾಜ್ಯದಲ್ಲಿ ಸ್ಥಾಪನೆಯಾಗಲಿದೆ?

ಅ) ಕರ್ನಾಟಕ

ಆ) ಪಂಜಾಬ್

ಇ) ರಾಜಸ್ತಾನ

ಈ) ಹರಿಯಾಣ

ಪಂಜಾಬ್

ದೇಶದ ಮೊದಲ ಎರಡನೇ ತಲೆಮಾರಿನ ಎಥನಾಲ್ ಜೈವಿಕ ಶುದ್ದೀಕರಣ ಘಟಕ ಪಂಜಾಬ್ ನ ಬಥಿಂದ ಜಿಲ್ಲೆಯ ಟರ್ಕನ್ವಾಲ ಹಳ್ಳಿಯಲ್ಲಿ ಸ್ಥಾಪನೆಯಾಗಲಿದೆ. ಈ ಘಟಕದ ಶಂಕುಸ್ಥಾಪನೆಯನ್ನು ಇತ್ತೀಚೆಗೆ ನೆರವೇರಿಸಲಾಯಿತು. ಕೇಂದ್ರ ಸರ್ಕಾರ ಸಾರ್ವಜನಿಕ ವಲಯದ (CPSU), ಹಿಂದೂಸ್ತಾನ್ ಪೆಟ್ರೋಲಿಯಂ ಕಾರ್ಪೋರೇಶನ್ ಲಿಮಿಟೆಡ್, ರೂ 600 ಕೋಟಿ ವೆಚ್ಚದಲ್ಲಿ ಈ ಯೋಜನೆಯನ್ನು ಕೈಗೆತ್ತಿಕೊಂಡಿದೆ.

153. ಯಾವ ರಾಜ್ಯ "ದಮನ್ (DAMAN)" ಎಂಬ ನೂತನ ಮಲೇರಿಯಾ ನಿಯಂತ್ರಣ ಕಾರ್ಯಕ್ರಮವನ್ನು ಜಾರಿಗೊಳಿಸಲಿದೆ?

ಅ) ಒಡಿಶಾ

ಆ) ಪಶ್ಚಿಮ ಬಂಗಾಳ

ಇ) ಅಸ್ಸಾಂ

ಈ) ಕೇರಳ

ಒಡಿಶಾ

ಒಡಿಶಾ ಸರ್ಕಾರ ನೂತನ ಮಲೇರಿಯಾ ನಿಯಂತ್ರಣ ಕಾರ್ಯಕ್ರಮ "ದಮನ್" (ದುರ್ಗಮ ಅಂಚಲರೆ ಮಲೇರಿಯಾ ನಿರಾಕರಣ್) ಐದು ವರ್ಷಗಳ ಅವಧಿಗೆ ಜಾರಿಗೊಳಿಸಲಿದೆ. ಈ

www.karunaduexams.com

ಕಾರ್ಯಕ್ರಮವನ್ನು ರಾಜ್ಯದ ತೀವ್ರ ಮಲೇರಿಯಾ ಬಾಧಿತ ಎಂಟು ಜಿಲ್ಲೆಗಳ 79 ಬ್ಲಾಕ್ ನ 8,000 ಹಳ್ಳಿಗಳಲ್ಲಿ ಅನುಷ್ಠಾನಗೊಳಿಸಲಾಗುವುದು.

154. "ಉತ್ತಮ ಆಡಳಿತ ದಿನ (Good Governance Day)" ಯಾವ ದಿನದಂದು ಆಚರಿಸಲಾಗುತ್ತದೆ?

ಅ) ಡಿಸೆಂಬರ್ 24

ಆ) ಡಿಸೆಂಬರ್ 25

ಇ) ಡಿಸೆಂಬರ್ 20

ಈ) ಡಿಸೆಂಬರ್ 21

ಡಿಸೆಂಬರ್ 25

ಉತ್ತಮ ಆಡಳಿತ ದಿನವನ್ನು ಪ್ರತಿ ವರ್ಷ ಡಿಸೆಂಬರ್ 25 ರಂದು ಆಚರಿಸಲಾಗುತ್ತದೆ. ಮಾಜಿ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರ ಜನ್ಮದಿನವನ್ನು ದೇಶದಲ್ಲಿ 'ಉತ್ತಮ ಆಡಳಿತ ದಿನ' ಎಂದು ಆಚರಿಸಲಾಗುತ್ತಿದೆ. ಇದು ಮೂರನೇ ವರ್ಷದ ಆಚರಣೆ. ದೇಶದಾದ್ಯಂತ ಈ ದಿನದ ನೆನಪಿಗೆ ಕೇಂದ್ರ ಸರ್ಕಾರ ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

155. ಈ ಕೆಳಗಿನ ಯಾವುದು ಭಾರತದಲ್ಲಿ "ಡಿಜಿಟಲಿ ಸುರಕ್ಷಿತ ಗ್ರಾಹಕ" ಅಭಿಯಾನವನ್ನು ಆರಂಭಿಸಲಿದೆ?

ಅ) ಫೇಸ್ ಬುಕ್

ಆ) ಗೂಗಲ್

ಇ) ಮೈಕ್ರೋಸಾಫ್ಟ್

ಈ) ಟ್ವಿಟ್ಟರ್

ಗೂಗಲ್

ಗ್ರಾಹಕರಲ್ಲಿ ಆನ್ ಲೈನ್ ಸುರಕ್ಷತೆ ಬಗ್ಗೆ ಜಾಗೃತಿ ಮೂಡಿಸಲು ಮತ್ತು ಆನ್ ಲೈನ್ ಗ್ರಾಹಕರ ಹಿತಾಸಕ್ತಿ ಕಾಪಾಡಲು ರಾಷ್ಟ್ರವ್ಯಾಪ್ತಿ "ಡಿಜಿಟಲಿ ಸುರಕ್ಷತೆ ಗ್ರಾಹಕ ಪ್ರಚಾರ (Digitally Safe Consumer Campaign)" ಕಾರ್ಯಕ್ರಮವನ್ನು ಆರಂಭಿಸಲು ಕೇಂದ್ರ ಗ್ರಾಹಕ ವ್ಯವಹಾರ ಸಚಿವಾಲಯ ಮತ್ತು ಗೂಗಲ್ ಇಂಡಿಯಾ ಒಪ್ಪಂದಕ್ಕೆ ಸಹಿಹಾಕಿವೆ. ಜನವರಿ 2017 ರಲ್ಲಿ ಈ ಪ್ರಚಾರ ಕಾರ್ಯಕ್ರಮ ಆರಂಭವಾಗುವ ನಿರೀಕ್ಷೆ ಇದೆ.

156. ಯಾವ ಬಾಲಿವುಡ್ ನಟ ಟಾಟಾ ಮೋಟಾರ್ಸ್ ಸಂಸ್ಥೆಯ ಕಮರ್ಷಿಯಲ್ ವೆಹಿಕಲ್ ಬಿಸಿನೆಸ್ ಘಟಕದ ರಾಯಭಾರಿಯಾಗಿ ನೇಮಕಗೊಂಡಿದ್ದಾರೆ?

ಅ) ಅಕ್ಷಯ್ ಕುಮಾರ್

ಆ) ರಣವೀರ್ ಸಿಂಗ್

ಇ) ಸಲ್ಮಾನ್ ಖಾನ್

ಈ) ಅಮೀರ್ ಖಾನ್

ಅಕ್ಷಯ್ ಕುಮಾರ್

ಟಾಟಾ ಮೋಟಾರ್ಸ್ ಸಂಸ್ಥೆ ಬಾಲಿವುಡ್ ನಟ ಅಕ್ಷಯ ಕುಮಾರ್ ಅವರನ್ನು ತನ್ನ ಕಮರ್ಷಿಯಲ್ ವೆಹಿಕಲ್(CV) ಬಿಸಿನೆಸ್ ಘಟಕದ ರಾಯಬಾರಿಯನ್ನಾಗಿ ಆಯ್ಕೆ ಮಾಡಿದೆ. 2017ರಲ್ಲಿ ಟಾಟಾ ಮೋಟಾರ್ಸ್ ಪ್ರಚಾರ ರಾಯಬಾರಿಯಾಗಿ ಭಾರತೀಯ ಚಲನಚಿತ್ರ ರಂಗದ ನಿಜವಾದ ಖಿಲಾಡಿ ಎಂದೇ ಖ್ಯಾತರಾಗಿರುವ ಅಕ್ಷಯ ಕುಮಾರ್ ಈ ಹೊಸ ಪಾತ್ರದ ಮೂಲಕ ಬ್ಲಾಕ್ ಬಸ್ಟರ್ ಎಂಟ್ರಿ ಕೊಡಲಿದ್ದಾರೆ ಎಂದು ಕಂಪನಿ ಹೇಳಿದೆ.

157. ಇತ್ತೀಚೆಗೆ ನಿಧನರಾದ ಪಾಪ್ ಗಾಯಕ "ಜಾರ್ಜ್ ಮೈಕಲ್" ಯಾವ ದೇಶದವರು?

www.karunaduexams.com

ಅ) ಫ್ರಾನ್ಸ್
ಆ) ಅಮೆರಿಕ
ಇ) ಇಂಗ್ಲೆಂಡ್
ಈ) ರಷ್ಯಾ
ಇಂಗ್ಲೆಂಡ್
ವ್ಯಾಮ್!' ಎಂಬ ಬ್ಯಾಂಡ್ ಮೂಲಕ ಖ್ಯಾತಿ ಗಳಿಸಿದ್ದ ಬ್ರಿಟನ್ನ ಪಾಪ್ ಗಾಯಕ ಜಾರ್ಜ್ ಮೈಕೆಲ್ (53) ನಿಧನರಾದರು. 1963 ರಲ್ಲಿ ಲಂಡನ್ನಲ್ಲಿ ಜನಿಸಿದ್ದ ಜಾರ್ಜ್ ಅವರು ಶಾಲಾ ಗೆಳೆಯ ಆಂಡ್ರ್ಯೂ ರಿಡ್ಜೆಲ್ ಜೊತೆ ಸೇರಿಕೊಂಡು 1981ರಲ್ಲಿ 'ವ್ಯಾಮ್!' ಎಂಬ ಹೆಸರಿನ ಬ್ಯಾಂಡ್ ಸ್ಥಾಪಿಸಿದ್ದರು. 'ಕ್ಲಬ್ ಟ್ರೊಪಿಕಾನಾ', 'ಲಾಸ್ಟ್ ಕ್ರಿಸ್ಮಸ್', 'ಕೇರ್ಲೆಸ್ ವಿಸ್ಪರ್' ಮತ್ತು 'ಫೇತ್' ಅವರ ಕೆಲವು ಜನಪ್ರಿಯ ಆಲ್ಬಮ್ಗಳು.

158. ಇತ್ತೀಚೆಗೆ ಈ ಕೆಳಗಿನ ಯಾವ ರಾಜ್ಯ "ನಗರ ಉದಯ್ ಅಭಿಯಾನ"ವನ್ನು ಆರಂಭಿಸಿದೆ?
ಅ) ಮಧ್ಯ ಪ್ರದೇಶ
ಆ) ಆಂಧ್ರ ಪ್ರದೇಶ
ಇ) ಹರಿಯಾಣ
ಈ) ತಮಿಳುನಾಡು
ಮಧ್ಯ ಪ್ರದೇಶ
ಮಧ್ಯ ಪ್ರದೇಶ ಸರ್ಕಾರ ಡಿಸೆಂಬರ್ 25, 2016 ರಂದು ರಾಜ್ಯದ 378 ಸ್ಥಳೀಯ ನಗರ ಸಂಸ್ಥೆಗಳಲ್ಲಿ "ನಗರ ಉದಯ್ ಅಭಿಯಾನ"ವನ್ನು ಅನುಷ್ಠಾನಗೊಳಿಸಿದೆ. ನಾಗರಿಕರಿಗೆ ಒದಗಿಸಲಾದ ಸೇವೆಗಳನ್ನು ಸದುಪಯೋಗಪಡಿಸಿಕೊಳ್ಳುವಂತೆ ತಿಳಿಸುವುದು, ಗುಣಮಟ್ಟದ ಜೀವನವನ್ನು ರೂಪಿಸುವುದು, ಕೊಳಚೆ ಪ್ರದೇಶದಲ್ಲಿ ವಾಸಿಸುವ ಕುಟುಂಬಗಳಿಗೆ ಸರ್ಕಾರದ ಸಾರ್ವಜನಿಕ ಕಲ್ಯಾಣ ಯೋಜನೆಗಳ ಅರಿವು ಮೂಡಿಸುವುದು ಅಭಿಯಾನದ ಅಂಗವಾಗಿದೆ.

159. ಈ ಮುಂದಿನ ಯಾವುದನ್ನು "ನಿಟ್ ವೇರ್ ಕ್ಯಾಪಿಟಲ್ ಆಫ್ ಇಂಡಿಯಾ (Knit wear Capital of the India)"ಎಂದು ಪ್ರಸಿದ್ಧಿ ಹೊಂದಿದೆ?
ಅ) ಸೂರತ್
ಆ) ತಿರುಪುರ್
ಇ) ಅಹಮದಾಬಾದ್
ಈ) ಲೂಧಿಯಾನ
ತಿರುಪುರ್
ತಮಿಳುನಾಡಿನ ಕೊಂಗುನಾಡು ಪ್ರದೇಶದ ತಿರುಪುರ್ ನಗರವನ್ನು "ನಿಟ್ ವೇರ್ ಕ್ಯಾಪಿಟಲ್ ಆಫ್ ಇಂಡಿಯಾ" ಎಂದು ಕರೆಯಲಾಗುತ್ತದೆ. ತಿರುಪುರ್ ದೇಶದ ಪ್ರಮುಖ ಜವಳಿ ಮತ್ತು ನಿಟ್ ವೇರ್ ಕೇಂದ್ರವಾಗಿದ್ದು, ದೇಶದ ಶೇ 90% ಹತ್ತಿ ಬಟ್ಟೆ ರಫ್ತಿಗೆ ಹೆಸರುವಾಸಿಯಾಗಿದೆ. ಇಲ್ಲಿನ ಜವಳಿ ಕೈಗಾರಿಕೆಗಳಲ್ಲಿ ಸುಮಾರು 6 ಲಕ್ಷಕ್ಕೂ ಹೆಚ್ಚು ಜನರು ಕೆಲಸ ಮಾಡುತ್ತಿದ್ದಾರೆ.

160. ಈ ಕೆಳಗಿನವುಗಳಲ್ಲಿ ತಪ್ಪು ಹೊಂದಾಣಿಕೆಯಾಗಿರುವುದನ್ನು ಗುರುತಿಸಿ:
ಅ) ಅಗ್ನಿ-1 --- 700 ಕಿ.ಮೀ
ಆ) ಅಗ್ನಿ-2 --- 2000 ಕಿ.ಮೀ
ಇ) ಅಗ್ನಿ-3 --- 2500 ಕಿ.ಮೀ
ಈ) ಅಗ್ನಿ-4 --- 4000 ಕಿ.ಮೀ



www.karunaduexams.com

ಅಗ್ನಿ-4 --- 4000 ಕಿ.ಮೀ
ಅಗ್ನಿ-1 (700 ಕಿ.ಮೀ ವ್ಯಾಪ್ತಿ), ಅಗ್ನಿ-2 (2000 ಕಿ.ಮೀ ವ್ಯಾಪ್ತಿ), ಅಗ್ನಿ-3 (2500 ಕಿ.ಮೀ ವ್ಯಾಪ್ತಿ) ಮತ್ತು ಅಗ್ನಿ-4 (3,500 ಕಿ.ಮೀ ವ್ಯಾಪ್ತಿಯನ್ನು).

161. ವಿಶ್ವದ ಮೊದಲ ಸೋಲಾರ್ ರಸ್ತೆ (Solar Road)ಯನ್ನು ಯಾವ ದೇಶದಲ್ಲಿ ನಿರ್ಮಿಸಲಾಗಿದೆ?
ಅ) ಫ್ರಾನ್ಸ್
ಆ) ಮೆಕ್ಸಿಕೊ
ಇ) ಇಟಲಿ
ಈ) ಕ್ಯೂಬಾ
ಫ್ರಾನ್ಸ್
ವಿಶ್ವದ ಮೊದಲ ಸೋಲಾರ್ ರಸ್ತೆಯನ್ನು ಫ್ರಾನ್ಸ್ ನ ನಾರ್ಮಂಡಿಯಲ್ಲಿ ನಿರ್ಮಿಸಲಾಗಿದೆ. ಒಂದು ಕಿ.ಮೀ ಉದ್ದದ ರಸ್ತೆಯಲ್ಲಿ 2,880 ಸೌರಫಲಕಗಳನ್ನು ಅಳವಡಿಸಲಾಗಿದೆ. ಪ್ರಾಯೋಗಿಕವಾಗಿ ಆರಂಭಿಸಲಾಗಿರುವ ರಸ್ತೆಗೆ "ವ್ಯಾಟ್ ವೇ" ಎಂದು ಹೆಸರಿಡಲಾಗಿದೆ. ವಾರ್ಷಿಕ "280 ಮೆಗಾ ವ್ಯಾಟ್ ಹವರ್ಸ್ (Mega Watt hours)" ಸೌರಶಕ್ತಿಯನ್ನು ಇದು ಉತ್ಪಾದಿಸಲಿದೆ ಎಂದು ಅಂದಾಜಿಸಲಾಗಿದೆ.

162. ಈ ಕೆಳಗಿನ ಯಾವ ಗ್ರಾಮೀಣ ಬ್ಯಾಂಕ್ ಇತ್ತೀಚೆಗೆ "ಬ್ಯಾಂಕ್ ಸಖಿ (Bank Sakhi)" ಯೋಜನೆಯನ್ನು ಆರಂಭಿಸಿದೆ?
ಅ) ಪ್ರಗತಿ ಕೃಷ್ಣ ಗ್ರಾಮೀಣ ಬ್ಯಾಂಕ್
ಆ) ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕ್
ಇ) ಕಾವೇರಿ ಕಲ್ಪತರು ಗ್ರಾಮೀಣ ಬ್ಯಾಂಕ್
ಈ) ಮಧ್ಯಂಚಲ ಗ್ರಾಮೀಣ ಬ್ಯಾಂಕ್
ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕ್
ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕ್ (ಕೆವಿಜಿ) ಗದಗ ಜಿಲ್ಲೆಯ ಅಡವಿಸೋಮಾಪುರದಲ್ಲಿ ಬ್ಯಾಂಕ್ ಸಖಿ ಯೋಜನೆಯನ್ನು ಆರಂಭಿಸಿತು. ಈ ಯೋಜನೆಯಡಿ ಮಹಿಳೆಯರನ್ನು ನೇಮಕ ಮಾಡಿಕೊಂಡು, ಆ ಮೂಲಕ ಗ್ರಾಮೀಣ ಭಾಗದಲ್ಲಿ ನಗದು ರಹಿತ ವ್ಯವಹಾರವನ್ನು ಉತ್ತೇಜಿಸುವುದಾಗಿದೆ. ಬ್ಯಾಂಕ್ ಸಖಿಯು ಸ್ವ-ಸಹಾಯ ಸಂಘದ ಮಹಿಳಾ ಸದಸ್ಯೆಯಾಗಿರಲಿದ್ದು, ಅವರಿಂದ ಬ್ಯಾಂಕ್ ಗ್ರಾಹಕರ ವ್ಯವಹಾರಕ್ಕೆ ಸರಳವಾಗಿ ಬ್ಯಾಂಕ್ ಸೇವೆಗಳು ದೊರೆಯಲಿವೆ.

163. "ನ್ಯಾಷನಲ್ ಕಾಡೆಟ್ ಕಾರ್ಪ್ಸ್ (National Cadet Corps)"ನ ನೂತನ ಡೈರೆಕ್ಟರ್ ಜನರಲ್ ಆಗಿ ಯಾರು ನೇಮಕಗೊಂಡಿದ್ದಾರೆ?
ಅ) ಹರಿಹರ್ ಸಿಂಗ್
ಆ) ವಿನೋದ್ ವಷಿಷ್ಠ
ಇ) ಕೇದರ್ ನಾಥ್
ಈ) ವಿಕ್ರಮ್ ಅಗರವಾಲ್
ವಿನೋದ್ ವಷಿಷ್ಠ
ಲೆಫ್ಟಿನೆಂಟ್ ಜನರಲ್ ವಿನೋದ್ ವಷಿಷ್ಠ ರವರು ನ್ಯಾಷನಲ್ ಕಾಡೆಟ್ ಕಾರ್ಪ್ಸ್ ನ ನೂತನ ಡೈರೆಕ್ಟರ್ ಜನರಲ್ ಆಗಿ ನೇಮಕಗೊಂಡಿದ್ದಾರೆ. ನೇಮಕಾತಿಗೆ ಮುಂಚೆ ಬಿಹಾರದ

ಗಯಾದಲ್ಲಿರುವ ಆಫೀಸರ್ ಟ್ರೈನಿಂಗ್ ಅಕಾಡೆಮಿಯ ಕಮಾನ್ಡಂಟ್ ಆಗಿ ಕಾರ್ಯನಿರ್ವಹಿಸುತ್ತಿದ್ದರು.

164. ಇತ್ತೀಚೆಗೆ ನಿಧನರಾದ "ಸುಂದರ್ ಲಾಲ್ ಪಟ್ವಾ" ಯಾವ ರಾಜ್ಯದ ಮಾಜಿ ಮುಖ್ಯಮಂತ್ರಿ?
ಅ) ಮಧ್ಯ ಪ್ರದೇಶ
ಆ) ಹರಿಯಾಣ
ಇ) ಜಾರ್ಖಂಡ್
ಈ) ಪಶ್ಚಿಮ ಬಂಗಾಳ
ಮಧ್ಯ ಪ್ರದೇಶ
ಮಧ್ಯಪ್ರದೇಶದಲ್ಲಿ ಎರಡು ಬಾರಿ ಮುಖ್ಯಮಂತ್ರಿಯಾಗಿ ಸೇವೆ ಸಲ್ಲಿಸಿದ್ದ ಬಿಜೆಪಿ ಹಿರಿಯ ನಾಯಕ ಸುಂದರ್ ಲಾಲ್ ಪಟ್ವಾ (92) ಅವರು ಹೃದಯಾಘಾತದಿಂದ ನಿಧನರಾಗಿದ್ದಾರೆ. ಸುಂದರ್ ಲಾಲ್ ಪಟ್ವಾ ಅವರು ಜನಸಂಘದ ಮೂಲಕ ರಾಜಕೀಯಕ್ಕೆ ಪ್ರವೇಶ ಮಾಡಿದ್ದರು. 1924ರ ನವೆಂಬರ್ 11ರಂದು ಕುಕಡೇಶ್ವರದಲ್ಲಿ ಜನಿಸಿದ್ದ ಪಟ್ವಾ ಅವರು, ಬಿಜೆಪಿಯಿಂದ 2 ಬಾರಿ ಮಧ್ಯಪ್ರದೇಶ ರಾಜ್ಯದಲ್ಲಿ ಮುಖ್ಯಮಂತ್ರಿಯಾಗಿ ಸೇವೆ ಸಲ್ಲಿಸಿದ್ದರು.

165. "ಚಾರ್ ದಾಮ್" ಹೆದ್ದಾರಿ ಯೋಜನೆ ಯಾವ ರಾಜ್ಯಕ್ಕೆ ಸಂಬಂಧಿಸಿದೆ?
ಅ) ಉತ್ತರಖಂಡ
ಆ) ಉತ್ತರ ಪ್ರದೇಶ
ಇ) ಹಿಮಾಚಲ ಪ್ರದೇಶ
ಈ) ಪಶ್ಚಿಮ ಬಂಗಾಳ
ಉತ್ತರಖಂಡ
ಪ್ರಧಾನ ಮಂತ್ರಿ ನರೇಂದ್ರ ಮೋದಿರವರು ಮಹತ್ವಾಕಾಂಕ್ಷಿ ಚಾರ್ ದಾಮ್ ಯೋಜನೆ ಅಥವಾ ಚಾರ್ ದಾಮ್ ಮಹಾಮಾರ್ಗ ವಿಕಾಸ್ ಪರಿಯೋಜನೆಗೆ ಉತ್ತರಖಂಡದ ಡೆಹ್ರಾಡೂನ್ ನಲ್ಲಿ ಶಿಲಾನ್ಯಾಸವನ್ನು ನೆರವೇರಿಸಿದರು. ಹಿಮಾಲಯದ ಚಾರ್ ದಾಮ್ ಯಾತ್ರ ಸ್ಥಳಗಳಿಗೆ ಸಂಪರ್ಕ ಕಲ್ಪಿಸುವುದು ಈ ಯೋಜನೆಯ ಪ್ರಮುಖ ಉದ್ದೇಶವಾಗಿದೆ.

166. ಯಾವ ದೇಶ ಇತ್ತೀಚೆಗೆ ಐದನೇ ಪೀಳಿಗೆಯ ರಹಸ್ಯವಾಗಿ ಕಾರ್ಯಾಚರಣೆ ನಡೆಸುವ FC-31 ಜರ್ಫಾಲ್ಕನ್ (Gyrfalcon) ಯುದ್ಧವಿಮಾನವನ್ನು ಯಶಸ್ವಿಯಾಗಿ ಪರೀಕ್ಷೆ ನಡೆಸಿತು?
ಅ) ಜಪಾನ್
ಆ) ಉತ್ತರ ಕೊರಿಯಾ
ಇ) ಚೀನಾ
ಈ) ದಕ್ಷಿಣ ಕೊರಿಯಾ
ಚೀನಾ
ಚೀನಾದ ಐದನೇ ಪೀಳಿಗೆಯ ರಹಸ್ಯವಾಗಿ ಯುದ್ದ ಕಾರ್ಯಾಚರಣೆ ನಡೆಸುವ FC-31 ಜರ್ಫಾಲ್ಕನ್ (Gyrfalcon) ಯುದ್ಧವಿಮಾನವನ್ನು ಯಶಸ್ವಿಯಾಗಿ ಪರೀಕ್ಷೆ ನಡೆಸಲಾಗಿದೆ. ಇದೇ ಮೊದಲ ಬಾರಿಗೆ ಈ ಯುದ್ಧವಿಮಾನವದ ಪರೀಕ್ಷಾರ್ಥ ಹಾರಾಟ ನಡೆಸಲಾಯಿತು. ಐದನೇ ಪೀಳಿಗೆಯ ಈ ವಿಮಾನವನ್ನು ಅಮೆರಿಕದ ಎಫ್–35 ವಿಮಾನಕ್ಕೆ ಸೆಡ್ಡುಹೊಡೆಯಲು ಚೀನಾ ನಿರ್ಮಿಸಿದೆ ಎಂದು ಹೇಳಲಾಗುತ್ತಿದೆ.


www.karunaduexams.com

167. ಅಂತಾರಾಷ್ಟ್ರೀಯ ಟೆನ್ನಿಸ್ ಗೆ ವಿದಾಯ ಹೇಳಿದ “ಅನಾ ಇವಾನೊವಿಚ್” ಯಾವ ದೇಶದವರು?

ಅ) ರಷ್ಯಾ

ಆ) ಮಲೇಷಿಯಾ

ಇ) ಸರ್ಬಿಯಾ

ಈ) ಇಂಗ್ಲೆಂಡ್

ಸರ್ಬಿಯಾ

ಸರ್ಬಿಯಾದ ಟೆನಿಸ್ ಆಟಗಾರ್ತಿ ಅನಾ ಇವಾನೊವಿಚ್ ಅವರು ಅಂತರರಾಷ್ಟ್ರೀಯ ಟೆನಿಸ್ ಬದುಕಿಗೆ ವಿದಾಯ ಹೇಳಿದ್ದಾರೆ. 2008ರಲ್ಲಿ ವಿಶ್ವ ಕ್ರಮಾಂಕ ಪಟ್ಟಿಯಲ್ಲಿ ಅಗ್ರಸ್ಥಾನ ಗಳಿಸಿದ್ದ ಇವಾನೊವಿಚ್ ಅದೇ ವರ್ಷ ಫ್ರೆಂಚ್ ಓಪನ್‌ನಲ್ಲಿ ಪ್ರಶಸ್ತಿಯ ಸಾಧನೆ ಮಾಡಿದ್ದರು.

168. ಗಣಿತಶಾಸ್ತ್ರಕ್ಕಾಗಿ ನೀಡಲಾಗುವ “2016 SASTRA ರಾಮಾನುಜಂ” ಪ್ರಶಸ್ತಿಯನ್ನು ಯಾರಿಗೆ ನೀಡಲಾಗಿದೆ?

ಅ) ಕೈಸಾ ಮಟೊಮಕಿ

ಆ) ಮಕ್ಸಿಮ್ ರಡ್ಝಿವಿಲ್

ಇ) ನಸೀರ್ ಶರ್ಮಾ

ಈ) ಅ & ಆ

ಅ & ಆ

2016 SASTRA ರಾಮಾನುಜಂ ಪ್ರಶಸ್ತಿಯನ್ನು ಈ ಬಾರಿ ಫಿನ್ಲ್ಯಾಂಡ್ ನ ಟುರ್ಕು ವಿಶ್ವವಿದ್ಯಾಲಯದ ಡಾ. ಕೈಸಾ ಮಟೊಮಕಿ ಮತ್ತು ಕೆನಡಾದ ಮ್ಯಾಕ್ ಗಿಲ್ ವಿಶ್ವವಿದ್ಯಾಲಯದ ಡಾ. ಮಕ್ಸಿಮ್ ರಡ್ಝಿವಿಲ್ ರವರಿಗೆ ಜಂಟಿಯಾಗಿ ನೀಡಲಾಗಿದೆ. ತಮಿಳುನಾಡಿನ ಕುಂಭಕೋಣಂನ SASTRA ವಿಶ್ವವಿದ್ಯಾಲಯದಲ್ಲಿ ನಡೆದ ನಂಬರ್ ಥಿಯರಿ ಅಂತಾರಾಷ್ಟ್ರೀಯ ಸಮ್ಮೇಳನದಲ್ಲಿ ಪ್ರಶಸ್ತಿಯನ್ನು ನೀಡಲಾಯಿತು.

169. ರಣಜಿ ಕ್ರಿಕೆಟ್ ಪಂದ್ಯದಲ್ಲಿ ಅಜೇಯ 359 ರನ್ ಗಳಿಸಿ ದಾಖಲೆ ನಿರ್ಮಿಸಿದ “ಸಮಿತ್ ಗೋಹೆಲ್” ಯಾವ ರಾಜ್ಯದವರು?

ಅ) ರಾಜಸ್ತಾನ

ಆ) ಹರಿಯಾಣ

ಇ) ಗುಜರಾತ್

ಈ) ಪಂಜಾಬ್

ಗುಜರಾತ್

ಗುಜರಾತ್ ಆಟಗಾರ ಸಮಿತ್ ಗೋಹೆಲ್ ಬರೋಬ್ಬರಿ 359 ರನ್ ಗಳಿಸಿ ರಣಜಿ ಕ್ರಿಕೆಟ್ ಪಂದ್ಯದಲ್ಲಿ ಹೊಸ ದಾಖಲೆಯೊಂದು ನಿರ್ಮಿಸಿದರು. ಜೈಪುರದ ಸವಾಯ್ ಮಾನ್ ಸಿಂಗ್ ಕ್ರೀಡಾಂಗಣದಲ್ಲಿ ನಡೆದ, ಒಡಿಶಾ ವಿರುದ್ದದ ರಣಜಿ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಆರಂಭಿಕ ಆಟಗಾರನಾಗಿ ಕಣಕ್ಕಿಳಿದ 26 ವರ್ಷದ ಸಮಿತ್ ಗೋಹೆಲ್ 723 ಎಸೆತಗಳಲ್ಲಿ 1 ಸಿಕ್ಸರ್, 45 ಬೌಂಡರಿ ಒಳಗೊಂಡ ಅಜೇಯ 359 ರನ್ ಗಳಿಸಿದ ಸಮಿತ್, ಪ್ರಥಮ ದರ್ಜೆ ಕ್ರಿಕೆಟ್ ನಲ್ಲಿ 117 ವರ್ಷದ ದಾಖಲೆ ಹಿಂದಿಕ್ಕಿದ್ದಾರೆ.1899 ರಲ್ಲಿ ಸಾಮರ್ ಸೆಟ್ ವಿರುದ್ಧ ಸರ್ರೆ ತಂಡದ ಬಾಬ್ಬಿ ಅಬೆಲ್ 357 ರನ್ ಗಳಿಸಿದ್ದು, ಅದನ್ನು ಗೋಹೆಲ್ ಹಿಂದಿಕ್ಕಿದ್ದಾರೆ.

170. ವಿಶ್ವದ ಒಟ್ಟಾರೆ ಭೌಗೋಳಿಕ ಪ್ರದೇಶದಲ್ಲಿ ಭಾರತದ ವಿಸ್ತೀರ್ಣ ಶೇ ______ರಷ್ಟಿದೆ?

ಅ) 3.0%

ಆ) 2.4%

ಇ) 2.8%

ಈ) 3.5%

2.4%

171. ಈ ಕೆಳಗಿನ ಯಾವ ದೇಶಗಳು ಇದೇ ಮೊದಲ ಬಾರಿಗೆ "ಪ್ರತಿಕಾರ್-1" ಹೆಸರಿನಡಿ ಜಂಟಿ ಸಮರಭ್ಯಾಸವನ್ನು ನಡೆಸಲಿವೆ?

ಅ) ಚೀನಾ ಮತ್ತು ನೇಪಾಳ

ಆ) ನೇಪಾಳ ಮತ್ತು ಭೂತಾನ

ಇ) ನೇಪಾಳ ಮತ್ತು ಶ್ರೀಲಂಕಾ

ಈ) ಶ್ರೀಲಂಕಾ ಮತ್ತು ಬಾಂಗ್ಲದೇಶ

ಚೀನಾ ಮತ್ತು ನೇಪಾಳ

ಚೀನಾ ಮತ್ತು ನೇಪಾಳ ಇದೇ ಮೊದಲ ಬಾರಿಗೆ ಫೆಬ್ರುವರಿ, 2017 ರಲ್ಲಿ ಜಂಟಿ ಸಮರಭ್ಯಾಸವನ್ನು ನಡೆಸಲು ನಿರ್ಧರಿಸಿವೆ. ಈ ಸಮರಭ್ಯಾಸಕ್ಕೆ "ಪ್ರತಿಕಾರ್-1" ಎಂದು ಹೆಸರಿಡಲಾಗಿದೆ. ಒತ್ತೆಯಾಳು ಸನ್ನಿವೇಶಗಳಲ್ಲಿ ಅಂತಾರಾಷ್ಟ್ರೀಯ ಭಯೋತ್ಪಾದಕ ಗುಂಪುಗಳನ್ನು ಹತ್ತಿಕುವ ಬಗ್ಗೆ ನೇಪಾಳಿ ಸೇನೆಗಳಿಗೆ ತರಭೇತಿಯನ್ನು ನೀಡಲಾಗುವುದು.

172. ಈ ಮುಂದಿನ ಯಾವ ದೇಶ ಮಾಲಿನ್ಯ ನಿಯಂತ್ರಿಸಲು ಪರಿಸರ ತೆರಿಗೆ ಕಾನೂನು ಜಾರಿಗೆ ತರಲಿದೆ?

ಅ) ಫಿಲಿಫೈನ್ಸ್

ಆ) ಆಸ್ಟ್ರೇಲಿಯಾ

ಇ) ಚೀನಾ

ಈ) ಜರ್ಮನಿ

ಚೀನಾ

ಮಲಿನಕಾರರಿಗೆ ಅದರಲ್ಲೂ ಭಾರೀ ಉದ್ಯಮಗಳ ಮೇಲೆ ಪರಿಸರ ತೆರಿಗೆ ವಿಧಿಸುವ ಕಾನೂನನ್ನು ಚೀನಾದ ಉನ್ನತ ಶಾಸಕಾಂಗ ಅಂಗೀಕರಿಸಿದ್ದು, ಜನವರಿ 1, 2018 ರಿಂದ ಜಾರಿಗೆ ಬರಲಿದೆ. ತೆರಿಗೆದಾರರಲ್ಲಿ ಪರಿಸರದ ಜಾಗೃತಿ ಮೂಡಿಸುವುದು, ಅತ್ಯುನ್ನತ ತಂತ್ರಜ್ಞಾನ ಅಳವಡಿಸಿಕೊಳ್ಳಲು ಕಂಪನಿಗಳಿಗೆ ಒತ್ತಡ ಹೇರುವುದು ಮತ್ತು ಸ್ವಚ್ಚ ಉತ್ಪಾದನೆಗೆ ಪರಿವರ್ತನೆಗೊಳ್ಳುವಂತೆ ಮಾಡಲು ಈ ಕಾನೂನನ್ನು ಜಾರಿಗೆ ತರಲಾಗುತ್ತಿದೆ.

173. "ಖುಲ್ಲಂ ಖುಲ್ಲ (Khullam Khulla)" ಇದು ಯಾರ ಆತ್ಮಚರಿತ್ರೆ?

ಅ) ಎ ಆರ್ ರೆಹಮಾನ್

ಆ) ರಿಷಿ ಕಪೂರ್

ಇ) ಅಮಿತಾಬ್ ಬಚ್ಚನ್

ಈ) ಶಾರೂಖ್ ಖಾನ್

ರಿಷಿ ಕಪೂರ್



www.karunaduexams.com

ಖುಲ್ಲಂ ಖುಲ್ಲಾ ಇದು ಬಾಲಿವುಡ್ ಹಿರಿಯ ನಟ, ನಿರ್ಮಾಪಕ ಮತ್ತು ನಿರ್ದೇಶಕ ರಿಷಿ ಕಪೂರ್ ರವರ ಆತ್ಮಚರಿತ್ರೆ. ಕಪೂರ್ ರವರ 64 ವರ್ಷಗಳ ಹಿಂದಿನ "ಖುಲ್ಲಂ ಖುಲ್ಲ ಪ್ಯಾರ್ ಕರೇಂಗೆ ಹಮ್ ದೊನೊ" ಪ್ರಸಿದ್ದ ಗೀತೆಯ ಹೆಸರನ್ನು ಆತ್ಮಚರಿತ್ರೆಗೆ ಇಡಲಾಗಿದೆ.

174. ದೇಶದ ಮೊದಲ ನಗದು ರಹಿತ ಮತ್ತು ಡಿಜಿಟಲ್ ಬುಡಕಟ್ಟು ಕಾಲೋನಿ ಎಂಬ ಗೌರವಕ್ಕೆ ಪಾತ್ರವಾದ "ನೆಡುಂಕಾಯಂ" ಯಾವ ರಾಜ್ಯದಲ್ಲಿದೆ?

ಅ) ಕೇರಳ
ಆ) ಜಾರ್ಖಂಡ್
ಇ) ಪಶ್ಚಿಮ ಬಂಗಾಳ
ಈ) ತಮಿಳುನಾಡು

ಕೇರಳ

ಕೇರಳದ ಮಲ್ಲಾಪುರಂ ಜಿಲ್ಲೆಯ ನಿಲಂಬುರ್ ನ ನೆಡುಂಕಾಯಂ ಕಾಲೋನಿ ದೇಶದ ಮೊದಲ ನಗದು ರಹಿತ ಮತ್ತು ಡಿಜಿಟಲ್ ಬುಡಕಟ್ಟು ಕಾಲೋನಿ ಎಂಬ ಗೌರವಕ್ಕೆ ಪಾತ್ರವಾಗಿದೆ. ಮಾವೊವಾದಿಗಳ ಬೆದರಿಕೆ ಇದ್ದರು ಇಲ್ಲಿನ ಜನ ನಗದು ರಹಿತ ವ್ಯವಹಾರ ನಡೆಸುತ್ತಿದ್ದಾರೆ.

175. 2016 ರಾಷ್ಟ್ರೀ ಮಕ್ಕಳ ಸೈನ್ಸ್ ಕಾಂಗ್ರೆಸ್ (National Children Science Congress) ಕಾರ್ಯಕ್ರಮ ಯಾವ ನಗರದಲ್ಲಿ ಆರಂಭಗೊಂಡಿತು?

ಅ) ಪುಣೆ
ಆ) ಹೈದ್ರಾಬಾದ್
ಇ) ಮೈಸೂರು
ಈ) ಭುಬನೇಶ್ವರ್

ಪುಣೆ

2016 ರಾಷ್ಟ್ರೀ ಮಕ್ಕಳ ಸೈನ್ಸ್ ಕಾಂಗ್ರೆಸ್ (National Children Science Congress) ಕಾರ್ಯಕ್ರಮ ವಿದ್ಯಾಪ್ರತಿಷ್ಠಾನ ಇನ್ಸ್ಟಿಟ್ಯೂಟ್ ಆಫ್ ಇನ್ ಫಾರ್ಮೇಶನ್ ಟೆಕ್ನಾಲಜಿಯ, ಬರಮತಿ, ಪುಣೆಯಲ್ಲಿ ಆರಂಭಗೊಂಡಿತು. ಕೇಂದ್ರ ವಿಜ್ಞಾನ ಮತ್ತು ತಂತ್ರಜ್ಞಾನದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ಈ ಕಾರ್ಯಕ್ರಮವನ್ನು ಆಯೋಜಿಸುತ್ತಿದೆ.

176. ಯಾವ ರಾಜ್ಯ ಸರ್ಕಾರ ವಿಮುಕ್ತ ಜಾತಿ, ಅಲೆಮಾರಿ ಪಂಗಡಗಳಿಗೆ, ಒಬಿಸಿ ಮತ್ತು SBCsಗಳಿಗೆ ಹೊಸ ಸಚಿವಾಲಯವನ್ನು ಸ್ಥಾಪಿಸಲಿದೆ?

ಅ) ಮಧ್ಯ ಪ್ರದೇಶ
ಆ) ಮಹಾರಾಷ್ಟ್ರ
ಇ) ತೆಲಂಗಣ
ಈ) ಆಂಧ್ರ ಪ್ರದೇಶ

ಮಹಾರಾಷ್ಟ್ರ

ಮಹಾರಾಷ್ಟ್ರ ಸರ್ಕಾರ ವಿಮುಕ್ತ ಜಾತಿ, ಅಲೆಮಾರಿ ಪಂಗಡಗಳಿಗೆ, ಒಬಿಸಿ ಮತ್ತು SBCsಗಳಿಗೆ ಹೊಸ ಸಚಿವಾಲಯವನ್ನು ಸ್ಥಾಪಿಸಲಿದ್ದು, ಇದಕ್ಕಾಗಿ ಪ್ರತ್ಯೇಕ ಸಚಿವರು ಇರಲಿದ್ದಾರೆ.

177. ಈ ಕೆಳಗಿನ ಯಾರು ಭಾರತೀಯ ರಿಸರ್ವ್ ಬ್ಯಾಂಕ್ನ ನೂತನ ಉಪ ಗವರ್ನರ್ ಆಗಿ ನೇಮಕಗೊಂಡಿದ್ದಾರೆ?

ಅ) ಮುಖೇಶ್ ಭಾಟಿಯಾ
ಆ) ವಿರಳ್ ಆಚಾರ್ಯ

ಇ) ಸುಧೀಂದ್ರ ಚಟರ್ಜಿ
ಈ) ಅಗರವಾಲ್
ವಿರಳ್ ಆಚಾರ್ಯ
ನ್ಯೂಯಾರ್ಕ್ ವಿವಿಯ ಅರ್ಥಶಾಸ್ತ್ರ ಪ್ರೊಫೆಸರ್ ವಿರಳ್ ಆಚಾರ್ಯ ಅವರನ್ನು ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾದ ಉಪ ಗವರ್ನರ್ ಆಗಿ ನೇಮಿಸಿ ಕೇಂದ್ರ ಸರ್ಕಾರ ಆದೇಶ ಹೊರಡಿಸಿದೆ.ಆರ್ ಬಿ ಐ ನ ನಾಲ್ಕು ಉಪ ಗವರ್ನರ್ ಗಳಲ್ಲಿ ವಿರಳ್ ಆಚಾರ್ಯ ಕೂಡ ಒಬ್ಬರಾಗಿದ್ದು, ಮೂರು ವರ್ಷ ಇವರ ಅಧಿಕಾರ ಅವಧಿ ಇರುತ್ತದೆ. ಊರ್ಜಿತ್ ಪಟೇಲ್ ಆರ್ ಬಿ ಐ ಗವರ್ನರ್ ಆಗಿ ಬಡ್ತಿ ಹೊಂದಿದ ನಂತರ ತೆರವಾಗಿದ್ದ ಉಪ ಗವರ್ನರ್ ಹುದ್ದೆಗೆ ವಿರಳ್ ಆಚಾರ್ಯರನ್ನು ನೇಮಿಸಲಾಗಿದೆ.

178. 2016 ಬಿಹಾರಿ ಪುರಸ್ಕಾರ ಪ್ರಶಸ್ತಿಗೆ ಈ ಕೆಳಗಿನ ಯಾರನ್ನು ಆಯ್ಕೆಮಾಡಲಾಗಿದೆ?
ಅ) ರವೀಂದ್ರ ತಿವಾರಿ
ಆ) ಸತ್ಯ ನಾರಾಯಣ್
ಇ) ವಾಸುದೇವ ಲಾಲ್
ಈ) ಈಶ್ವರ ಖಂಡ್ರೆ
ಸತ್ಯ ನಾರಾಯಣ್
ರಾಜಸ್ತಾನದ ಪ್ರಖ್ಯಾತ ಸಾಹಿತಿ ಡಾ. ಸತ್ಯ ನಾರಾಯಣ್ ರವರನ್ನು ಕೆ.ಕೆ.ಬಿರ್ಲಾ ಫೌಂಡೇಶನ್ ನೀಡುವ 26ನೇ ಬಿಹಾರಿ 2016 ಪುರಸ್ಕಾರಕ್ಕೆ ಆಯ್ಕೆಮಾಡಲಾಗಿದೆ. ಸತ್ಯನಾರಾಯಣ್ ರವರ "ಯೆಹ್ ಏಕ್ ದುನಿಯಾ" ಹಿಂದಿ ಪುಸ್ತಕಕ್ಕೆ ಈ ಪ್ರಶಸ್ತಿಯನ್ನು ನೀಡಲಾಗಿದೆ. 2010 ರಲ್ಲಿ ಈ ಪುಸ್ತಕ ಪ್ರಕಟಣೆಗೊಂಡಿದೆ.

179. ಇತ್ತೀಚೆಗೆ ನಿಧನರಾದ "ರತ್ನಸಿರಿ ವಿಕ್ರಮನಾಯಕೆ" ಯಾವ ದೇಶದ ಮಾಜಿ ಪ್ರಧಾನಿ?
ಅ) ಸಿಂಗಾಪುರ
ಆ) ಮ್ಯಾನ್ಮಾರ್
ಇ) ಶ್ರೀಲಂಕಾ
ಈ) ಭೂತಾನ್
ಶ್ರೀಲಂಕಾ
ಶ್ರೀಲಂಕಾ ಮಾಜಿ ಪ್ರಧಾನಮಂತ್ರಿ ರತ್ನಸಿರಿ ವಿಕ್ರಮನಾಯಕೆ ವಿಧಿವಶರಾಗಿದ್ದಾರೆ. ವಿಕ್ರಮನಾಯಕೆ 2000 ದಿಂದ 2001 ಹಾಗು 2005 ರಿಂದ 2010 ರ ಮಧ್ಯೆ ಶ್ರೀಲಂಕಾದ ಪ್ರಧಾನಿಯಾಗಿದ್ದರು. 1960ರಲ್ಲಿ ರಾಜಕೀಯಕ್ಕೆ ಧುಮುಕಿದ್ದ ಅವರು 1970 ರಲ್ಲಿ ನ್ಯಾಯ ಸಚಿವಾಲಯದ ಉಪ ಸಚಿವರಾಗಿ ನೇಮಕರಾಗಿದ್ದರು. 1994 ರಲ್ಲಿ ಶ್ರೀಲಂಕಾದ ಲೋಕಸಭೆಗೆ ಗೆದ್ದು, ಗೃಹ ವ್ಯವಹಾರಗಳ, ನಾಗರಿಕ ಆಡಳಿತ ಸಚಿವರಾಗಿಯೂ ಕಾರ್ಯ ನಿರ್ವಹಿಸಿದ್ದರು.

180. ಸಾಂಗ್ಮೊ (Tsongmo) ಅಥವಾ ಚಂಗು ಸರೋವರ ಎಲ್ಲಿದೆ?
ಅ) ಜಮ್ಮು ಮತ್ತು ಕಾಶ್ಮೀರ
ಆ) ಸಿಕ್ಕಿಂ
ಇ) ಉತ್ತರಖಂಡ
ಈ) ಹಿಮಾಚಲ ಪ್ರದೇಶ
ಸಿಕ್ಕಿಂ

www.karunaduexams.com

181. ಭಾರತದ ಮೊದಲ ಡಿಜಿಟಲ್ ತನಿಖೆ ಮತ್ತು ತರಭೇತಿ (Digital Investigation and Training) ಕೇಂದ್ರವನ್ನು ಯಾವ ರಾಜ್ಯದ ಪೊಲೀಸ ಇಲಾಖೆ ಇತ್ತೀಚೆಗೆ ಪ್ರಾರಂಭಿಸಿದೆ?

ಅ) ಹರಿಯಾಣ

ಆ) ಆಂಧ್ರ ಪ್ರದೇಶ

ಇ) ಪಂಜಾಬ್

ಈ) ಗುಜರಾತ್

ಹರಿಯಾಣ

ಹರಿಯಾಣ ಪೊಲೀಸ್ ಇಲಾಖೆ ಇತ್ತೀಚೆಗೆ ದೇಶದ ಮೊದಲ ಡಿಜಿಟಲ್ ತನಿಖೆ ಮತ್ತು ತರಬೇತಿ ಕೇಂದ್ರವನ್ನು "ರಾಷ್ಟ್ರೀಯ ತಾಂತ್ರಿಕ ಸಂಶೋಧನೆ ಸಂಸ್ಥೆ (NTRO)" ಸಹಯೋಗದೊಂದಿಗೆ ಗುರುಗ್ರಾಮದಲ್ಲಿ ಪ್ರಾರಂಭಿಸಿದೆ. ಸೈಬರ್ ಹಾಗೂ ಸಾಮಾಜಿಕ ಮಾಧ್ಯಮಗಳ ಮೇಲೆ ನಿಗಾವಹಿಸುವ ಉದ್ದೇಶದೊಂದಿಗೆ ಈ ಕೇಂದ್ರವನ್ನು ಪ್ರಾರಂಭಿಸಲಾಗಿದೆ.

182. 2016 ವಿಶ್ವ ಭೋಜಪುರಿ ಸಮ್ಮೇಳನ ಯಾವ ನಗರದಲ್ಲಿ ಆರಂಭಗೊಂಡಿದೆ?

ಅ) ಭೂಪಾಲ್

ಆ) ವಾರಣಾಸಿ

ಇ) ಕೊಲ್ಕತ್ತಾ

ಈ) ಪುಣೆ

ವಾರಣಾಸಿ

2016 ವಿಶ್ವ ಭೋಜಪುರಿ ಸಮ್ಮೇಳನ ಉತ್ತರ ಪ್ರದೇಶದ ವಾರಣಾಸಿಯಲ್ಲಿ ಡಿಸೆಂಬರ್ 29 ರಿಂದ ಆರಂಭಗೊಂಡಿತು. ವಿಶ್ವದ ವಿವಿದೆಡೆ ವಲಸೆ ಹೋಗಿರುವ ಭೋಜಪುರಿ ಮಾತನಾಡುವವರು ಜನಗಳ ನಡುವೆ ಸಂಪರ್ಕ ಕೊಂಡಿಯನ್ನು ಬಲಗೊಳಿಸುವುದು ಸಮ್ಮೇಳನದ ಆಶಯ. 4 ದಿನಗಳ ಕಾಲ ನಡೆಯಲಿರುವ ಈ ಸಮ್ಮೇಳನದಲ್ಲಿ ಸಾಂಸ್ಕೃತಿ, ಧಾರ್ಮಿಕ ಮತ್ತು ಭಾಷೆ ಮತ್ತು ವ್ಯವಹಾರ ಸಂಬಂಧಿತ ಇತರ ವಿಷಯಗಳನ್ನು ಪ್ರದರ್ಶಿಸಲಾಗುವುದು. ಸಮ್ಮೇಳನದಲ್ಲಿ ಭೋಜಪುರಿ ರತ್ನ ಹಾಗೂ ಭೋಜಪುರಿ ಕರ್ಮಯೋಗಿ ಪ್ರಶಸ್ತಿಗಳನ್ನು ವಿತರಿಸಲಾಗುವುದು.

183. ವಿಶ್ವದ ಅತಿ ಎತ್ತರದ ಸೇತುವ "ಬೈಪಾಂಜಿಯಾಂಗ್" ಯಾವ ದೇಶದಲ್ಲಿ ಲೋಕಾರ್ಪಣೆಗೊಂಡಿದೆ?

ಅ) ಜರ್ಮನಿ

ಆ) ಅಮೆರಿಕ

ಇ) ಚೀನಾ

ಈ) ಜಪಾನ್

ಚೀನಾ

ವಿಶ್ವದಲ್ಲೇ ಅತಿ ಎತ್ತರದ ಸೇತುವೆ ಚೀನಾದಲ್ಲಿ ಲೋಕಾರ್ಪಣೆಗೊಂಡಿದೆ. ನೈರುತ್ಯ ಭಾಗದಲ್ಲಿರುವ ಪರ್ವತಗಳ ನಡುವೆ ನಿರ್ಮಿಸಲಾಗಿರುವ ಈ ಸೇತುವೆ ನದಿಯಿಂದ 565 ಮೀಟರ್ ಎತ್ತರದಲ್ಲಿದೆ. ಜೈಪಾಂಜಿಯಾಂಗ್ ಸೇತುವೆ ಎರಡು ಬೆಟ್ಟಗಳಾದ ಯೂನಾನ್-ಗ್ಯುಝೋವುವಿನ ಮೇಲೆ ನಿರ್ಮಿಸಲಾಗಿದ್ದು, ಬೆಟ್ಟಗಳ ನಡುವೆ ನದಿಯೊಂದು ಹರಿಯುತ್ತಿದೆ. ಸುಮಾರು 1,854 ಅಡಿ ಮೇಲೆ ಸೇತುವೆ ನಿರ್ಮಾಣ ಮಾಡಲಾಗಿದೆ. ಈ ಸೇತುವೆ ಮೇಲೆ ಪ್ರಯಾಣಿಸುವುದರಿಂದ ನಾಲ್ಕು ಗಂಟೆಗಳ ಪ್ರಯಾಣ ಕಡಿಮೆಯಾಗಲಿದ್ದು, ಯೂನಾನ್ ಹಾಗೂ ಗ್ಯುಝೋವು ನಗರಗಳಿಗೆ ಪ್ರಯಾಣಿಸುವ ಜನರಿಗೆ ಸುಲಭವಾಗಲಿದೆ. ಬರೋಬ್ಬರಿ

www.karunaduexams.com

1341 ಮೀಟರ್ ಉದ್ದವಿರುವ ಈ ಸೇತುವೆ ನಿರ್ಮಾಣಕ್ಕೆ 144 ಮಿಲಿಯನ್ ಡಾಲರ್ ಹಣ ಖರ್ಚಾಗಿದೆ.

184. ರಾಷ್ಟ್ರೀಯ ಟ್ರಸ್ಟ್ ಸಂಸ್ಥಾಪನ ದಿನ (National Trust Foundation Day) ವನ್ನು ಯಾವ ದಿನದಂದು ಆಚರಿಸಲಾಗುತ್ತದೆ?

ಅ) ಡಿಸೆಂಬರ್ 29

ಆ) ಡಿಸೆಂಬರ್ 30

ಇ) ಡಿಸೆಂಬರ್ 31

ಈ) ಜನವರಿ 1

ಡಿಸೆಂಬರ್ 30

ರಾಷ್ಟ್ರೀಯ ಟ್ರಸ್ಟ್ ಸಂಸ್ಥಾಪನ ದಿನವನ್ನು ಪ್ರತಿವರ್ಷ ಡಿಸೆಂಬರ್ 30 ರಂದು ಆಚರಿಸಲಾಗುತ್ತದೆ. ರಾಷ್ಟ್ರೀಯ ಟ್ರಸ್ಟ್ ಸಂಸ್ಥಾಪನ ದಿನವನ್ನು ಸ್ಮರಣಾರ್ಥ ಈ ದಿನವನ್ನು ಆಚರಿಸಲಾಗುತ್ತದೆ. ರಾಷ್ಟ್ರೀಯ ಟ್ರಸ್ಟ್ ಒಂದು ಶಾಸನಬದ್ದ ಸಂಸ್ಥೆಯಾಗಿದ್ದು, ಕೇಂದ್ರ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯದಡಿ ಕಾರ್ಯನಿರ್ವಹಿಸುತ್ತದೆ. ಆಟಿಸಂ, ಸೆರೆಬ್ರಲ್ ಪಾಲ್ಸಿ, ಬುದ್ದಿ ಮಾಂದ್ಯರು ಮತ್ತು ವಿಕಲಾಂಗರ ಕಲ್ಯಾಣ ರಾಷ್ಟ್ರೀಯ ಟ್ರಸ್ಟ್ ಕಾಯಿದೆ-1999 ಅನ್ನು ಡಿಸೆಂಬರ್ 30 ರಂದು ಭಾರತ ಸಂಸತ್ತಿನಲ್ಲಿ ಅಂಗೀಕರಿಸಿದರ ಅಂಗವಾಗಿ ಡಿಸೆಂಬರ್ 30 ರಂದು ರಾಷ್ಟ್ರೀಯ ಟ್ರಸ್ಟ್ ಸಂಸ್ಥಾಪನಾ ದಿನವನ್ನಾಗಿ ಆಚರಿಸಲಾಗುತ್ತಿದೆ.

185. ಈ ಕೆಳಗಿನ ಯಾವ ಸಮಿತಿ ಇತ್ತೀಚೆಗೆ ಡಿಜಿಟಲ್ ಪಾವತಿ ಉತ್ತೇಜನಕ್ಕಾಗಿ ಕೇಂದ್ರ ಸರ್ಕಾರಕ್ಕೆ ವರದಿ ಸಲ್ಲಿಸಿತು?

ಅ) ರತನ್ ವಟಲ್ ಸಮಿತಿ

ಆ) ಹೆಚ್. ಆರ್. ಖಾನ್ ಸಮಿತಿ

ಇ) ಅಜೀತ್ ಸೇಠ್ ಸಮಿತಿ

ಈ) ನಂದನ್ ನೀಲಖೇಣಿ ಸಮಿತಿ

ರತನ್ ವಟಲ್ ಸಮಿತಿ

ನಗದು ಪಾವತಿ ಉತ್ತೇಜನಕ್ಕಾಗಿ ಕೇಂದ್ರ ಸರ್ಕಾರ ರಚಿಸಿದ್ದ ರತನ್ ಪಿ ವಟಲ್ ಸಮಿತಿ ತನ್ನ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದೆ. ಪಾವತಿಗೆ ಸಂಬಂಧಿಸಿದಂತೆ ವಿಷಯಗಳಿಗೊಸ್ಕರ ಪ್ರತ್ಯೇಕ ನಿಯಂತ್ರಕ ಸ್ಥಾಪಿಸಲು ಸಮಿತಿ ಶಿಫಾರಸ್ಸು ಮಾಡಿದೆ. ಅಲ್ಲದೇ ಡಿಜಿಟಲ್ ಪಾವತಿ ಉತ್ತೇಜನಕ್ಕೆ ಹಲವು ಬಗೆಯ ಹಣಕಾಸು ಪ್ರೋತ್ಸಾಹವನ್ನು ಶಿಫಾರಸ್ಸು ಮಾಡಿದೆ. ಡಿಜಿಟಲ್ ಪಾವತಿ ಮೇಲೆ ಸರ್ಕಾರ ವಿಧಿಸುತ್ತಿರುವ ಎಲ್ಲಾ ಬಗೆಯ ಚಾರ್ಜ್ ಗಳನ್ನು ಹಿಂತೆಗೆದುಕೊಳ್ಳಲು ಶಿಫಾರಸ್ಸು ಮಾಡಿದೆ.

186. ದೇಶದ ಮೊದಲ "ಕ್ಯಾಟರ್ಪಿಲ್ಲರ್ ರೈಲು (Caterpillar Train)" ಯಾವ ರಾಜ್ಯದಲ್ಲಿ ಸ್ಥಾಪನೆಯಾಗಲಿದೆ?

ಅ) ಕರ್ನಾಟಕ

ಆ) ಹರಿಯಾಣ

ಇ) ಮಧ್ಯ ಪ್ರದೇಶ

ಈ) ರಾಜಸ್ಥಾನ

ಹರಿಯಾಣ



www.karunaduexams.com

ಹರಿಯಾಣ ಸರ್ಕಾರ ನವೀನ ಪರಿಕಲ್ಪನೆಯ “ಕ್ಯಾಟರ್ಪಿಲ್ಲರ್ ರೈಲು” ಪ್ರಾಯೋಗಿಕ ಸಂಚಾರವನ್ನು ಗುರುಗ್ರಾಮ ನಗದರಲ್ಲಿ ಪ್ರಾರಂಭಿಸಲಿದೆ. ಕ್ಯಾಟರ್ಪಿಲ್ಲರ್ ರೈಲು ಮಾರ್ಗ ನಗರದಾದ್ಯಂತ ಇರಲಿದ್ದು, ಹಗುರವಾದ ರೈಲು ಭೋಗಿಗಳು ಈ ಮಾರ್ಗದಲ್ಲಿ ಗಂಟೆಗೆ 100 ಕಿ.ಮೀ ವೇಗದಲ್ಲಿ ಸಂಚರಿಸಲಿವೆ. 7 ವರ್ಷದ ರೈಲ್ವೆ ಇಂಜಿನಿಯರ್ ಅಶ್ವಾನಿ ಕುಮಾರ್ ಉಪಾಧ್ಯಾಯರವರು ಎಮಿಲ್ ಜಾಕೋಭ್ ಜೊತೆಗೂಡಿ ಇತ್ತೀಚೆಗೆ ಕ್ಯಾಟರ್ಪಿಲ್ಲರ್ರೈಲನ್ನು ಅಭಿವೃದ್ದಿಪಡಿಸಿದ್ದರು. ಇವರ ಈ ಅನ್ವೇಷಣೆಗಾಗಿ ಮಸ್ಸಚುಸೆಟ್ಸ್ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಯಿಂದ ಚಿನ್ನದ ಪದಕ ಪ್ರಶಸ್ತಿ ಲಭಿಸಿದೆ.

187. ಡಿಜಿಟಲ್ ಪಾವತಿಯನ್ನು ಸುಗಮಗೊಳಿಸುವ ಸಲುವಾಗಿ ಕೇಂದ್ರ ಸರ್ಕಾರ ಭೀಮ್ (Bhim) ಆ್ಯಪ್ ಬಿಡುಗಡೆಗೊಳಿಸಿದೆ. ಭೀಮ್ ಆ್ಯಪ್ ನ ವಿಸ್ತೃತ ರೂಪ _________?

ಅ) Bharat Interface for Money
ಆ) Bharat Internet for Money
ಇ) Build Interface for Money
ಈ) Built in Interface for Money

Bharat Interface for Money

188. ಇಂಟರ್ನ್ಯಾಷನಲ್ ಫೆಡರೇಷನ್ ಆಫ್ ಫುಟ್ಬಾಲ್ ಹಿಸ್ಟರಿ ಅಂಡ್ ಸ್ಟಾಟಿಸ್ಟಿಕ್ಸ್ (IFFHS) ಕೇಂದ್ರ ಕಚೇರಿ ಎಲ್ಲಿದೆ?

ಅ) ಫ್ರಾನ್ಸ್
ಆ) ಜರ್ಮನಿ
ಇ) ಸ್ವಿಟ್ಜರ್ಲ್ಯಾಂಡ್
ಈ) ಜಪಾನ್

ಸ್ವಿಟ್ಜರ್ಲ್ಯಾಂಡ್

ಇಂಟರ್ನ್ಯಾಷನಲ್ ಫೆಡರೇಷನ್ ಆಫ್ ಫುಟ್ಬಾಲ್ ಹಿಸ್ಟರಿ ಅಂಡ್ ಸ್ಟಾಟಿಸ್ಟಿಕ್ಸ್ ಕೇಂದ್ರ ಕಚೇರಿ ಲೌಸನ್ನೆ, ಸ್ವಿಟ್ಜರ್ಲ್ಯಾಂಡ್ ನಲ್ಲಿದೆ. ಇತ್ತೀಚೆಗೆ IFFHS ಲಿಯೊನೆಲ್ ಮೆಸ್ಸಿ ರವರಿಗೆ ಸತತ ಎರಡನೇ ಬಾರಿಗೆ 2016 ವಿಶ್ವದ ಅತ್ಯುತ್ತಮ ಪ್ಲೇಮೇಕರ್ ಪ್ರಶಸ್ತಿಯನ್ನು ನೀಡಿದೆ.

189. ಭಾರತದ ಮೊದಲ ತೃತೀಯ ಲಿಂಗಿ ಶಾಲೆ “ಸಹಜ್ ಇಂಟರ್ನ್ಯಾಷನಲ್” ಯಾವ ರಾಜ್ಯದಲ್ಲಿ ಕಾರ್ಯಾರಂಭ ಮಾಡಿದೆ?

ಅ) ಕೇರಳ
ಆ) ತೆಲಂಗಣ
ಇ) ಜಾರ್ಖಂಡ್
ಈ) ಪಶ್ಚಿಮ ಬಂಗಾಳ

ಕೇರಳ

ಕೇರಳದ ಎರ್ನಾಕುಲಂ ಜಿಲ್ಲೆಯಲ್ಲಿ ದೇಶದ ಮೊದಲ ತೃತೀಯ ಲಿಂಗಿ ಶಾಲೆ “ಸಹಜ್ ಇಂಟರ್ನ್ಯಾಷನಲ್” ಕಾರ್ಯಾರಂಭ ಮಾಡಿದೆ. ತೃತೀಯ ಲಿಂಗ ಹೋರಾಟಗಾರ, ಲೇಖಕ ಮತ್ತು ನಟ ಕಲ್ಕಿ ಸುಬ್ರಮಣಿಯನ್ ರವರು ಈ ಶಾಲೆಯನ್ನು ಉದ್ಘಾಟಿಸಿದರು. ತೃತೀಯ ಲಿಂಗಿಗಳಿಗೆ ಭದ್ರತೆ, ಮೋಕ್ಷ ಒದಗಿಸುವುದು ಹಾಗೂ ಶಿಕ್ಷಣವನ್ನು ಒದಗಿಸುವ ಸಲುವಾಗಿ ಶಾಲೆಯನ್ನು ತೆರೆಯಲಾಗಿದೆ.

www.karunaduexams.com

190. "ದಿ ಸಿಕ್ರೇಟ್ ಕಾರ್ಡ್ (The Secret Chord)" ಪುಸ್ತಕದ ಲೇಖಕರು ________?

ಅ) ಗೆರಾಲ್ಡಿನ್ ಬ್ರೂಕ್ಸ್

ಆ) ಅಲೈಸ್ ಹಾಫ್ ಮನ್

ಇ) ಶಶಿಕಾಂತ್ ಜೋಷಿ

ಈ) ಮಣಿಪ್ರಿತ್ ಸಿಂಗ್

ಗೆರಾಲ್ಡಿನ್ ಬ್ರೂಕ್ಸ್

ಪುಲಿಟ್ಜೆರ್ ಪ್ರಶಸ್ತಿ ವಿಜೇತ ಗೆರಾಲ್ಡಿನ್ ಬ್ರೂಕ್ಸ್ ರವರು "ದಿ ಸಿಕ್ರೇಟ್ ಕಾರ್ಡ್" ಪುಸ್ತಕದ ಲೇಖಕರು. ಇದು ರಾಜ ಡೇವಿಡ್ ರವರ ಜೀವನ ಚರಿತ್ರೆಯನ್ನು ಕುರಿತಾದ ಐತಿಹಾಸಿಕ ಕಾದಂಬರಿ.

191. ಈ ಕೆಳಗಿನ ಯಾವುದಕ್ಕೆ "2017 ಇಂಡಿಯನ್ ಕಾರ್ ಆಫ್ ದಿ ಇಯರ್" ಪ್ರಶಸ್ತಿ ಲಭಿಸಿದೆ?

ಅ) Vitara Brezza

ಆ) Hyundai CRETA

ಇ) Toyota Innova Crysta

ಈ) Hyundai Tucson

Vitara Brezza

ಮಾರುತಿ ಸುಜುಕಿ ಸಂಸ್ಥೆಯ Vitara Brezza ಕಾರು 2017 ಇಂಡಿಯನ್ ಕಾರ್ ಆಫ್ ದಿ ಇಯರ್ ಪ್ರಶಸ್ತಿಗೆ ಭಾಜನವಾಗಿದೆ. Vitara Brezza ಕಾರನ್ನು ಮಾರ್ಚ್ 2016 ರಲ್ಲಿ ಪರಿಚಯಿಸಲಾಗಿದ್ದು, 83,000 ಕಾರುಗಳು ಮಾರಾಟವಾಗಿ ದಾಖಲೆ ನಿರ್ಮಿಸಿದೆ. Hyundai Tucson ಮತ್ತು Toyota Innova Crysta ವನ್ನು ಹಿಂದಿಕ್ಕಿ ಪ್ರಶಸ್ತಿಯನ್ನು ಪಡೆದುಕೊಂಡಿದೆ.

192. ಈ ಮುಂದಿನ ಯಾರನ್ನು ಐಸಿಸಿ ವರ್ಷದ ಕ್ರಿಕೆಟಿಗ ಪ್ರಶಸ್ತಿಗೆ ಆಯ್ಕೆಮಾಡಲಾಗಿದೆ?

ಅ) ವಿರಾಟ್ ಕೊಹ್ಲಿ

ಆ) ರವಿಚಂದ್ರನ್ ಅಶ್ವಿನ್

ಇ) ಸುಜಿ ಬೇಟ್ಸ್

ಈ) ಮಿಸ್ಬಾ ಹುಲ್ ಹಕ್

ರವಿಚಂದ್ರನ್ ಅಶ್ವಿನ್

ಭಾರತ ಕ್ರಿಕೆಟ್ ತಂಡದ ಆಲ್ ರೌಂಡರ್ ಆರ್. ಅಶ್ವಿನ್ ಅವರಿಗೆ ವರ್ಷದ ಐಸಿಸಿ ಕ್ರಿಕೆಟಿಗ ಪ್ರಶಸ್ತಿ ಲಭಿಸಿದೆ. ಅಶ್ವಿನ್ ರವರು ಇಂಗ್ಲೆಂಡ್ ವಿರುದ್ಧದ ಸರಣಿ ಹಾಗೂ ನ್ಯೂಜಿಲೆಂಡ್ ವಿರುದ್ಧದ ಸರಣಿ ಸೇರಿ ಕಳೆದೊಂದು ವರ್ಷದಲ್ಲಿ ನಡೆದ ಪಂದ್ಯಗಳಲ್ಲಿ ಅತ್ಯುತ್ತಮ ಪ್ರದರ್ಶನ ನೀಡಿರುವ ಹಿನ್ನಲೆಯಲ್ಲಿ ಅವರಿಗೆ ವರ್ಷದ ಕ್ರಿಕೆಟಿಗ ಪ್ರಶಸ್ತಿ ಒಲಿದುಬಂದಿದೆ. ಇದೇ ವೇಳೆ ಅಶ್ವಿನ್‌ಗೆ ಸೋಬರ್ಸ್ ಪ್ರಶಸ್ತಿಯನ್ನೂ ನೀಡಿ ಗೌರವಿಸಲಾಗುತ್ತಿರುವುದು ಇನ್ನೊಂದು ವಿಶೇಷವಾಗಿದೆ.

www.karunaduexams.com

193. ಜಾಗತಿಕ ಪವನ ವಿದ್ಯುತ್ ಸ್ಥಾಪಿತ ಸಾಮರ್ಥ್ಯ ಸೂಚ್ಯಂಕ (Global Wind Power Installation Capacity Index)ದಲ್ಲಿ ಭಾರತ ಎಷ್ಟನೇ ಸ್ಥಾನದಲ್ಲಿದೆ?

ಅ) ಎರಡು

ಆ) ಮೂರು

ಇ) ನಾಲ್ಕು

ಈ) ಐದು

ನಾಲ್ಕು

ಜಾಗತಿಕ ಪವನ ವಿದ್ಯುತ್ ಸ್ಥಾಪಿತ ಸಾಮರ್ಥ್ಯ ಸೂಚ್ಯಂಕದಲ್ಲಿ ಭಾರತ ನಾಲ್ಕನೇ ಸ್ಥಾನದಲ್ಲಿದೆ. 2015ರ ಅಂತ್ಯಕ್ಕೆ ಭಾರತದ ಒಟ್ಟಾರೆ ಪವನ ವಿದ್ಯುತ್ ಉತ್ಪಾದನೆ ಸಾಮರ್ಥ್ಯ 25,088 ಮೆಗಾ ವ್ಯಾಟ್ ನಷ್ಟಿದೆ. ಸೂಚ್ಯಂಕದಲ್ಲಿ ಚೀನಾ ಮೊದಲ ಸ್ಥಾನದಲ್ಲಿದೆ. ಎರಡನೇ ಸ್ಥಾನದಲ್ಲಿ ಅಮೆರಿಕ ಮತ್ತು ಮೂರನೇ ಸ್ಥಾನದಲ್ಲಿ ಜರ್ಮನಿ ಇದೆ.

194. ಈ ಕೆಳಗಿನ 2016 ಸಾಹಿತ್ಯ ಅಕಾಡೆಮಿ ಪ್ರಶಸ್ತಿ ವಿಜೇತರು ಮತ್ತು ಸಂಬಂಧಿಸಿದ ಭಾಷೆ ತಪ್ಪಾಗಿರುವುದನ್ನು ಗುರುತಿಸಿ:

ಅ) ಬೊಳುವಾರು ಮಹಮ್ಮದ್ ಕುಂಞಿ - ಉರ್ದು

ಆ) ಪಾಪಿನೇನಿ ಶಿವಶಂಕರ್ - ತೆಲುಗು

ಇ) ವನ್ನದಾಸನ್ - ತಮಿಳು

ಈ) ಗೀತಾ ಉಪಾಧ್ಯಯ – ನೇಪಾಳಿ

ಬೊಳುವಾರು ಮಹಮ್ಮದ್ ಕುಂಞಿ – ಉರ್ದು

ಕನ್ನಡದ ಹಿರಿಯ ಸಾಹಿತಿಗಳಲ್ಲಿ ಒಬ್ಬರಾದ ಬೊಳುವಾರು ಮಹಮ್ಮದ್ ಕುಂಞಿ ಅವರಿಗೆ 2016ನೇ ಸಾಲಿನ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದೆ. 'ಸ್ವಾತಂತ್ರ್ಯ ಓಟ' ಕಾದಂಬರಿಗೆ ಪ್ರಶಸ್ತಿ ಲಭಿಸಿದೆ ಎಂದು ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಕಟಣೆಯಲ್ಲಿ ತಿಳಿಸಿದೆ. ಪ್ರಶಸ್ತಿ ಒಂದು ಲಕ್ಷ ರೂ. ನಗದು ಮತ್ತು ಸ್ಮರಣಿಕೆಯನ್ನು ಒಳಗೊಂಡಿದೆ. ಮುಂದಿನ ಪೆಬ್ರುವರಿಯಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ.

195. 2016 ಭಾರತ-ನೇಪಾಳ ಜಾನಪದ ಕರಕುಶಲ ಮೇಳ (India-Nepal Folk Crafts Festival) ಯಾವ ನಗರದಲ್ಲಿ ಆರಂಭಗೊಂಡಿದೆ?

ಅ) ನವದೆಹಲಿ

ಆ) ಕಠ್ಮಂಡು

ಇ) ಕೊಲ್ಕತ್ತ

ಈ) ಗುವಾಹಟಿ

ಕಠ್ಮಂಡು

ಐದು ದಿನಗಳ ಭಾರತ-ನೇಪಾಳ ಜಾನಪದ ಕರಕುಶಲ ಮೇಳ ನೇಪಾಳದ ಕಠ್ಮಂಡುವಿನಲ್ಲಿ ಡಿಸೆಂಬರ್ 19 ರಂದು ಆರಂಭಗೊಂಡಿದೆ. ಉಭಯ ದೇಶಗಳ ನಡುವೆ ಸಾಂಸ್ಕೃತಿಕ ವಿನಿಮಯ ಮಾಡಿಕೊಳ್ಳುವುದು ಈ ಮೇಳದ ಉದ್ದೇಶ.

196. ವಿಶ್ವಸಂಸ್ಥೆಯ ಎಕಾನಮಿಕ್ ಅಂಡ್ ಸೋಶಿಯಲ್ ಕಮೀಷನ್ ಫಾರ್ ಏಷ್ಯಾ ಅಂಡ್ ದಿ ಫೆಸಿಫಿಕ್ ಕೇಂದ್ರ ಕಚೇರಿ ಎಲ್ಲಿದೆ?

ಅ) ನವದೆಹಲಿ

ಆ) ಬ್ಯಾಂಕಾಕ್

ಇ) ಡಾಕಾ

www.karunaduexams.com

ಈ) ಟೊಕಿಯೊ
ಬ್ಯಾಂಕಾಕ್
ವಿಶ್ವಸಂಸ್ಥೆಯ ಎಕಾನಮಿಕ್ ಅಂಡ್ ಸೋಶಿಯಲ್ ಕಮೀಷನ್ ಫಾರ್ ಏಷ್ಯಾ ಅಂಡ್ ದಿ ಫೆಸಿಫಿಕ್ ಥಾಯ್ಲೆಂಡ್ ನ ಬ್ಯಾಂಕಾಕ್ ನಲ್ಲಿದೆ. 1947ರಲ್ಲಿ ಇದನ್ನು ಸ್ಥಾಪಿಸಲಾಗಿದ್ದು, ಸದಸ್ಯ ರಾಷ್ಟ್ರಗಳ ಪೈಕಿ ಆರ್ಥಿಕ ಸಹಕಾರವನ್ನು ಪ್ರೋತ್ಸಾಹಿಸಲು ಸ್ಥಾಪಿಸಲಾಗಿದೆ.

197. ಈ ಕೆಳಗಿನ ಯಾವ ದೇಶವನ್ನು ಹಿಂದಿಕ್ಕಿ ಭಾರತ ವಿಶ್ವದ 5ನೇ ಬೃಹತ್ ಜಿಡಿಪಿ ಆರ್ಥಿಕ ದೇಶ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ?
ಅ) ಯುಕೆ
ಆ) ಜರ್ಮನಿ
ಇ) ಚೀನಾ
ಈ) ಜಪಾನ್
ಯುಕೆ
ನೂರು ವರ್ಷಗಳಲ್ಲೇ ಮೊದಲ ಬಾರಿಗೆ ಭಾರತವು ಯುಕೆ ಅನ್ನು ಹಿಂದಿಕ್ಕಿ ಅಮೆರಿಕ, ಚೀನ, ಜಪಾನ್ ಮತ್ತು ಜರ್ಮನಿಯ ಬಳಿಕ ವಿಶ್ವದ 5ನೇ ಬೃಹತ್ ಜಿಡಿಪಿ ಆರ್ಥಿಕ ದೇಶ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಕಳೆದ 25 ವರ್ಷಗಳಲ್ಲಿ ಭಾರತವು ತೀವ್ರ ಹಾಗೂ ಅತಿ ವೇಗದ ಆರ್ಥಿಕಾಭಿವೃದ್ಧಿಯನ್ನು ಸಾಧಿಸಿರುವುದು ಮತ್ತು ಬ್ರಿಟನ್ ಈಚಿನ ವರ್ಷಗಳಲ್ಲಿ ಆರ್ಥಿಕ ಸಂಕಷ್ಟಗಳನ್ನು ಎದುರಿಸುತ್ತಿರುವುದು, ಮುಖ್ಯವಾಗಿ ಬ್ರೆಕ್ಸಿಟ್, ಇದಕ್ಕೆ ಕಾರಣವಾಗಿದೆ ಎಂದು ವರದಿಯು ಹೇಳಿದೆ.

198. ಈ ಕೆಳಗಿನ ಯಾವ ತಂಡ "2016 ಇಂಡಿಯನ್ ಸೂಪರ್ ಲೀಗ್" ಪ್ರಶಸ್ತಿಯನ್ನು ಗೆದ್ದುಕೊಂಡಿದೆ?
ಅ) ಅಟ್ಲೆಟಿಕೊ ಡಿ ಕೋಲ್ಕತ
ಆ) ಕೇರಳ ಬ್ಲಾಸ್ಟರ್ಸ್
ಇ) ಚೆನ್ನೈಯಿನ್
ಈ) ಡೆಲ್ಲಿ ಡೈನೋಮಸ್
ಅಟ್ಲೆಟಿಕೊ ಡಿ ಕೋಲ್ಕತ
ಅಟ್ಲೆಟಿಕೊ ಡಿ ಕೋಲ್ಕತ್ತ ತಂಡವು ಕೇರಳ ಬ್ಲಾಸ್ಟರ್ಸ್ ತಂಡವನ್ನು ಮಣಿಸಿ ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಪ್ರಶಸ್ತಿ ಗೆದ್ದುಕೊಂಡಿತು. ಪೆನಾಲ್ಟಿ ಶೂಟೌಟ್‌ನಲ್ಲಿ ಅಟ್ಲೆಟಿಕೊ ತಂಡವು 4–3 ಗೋಲುಗಳಿಂದ ಕೇರಳ ತಂಡವನ್ನು ಸೋಲಿಸಿತು. ಮಾಜಿ ಕ್ರಿಕೆಟಿಗ ಸೌರವ್ ಗಂಗೂಲಿ ಸಹಮಾಲೀಕತ್ವದ ಅಟ್ಲೆಟಿಕೊ ತಂಡವು ಎರಡನೇ ಬಾರಿ ಪ್ರಶಸ್ತಿಯನ್ನು ತನ್ನ ದಾಗಿಸಿಕೊಂಡಿತು. 2014ರಲ್ಲಿ ಮುಂಬೈನಲ್ಲಿ ನಡೆದಿದ್ದ ಫೈನಲ್‌ನಲ್ಲಿಯೂ ಅಟ್ಲೆಟಿಕೊ ತಂಡವು ಬ್ಲಾಸ್ಟರ್ಸ್ ತಂಡವನ್ನು 1–0ಯಿಂದ ಮಣಿಸಿತ್ತು.

199. 2016 ಬಿಬಿಸಿ ವರ್ಷದ ಆಟಗಾರ ಪ್ರಶಸ್ತಿಯನ್ನು ಪಡೆದುಕೊಂಡವರು ________?
ಅ) ಉಸೇನ್ ಬೋಲ್ಟ್
ಆ) ಆಂಡಿ ಮುರೆ
ಇ) ರೋಜರ್ ಫೆಡರರ್
ಈ) ಮೈಕಲ್ ಫೆಲ್ಪ್
ಆಂಡಿ ಮುರೆ

www.karunaduexams.com

ವಿಶ್ವದ ನಂ.1 ಟೆನ್ನಿಸ್ ಆಟಗಾರ ಬ್ರಿಟನ್ ನ ಆಂಡಿ ಮುರೆ ರವರು 2016 ಬಿಬಿಸಿ ವರ್ಷದ ಆಟಗಾರ ಪ್ರಶಸ್ತಿಯನ್ನು ಪಡೆದುಕೊಂಡಿದ್ದಾರೆ.

200. ಈ ಕೆಳಗಿನ ಯಾರನ್ನು ಮಣಿಸುವ ಮೂಲಕ ಭಾರತದ ವಿಜೇಂದರ್ ಸಿಂಗ್ ರವರು ಡಬ್ಲ್ಯುಬಿಒ ಸೂಪರ್ ಮಿಡ್ಲ್‌ವೇಟ್ ಏಷ್ಯಾ ಪೆಸಿಫಿಕ್ ಚಾಂಪಿಯನ್ ಪ್ರಶಸ್ತಿಯನ್ನು ಗೆದ್ದುಕೊಂಡರು?

ಅ) ಕೆರ್ರಿ ಹೋಪ್

ಆ) ಫ್ರಾನ್ಸಿಸ್ ಚೆಕಾ

ಇ) ಜಾನಿ ಜೇಮ್ಸ್

ಈ) ಸುತ್ರಿಯೊನೊ ಬಾನ್ಸ್

ಫ್ರಾನ್ಸಿಸ್ ಚೆಕಾ

ಭಾರತದ ವಿಜೇಂದರ್ ಸಿಂಗ್ ಅವರು 39–37, 37–38, 39–37ರಿಂದ ಫ್ರಾನ್ಸಿಸ್ ಚೆಕಾ ಅವರನ್ನು ಸೋಲಿಸುವ ಮೂಲಕ ಡಬ್ಲ್ಯುಬಿಒ ಸೂಪರ್ ಮಿಡ್ಲ್‌ವೇಟ್ ಏಷ್ಯಾ ಪೆಸಿಫಿಕ್ ಚಾಂಪಿ ಯನ್ ಪ್ರಶಸ್ತಿಯನ್ನು ಗೆದ್ದುಕೊಂಡರು.

201. 2016ನೇ ಸಾಲಿನ ಜ್ಞಾನಪೀಠ ಪ್ರಶಸ್ತಿಗೆ ಆಯ್ಕೆಯಾಗಿರುವ “ಶಂಖ ಘೋಷ್ (Shanka Ghosh)” ಯಾವ ಭಾಷೆಯ ಪ್ರಸಿದ್ದ ಕವಿ?

ಅ) ಬಂಗಾಳಿ

ಆ) ಗುಜರಾತಿ

ಇ) ಮಲಯಾಳಂ

ಈ) ಹಿಂದಿ

ಬಂಗಾಳಿ

ಖ್ಯಾತ ಬಂಗಾಳಿ ಮತ್ತು ಭಾರತೀಯ ಕವಿ ಶಂಖ ಘೋಷ್ ಗೆ ಈ ವರ್ಷದ ಜ್ಞಾನಪೀಠದ ಗೌರವ ಲಭಿಸಿದೆ. ಆ ಮೂಲಕ ಬಂಗಾಳಿ ಭಾಷೆಗೆ ಎರಡನೇ ಜ್ಞಾನಪೀಠ ಪ್ರಶಸ್ತಿ ದೊರೆತಿದೆ. ಮಹಾಶ್ವೇತಾ ದೇವಿ 1996ರಲ್ಲಿ ಜ್ಞಾನಪೀಠ ಗೌರವಕ್ಕೆ ಪಾತ್ರರಾಗಿದ್ದರು. ಘೋಷ್ ರವರಿಗೆ 1999 ರಲ್ಲಿ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಮತ್ತು 2011 ರಲ್ಲಿ ಪದ್ಮ ಭೂಷಣ ಪ್ರಶಸ್ತಿ ಲಭಿಸಿದೆ. ಇದು 52ನೇ ಜ್ಞಾನಪೀಠ ಪ್ರಶಸ್ತಿ.

202. ಎಐಎಫ್ಎಫ್ (AIFF) ವರ್ಷದ ಆಟಗಾರ ಪ್ರಶಸ್ತಿಗೆ ಭಾಜನರಾದ ಭಾರತದ ಫುಟ್ಬಾಲ್ ಆಟಗಾರ ಯಾರು?

ಅ) ರಾಬಿನ್ ಸಿಂಗ್

ಆ) ಸಂದೇಶ್ ಜಿಂಗ್ಯಾನ್

ಇ) ಸುಬ್ರತಾ ಪಾಲ್

ಈ) ಜೆಜೆ ಲಾಲ್ಪೆಕ್ಲುವಾ

ಜೆಜೆ ಲಾಲ್ಪೆಕ್ಲುವಾ

ಮಿಜೋರಾಂನ ಸ್ಟ್ರೈಕರ್ ಜೆಜೆ ಲಾಲ್ಪೆಕ್ಲುವಾ ಎಐಎಫ್ಎಫ್ ವರ್ಷದ ಆಟಗಾರ ಪ್ರಶಸ್ತಿಗೆ ಭಾಜನರಾಗಿದ್ದಾರೆ. ಜೆಜೆ 2016ರ ಸಾಲಿನಲ್ಲಿ ಮೋಹನ್ ಬಗಾನ್ ಹಾಗೂ ಚೆನ್ನೈಯಿನ್ ಎಫ್ಸಿ ಹಾಗೂ ಭಾರತೀಯ ತಂಡದ ಪರ ಅತ್ಯುತ್ತಮ ಪ್ರದರ್ಶನ ನೀಡಿದ್ದರು. ಪ್ರಶಸ್ತಿಯು ಟ್ರೋಫಿ ಹಾಗೂ 2.5 ಲಕ್ಷ ರೂ. ನಗದು ಬಹುಮಾನವನ್ನು ಒಳಗೊಂಡಿದೆ.

www.karunaduexams.com

203. ಇತ್ತೀಚೆಗೆ ಈ ಕೆಳಗಿನ ಯಾವ ದೇಶ ಇಂಗಾಲ ಹೊರಸೂಸುವಿಕೆ ಮೇಲೆ ನಿಗಾ ಇರಿಸಲು "ಟ್ಯಾನ್‌ಸ್ಯಾಟ್ (TanSat)" ಉಪಗ್ರಹವನ್ನು ಉಡಾಯಿಸಿದೆ?

ಅ) ಜಪಾನ್

ಆ) ರಷ್ಯಾ

ಇ) ಚೀನಾ

ಈ) ಅಮೆರಿಕ

ಚೀನಾ

ಹವಾಮಾನ ಬದಲಾವಣೆಗೆ ಕಾರಣವಾಗುವ ಜಾಗತಿಕ ಇಂಗಾಲ ಹೊರಸೂಸುವಿಕೆ ಮೇಲೆ ನಿಗಾ ಇರಿಸಲು ಚೀನಾ ಟ್ಯಾನ್‌ಸ್ಯಾಟ್ ಉಪಗ್ರಹವನ್ನು ಉಡಾವಣೆ ಮಾಡಿದೆ. 620 ಕೆ.ಜಿ. ತೂಕದ ಈ ಉಪಗ್ರಹವನ್ನು ಲಾಂಗ್ ಮಾರ್ಚ್–2ಡಿ ರಾಕೆಟ್ ಮೂಲಕ ಜಿಯುಕ್ವಾನ್ ಉಡಾವಣಾ ಕೇಂದ್ರದಿಂದ ನಭಕ್ಕೆ ಸೇರಿಸಲಾಯಿತು.ಅಮೆರಿಕ, ಜಪಾನ್ ಬಳಿಕ ಚೀನಾ ದೇಶವು ಹಸಿರುಮನೆ ಅನಿಲ ಪರಿಣಾಮದ ಬಗ್ಗೆ ಅಧ್ಯಯನ ನಡೆಸಲು ಪ್ರತ್ಯೇಕ ಉಪಗ್ರಹ ಕಳುಹಿಸಿದ ಮೂರನೇ ದೇಶ ಎನಿಸಿದೆ.

204. ಈ ಕೆಳಗಿನ ಯಾವ ರಾಜ್ಯದಲ್ಲಿ ದೇಶದಲ್ಲೆ ಮೊದಲ ಬಾರಿಗೆ ಅರಣ್ಯ ವಿಷಯಕ್ಕೆ ಸಂಬಂಧಿಸಿದಂತೆ 24X7 ಸಹಾಯವಾಣಿಯನ್ನು ಜಾರಿಗೊಳಿಸಲಿದೆ?

ಅ) ಕರ್ನಾಟಕ

ಆ) ಮಹಾರಾಷ್ಟ್ರ

ಇ) ತಮಿಳುನಾಡು

ಈ) ತೆಲಂಗಣ

ಮಹಾರಾಷ್ಟ್ರ

ಮಹಾರಾಷ್ಟ್ರ ಅರಣ್ಯ ಇಲಾಖೆ ಅರಣ್ಯ ಮತ್ತು ವನ್ಯಜೀವಿಗಳಿಗೆ ಸಂಬಂಧಿಸಿದ ವಿಷಯಗಳ ಬಗ್ಗೆ 24X7 ಸಹಾಯವಾಣಿಯನ್ನು ಜನವರಿ 6ರಂದು ರಾಜ್ಯವ್ಯಾಪ್ತಿ ಆರಂಭಿಸಲಿದೆ. ಈ ಸಹಾಯವಾಣಿ ಮೂಲಕ ಸಾರ್ವಜನಿಕರು ಅರಣ್ಯ ವಿಷಯಕ್ಕೆ ಸಂಬಂಧಿಸಿದಂತೆ ಯಾವುದೇ ದೂರು ಅಥವಾ ಮಾಹಿತಿಯನ್ನು ದಾಖಲಿಸಬಹುದು. ಕಾಳ್ಗಿಚ್ಚು, ಕಳ್ಳಬೇಟೆ, ಅರಣ್ಯ ಭೂಮಿ ಒತ್ತುವರಿ ಸೇರಿದಂತಹ ದೂರಗಳನ್ನು ಈ ಸಹಾಯವಾಣಿ ಮೂಲಕ ದಾಖಲಿಸಬಹುದು.

205. "ರಾಷ್ಟ್ರೀಯ ಗಣಿತ ದಿನ (National Mathematics Day)" ವನ್ನು ಎಂದು ಆಚರಿಸಲಾಗುತ್ತದೆ?

ಅ) ಡಿಸೆಂಬರ್ 20

ಆ) ಡಿಸೆಂಬರ್ 21

ಇ) ಡಿಸೆಂಬರ್ 22

ಈ) ಡಿಸೆಂಬರ್ 23

ಡಿಸೆಂಬರ್ 22

ರಾಷ್ಟ್ರೀಯ ಗಣಿತ ದಿನವನ್ನು ಡಿಸೆಂಬರ್ 22ರಂದು ಆಚರಿಸಲಾಗುತ್ತದೆ. ಭಾರತ ಕಂಡ ಶ್ರೇಷ್ಠ ಗಣಿತಶಾಸ್ತ್ರಜ್ಞ ಶ್ರೀನಿವಾಸ ರಾಮನುಜಂ ರವರ ಜನ್ಮದಿನವನ್ನು ರಾಷ್ಟ್ರೀಯ ಗಣಿತ ದಿನ್ನವನ್ನಾಗಿ ಆಚರಿಸಲಾಗುತ್ತದೆ.

206. "2016 ಮಕ್ಕಳ ಗಾಲ್ಫ್ ವಿಶ್ವ ಚಾಂಪಿಯನ್ ಷಿಪ್ (Kids Golf World Championship)" ಗೆದ್ದುಕೊಂಡವರು ___?

ಅ) ಮಹೇಂದ್ರ ಕಾರ್ತಿಕ್

ಆ) ಅಮೃತ್ ಪಾಲ್
ಇ) ಅರ್ಜುನ್ ಭಾಟಿ
ಈ) ಮೆಥು ಡೆನಿಶ್
ಅರ್ಜುನ್ ಭಾಟಿ
ಭಾರತದ ಅರ್ಜುನ್ ಭಾಟಿ ರವರು 2016 ಮಕ್ಕಳ ಗಾಲ್ಫ್ ವಿಶ್ವ ಚಾಂಪಿಯನ್ ಷಿಪ್ ಗೆದ್ದುಕೊಂಡರು. ಮಲೇಷಿಯಾದಲ್ಲಿ ನಡೆದ ಚಾಂಪಿಯನ್ ಷಿಪ್ ನಲ್ಲಿ ಅರ್ಜುನ್ ಭಾಟಿ ರವರು ದಕ್ಷಿಣ ಆಫ್ರಿಕಾದ ಮೆಥು ಡೆನಿಶ್ ರವರನ್ನು ಸೋಲಿಸಿ ಪ್ರಶಸ್ತಿಯನ್ನು ತಮ್ಮದಾಗಿಸಿಕೊಂಡರು. ಅಮೆರಿಕದ ಮಕ್ಕಳ ಗಾಲ್ಫ್ ಫೌಂಡೇಶನ್ 5 ರಿಂದ 18 ವರ್ಷದೊಳಗಿನ ಮಕ್ಕಳಿಗೆಂದೆ ಈ ಚಾಂಪಿಯನ್ ಷಿಪ್ ಅನ್ನು ಆಯೋಜಿಸಲಾಗುತ್ತದೆ.

207. ಯಾವ ದೇಶ ಫಿಫಾ "2016 ವರ್ಷದ ತಂಡ ಪ್ರಶಸ್ತಿ (FIFA Team of the Year)ಯನ್ನು ಗೆದ್ದುಕೊಂಡಿದೆ?
ಅ) ಬ್ರೆಜಿಲ್
ಆ) ಫ್ರಾನ್ಸ್
ಇ) ಅರ್ಜೇಂಟಿನಾ
ಈ) ಜರ್ಮನಿ
ಅರ್ಜೇಂಟಿನಾ
ಲಿಯೊನೆಲ್ ಮೆಸ್ಸಿ ನೇತೃತ್ವದ ಅರ್ಜೆಂಟಿನಾ ತಂಡ ಫಿಫಾ ವಿಶ್ವ ಶ್ರೇಯಾಂಕದಲ್ಲಿ ನಂ.1 ಸ್ಥಾನ ಪಡೆಯುವುದರೊಂದಿಗೆ 22016 ವರ್ಷದ ತಂಡ ಪ್ರಶಸ್ತಿಗೆ ಭಾಜನವಾಗಿದೆ. 2016ರ ಯುರೋ ಫೈನಲ್ನಲ್ಲಿ ಸೋತಿದ್ದ ಫ್ರಾನ್ಸ್ ತಂಡ 'ಮೂವರ್ ಆಫ್ ದಿ ಇಯರ್' ಆಗಿ ಗುರುತಿಸಿಕೊಂಡಿದೆ.ಅರ್ಜೆಂಟೀನ ತಂಡ 2016ರ ಸಾಲಿನಲ್ಲಿ 15 ಪಂದ್ಯಗಳನ್ನು ಆಡಿದ್ದು, ಈ ಪೈಕಿ 10ರಲ್ಲಿ ಜಯ ಸಾಧಿಸಿದೆ. ಫಿಫಾ ಶ್ರೇಯಾಂಕದಲ್ಲಿ ಭಾರತ ತಂಡ ಎರಡು ಸ್ಥಾನ ಭಡ್ತಿ ಪಡೆದು 135ನೆ ಸ್ಥಾನಕ್ಕೇರಿದೆ.

208. "Kohinoor: The Story of the World's Most Infamous Diamond" ಪುಸ್ತಕದ ಲೇಖಕರು ಯಾರು?
ಅ) ಅನಿತ ಆನಂದ್
ಆ) ಜೇಕಬ್ ವರ್ಗೀಸ್
ಇ) ಸುರೇಶ್ ಮೆನನ್
ಈ) ಅನಿತಾ ದೇಸಾಯಿ
ಅನಿತ ಆನಂದ್
ಪತ್ರಕರ್ತೆ ಅನಿತ ಆನಂದ್ ಮತ್ತು ಬ್ರಿಟನ್ ಇತಿಹಾಸಕಾರ ವಿಲಿಯಂ ಡಾಲ್ರಿಂಪಲ್ ರವರು "Kohinoor: The Story of the World's Most Infamous Diamond" ಪುಸ್ತಕದ ಲೇಖಕರು. ಭಾರತ ಮತ್ತು ಬ್ರಿಟನ್ ನಡುವೆ ವಿವಾದವಾಗಿ ಉಳಿದಿರುವ ಕೊಹಿನೂರ್ ವಜ್ರದ ಕುರಿತಾಗಿ ಪುಸ್ತಕದಲ್ಲಿ ಬೆಳಕು ಚೆಲ್ಲಲಾಗಿದೆ.

209. 2016 ಫೋರ್ಬ್ಸ್ ಇಂಡಿಯಾ ಸೆಲಿಬ್ರಿಟಿ-100 ಪಟ್ಟಿಯಲ್ಲಿ ಮೊದಲ ಸ್ಥಾನದಲ್ಲಿರುವ ಬಾಲಿವುಡ್ ನಟ ಯಾರು?
ಅ) ಸಲ್ಮಾನ್ ಖಾನ್
ಆ) ರಣವೀರ್ ಸಿಂಗ್
ಇ) ಅಮಿತಾಬ್ ಬಚ್ಚನ್

www.karunaduexams.com

ಈ) ಶಾರುಖ್ ಖಾನ್
ಸಲ್ಮಾನ್ ಖಾನ್
ಐದನೇ ಫೋರ್ಬ್ಸ್ ಇಂಡಿಯಾ ಸೆಲಿಬ್ರಿಟಿ-100 ಪಟ್ಟಿಯಲ್ಲಿ ಸಲ್ಮಾನ್ ಖಾನ್ ಮೊದಲ ಸ್ಥಾನವನ್ನು ಪಡೆದುಕೊಂಡಿದ್ದಾರೆ. 50 ವರ್ಷದ ಖಾನ್ ರವರ ಆದಾಯ 270.33 ಕೋಟಿ. ಶಾರುಖ್ ಖಾನ್ ಪಟ್ಟಿಯಲ್ಲಿ ಎರಡನೇ ಸ್ಥಾನದಲ್ಲಿದ್ದಾರೆ.

210. 18 ವರ್ಷದೊಳಗಿನವರ 4ನೇ ಮಹಿಳಾ ಏಷ್ಯಾ ಕಪ್ ಹಾಕಿ ಟೂರ್ನಿಯಲ್ಲಿ ಪ್ರಶಸ್ತಿ ಗೆದ್ದ ದೇಶ ಯಾವುದು?
ಅ) ಭಾರತ
ಆ) ಚೀನಾ
ಇ) ಜಪಾನ್
ಈ) ದಕ್ಷಿಣ ಕೊರಿಯಾ
ಚೀನಾ

211. ಈ ಕೆಳಗಿನ ಯಾವ ದೇಶಗಳು ಇದೇ ಮೊದಲ ಬಾರಿಗೆ "ಪ್ರತಿಕಾರ್-1" ಹೆಸರಿನಡಿ ಜಂಟಿ ಸಮರಭ್ಯಾಸವನ್ನು ನಡೆಸಲಿವೆ?
ಅ) ಚೀನಾ ಮತ್ತು ನೇಪಾಳ
ಆ) ನೇಪಾಳ ಮತ್ತು ಭೂತಾನ
ಇ) ನೇಪಾಳ ಮತ್ತು ಶ್ರೀಲಂಕಾ
ಈ) ಶ್ರೀಲಂಕಾ ಮತ್ತು ಬಾಂಗ್ಲದೇಶ
ಚೀನಾ ಮತ್ತು ನೇಪಾಳ
ಚೀನಾ ಮತ್ತು ನೇಪಾಳ ಇದೇ ಮೊದಲ ಬಾರಿಗೆ ಫೆಬ್ರುವರಿ, 2017 ರಲ್ಲಿ ಜಂಟಿ ಸಮರಭ್ಯಾಸವನ್ನು ನಡೆಸಲು ನಿರ್ಧರಿಸಿವೆ. ಈ ಸಮರಭ್ಯಾಸಕ್ಕೆ "ಪ್ರತಿಕಾರ್-1" ಎಂದು ಹೆಸರಿಡಲಾಗಿದೆ. ಒತ್ತೆಯಾಳು ಸನ್ನಿವೇಶಗಳಲ್ಲಿ ಅಂತಾರಾಷ್ಟ್ರೀಯ ಭಯೋತ್ಪಾದಕ ಗುಂಪುಗಳನ್ನು ಹತ್ತಿಕುವ ಬಗ್ಗೆ ನೇಪಾಳಿ ಸೇನೆಗಳಿಗೆ ತರಭೇತಿಯನ್ನು ನೀಡಲಾಗುವುದು.

212. ಈ ಮುಂದಿನ ಯಾವ ದೇಶ ಮಾಲಿನ್ಯ ನಿಯಂತ್ರಿಸಲು ಪರಿಸರ ತೆರಿಗೆ ಕಾನೂನು ಜಾರಿಗೆ ತರಲಿದೆ?
ಅ) ಫಿಲಿಫೈನ್ಸ್
ಆ) ಆಸ್ಟ್ರೇಲಿಯಾ
ಇ) ಚೀನಾ
ಈ) ಜರ್ಮನಿ
ಚೀನಾ
ಮಲಿನಕಾರರಿಗೆ ಅದರಲ್ಲೂ ಭಾರೀ ಉದ್ಯಮಗಳ ಮೇಲೆ ಪರಿಸರ ತೆರಿಗೆ ವಿಧಿಸುವ ಕಾನೂನನ್ನು ಚೀನಾದ ಉನ್ನತ ಶಾಸಕಾಂಗ ಅಂಗೀಕರಿಸಿದ್ದು, ಜನವರಿ 1, 2018 ರಿಂದ ಜಾರಿಗೆ

www.karunaduexams.com

ಬರಲಿದೆ. ತೆರಿಗೆದಾರರಲ್ಲಿ ಪರಿಸರದ ಜಾಗೃತಿ ಮೂಡಿಸುವುದು, ಅತ್ಯುನ್ನತ ತಂತ್ರಜ್ಞಾನ ಅಳವಡಿಸಿಕೊಳ್ಳಲು ಕಂಪನಿಗಳಿಗೆ ಒತ್ತಡ ಹೇರುವುದು ಮತ್ತು ಸ್ವಚ್ಚ ಉತ್ಪಾದನೆಗೆ ಪರಿವರ್ತನೆಗೊಳ್ಳುವಂತೆ ಮಾಡಲು ಈ ಕಾನೂನನ್ನು ಜಾರಿಗೆ ತರಲಾಗುತ್ತಿದೆ.

213. "ಖುಲ್ಲಂ ಖುಲ್ಲ (Khullam Khulla)" ಇದು ಯಾರ ಆತ್ಮಚರಿತ್ರೆ?

ಅ) ಎ ಆರ್ ರೆಹಮಾನ್

ಆ) ರಿಷಿ ಕಪೂರ್

ಇ) ಅಮಿತಾಬ್ ಬಚ್ಚನ್

ಈ) ಶಾರೂಖ್ ಖಾನ್

ರಿಷಿ ಕಪೂರ್

ಖುಲ್ಲಂ ಖುಲ್ಲಾ ಇದು ಬಾಲಿವುಡ್ ಹಿರಿಯ ನಟ, ನಿರ್ಮಾಪಕ ಮತ್ತು ನಿರ್ದೇಶಕ ರಿಷಿ ಕಪೂರ್ ರವರ ಆತ್ಮಚರಿತ್ರೆ. ಕಪೂರ್ ರವರ 64 ವರ್ಷಗಳ ಹಿಂದಿನ "ಖುಲ್ಲಂ ಖುಲ್ಲ ಪ್ಯಾರ್ ಕರೇಂಗೆ ಹಮ್ ದೊನೊ" ಪ್ರಸಿದ್ದ ಗೀತೆಯ ಹೆಸರನ್ನು ಆತ್ಮಚರಿತ್ರೆಗೆ ಇಡಲಾಗಿದೆ.

214. ದೇಶದ ಮೊದಲ ನಗದು ರಹಿತ ಮತ್ತು ಡಿಜಿಟಲ್ ಬುಡಕಟ್ಟು ಕಾಲೋನಿ ಎಂಬ ಗೌರವಕ್ಕೆ ಪಾತ್ರವಾದ "ನೆಡುಂಕಾಯಂ" ಯಾವ ರಾಜ್ಯದಲ್ಲಿದೆ?

ಅ) ಕೇರಳ

ಆ) ಜಾರ್ಖಂಡ್

ಇ) ಪಶ್ಚಿಮ ಬಂಗಾಳ

ಈ) ತಮಿಳುನಾಡು

ಕೇರಳ

ಕೇರಳದ ಮಲ್ಲಾಪುರಂ ಜಿಲ್ಲೆಯ ನಿಲಂಬುರ್ ನ ನೆಡುಂಕಾಯಂ ಕಾಲೋನಿ ದೇಶದ ಮೊದಲ ನಗದು ರಹಿತ ಮತ್ತು ಡಿಜಿಟಲ್ ಬುಡಕಟ್ಟು ಕಾಲೋನಿ ಎಂಬ ಗೌರವಕ್ಕೆ ಪಾತ್ರವಾಗಿದೆ. ಮಾವೊವಾದಿಗಳ ಬೆದರಿಕೆ ಇದ್ದರು ಇಲ್ಲಿನ ಜನ ನಗದು ರಹಿತ ವ್ಯವಹಾರ ನಡೆಸುತ್ತಿದ್ದಾರೆ.

215. 2016 ರಾಷ್ಟ್ರೀ ಮಕ್ಕಳ ಸೈನ್ಸ್ ಕಾಂಗ್ರೆಸ್ (National Children Science Congress) ಕಾರ್ಯಕ್ರಮ ಯಾವ ನಗರದಲ್ಲಿ ಆರಂಭಗೊಂಡಿತು?

ಅ) ಪುಣೆ

ಆ) ಹೈದ್ರಾಬಾದ್

ಇ) ಮೈಸೂರು

ಈ) ಭುಬನೇಶ್ವರ್

ಪುಣೆ



www.karunaduexams.com

2016 ರಾಷ್ಟ್ರೀ ಮಕ್ಕಳ ಸೈನ್ಸ್ ಕಾಂಗ್ರೆಸ್ (National Children Science Congress) ಕಾರ್ಯಕ್ರಮ ವಿದ್ಯಾಪ್ರತಿಷ್ಠಾನ ಇನ್ಸ್ಟಿಟ್ಯೂಟ್ ಆಫ್ ಇನ್ ಫಾರ್ಮೇಶನ್ ಟೆಕ್ನಾಲಜಿಯ, ಬರಮತಿ, ಪುಣೆಯಲ್ಲಿ ಆರಂಭಗೊಂಡಿತು. ಕೇಂದ್ರ ವಿಜ್ಞಾನ ಮತ್ತು ತಂತ್ರಜ್ಞಾನದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ಈ ಕಾರ್ಯಕ್ರಮವನ್ನು ಆಯೋಜಿಸುತ್ತಿದೆ.

216. ಯಾವ ರಾಜ್ಯ ಸರ್ಕಾರ ವಿಮುಕ್ತ ಜಾತಿ, ಅಲೆಮಾರಿ ಪಂಗಡಗಳಿಗೆ, ಒಬಿಸಿ ಮತ್ತು SBCsಗಳಿಗೆ ಹೊಸ ಸಚಿವಾಲಯವನ್ನು ಸ್ಥಾಪಿಸಲಿದೆ?

ಅ) ಮಧ್ಯ ಪ್ರದೇಶ

ಆ) ಮಹಾರಾಷ್ಟ್ರ

ಇ) ತೆಲಂಗಣ

ಈ) ಆಂಧ್ರ ಪ್ರದೇಶ

ಮಹಾರಾಷ್ಟ್ರ

ಮಹಾರಾಷ್ಟ್ರ ಸರ್ಕಾರ ವಿಮುಕ್ತ ಜಾತಿ, ಅಲೆಮಾರಿ ಪಂಗಡಗಳಿಗೆ, ಒಬಿಸಿ ಮತ್ತು SBCsಗಳಿಗೆ ಹೊಸ ಸಚಿವಾಲಯವನ್ನು ಸ್ಥಾಪಿಸಲಿದ್ದು, ಇದಕ್ಕಾಗಿ ಪ್ರತ್ಯೇಕ ಸಚಿವರು ಇರಲಿದ್ದಾರೆ.

217. ಈ ಕೆಳಗಿನ ಯಾರು ಭಾರತೀಯ ರಿಸರ್ವ್ ಬ್ಯಾಂಕ್ನ ನೂತನ ಉಪ ಗವರ್ನರ್ ಆಗಿ ನೇಮಕಗೊಂಡಿದ್ದಾರೆ?

ಅ) ಮುಖೇಶ್ ಭಾಟಿಯಾ

ಆ) ವಿರಳ್ ಆಚಾರ್ಯ

ಇ) ಸುಧೀಂದ್ರ ಚಟರ್ಜಿ

ಈ) ಅಗರವಾಲ್

ವಿರಳ್ ಆಚಾರ್ಯ

ನ್ಯೂಯಾರ್ಕ್ ವಿವಿಯ ಅರ್ಥಶಾಸ್ತ್ರ ಪ್ರೊಫೆಸರ್ ವಿರಳ್ ಆಚಾರ್ಯ ಅವರನ್ನು ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾದ ಉಪ ಗವರ್ನರ್ ಆಗಿ ನೇಮಿಸಿ ಕೇಂದ್ರ ಸರ್ಕಾರ ಆದೇಶ ಹೊರಡಿಸಿದೆ.ಆರ್ ಬಿ ಐ ನ ನಾಲ್ಕು ಉಪ ಗವರ್ನರ್ ಗಳಲ್ಲಿ ವಿರಳ್ ಆಚಾರ್ಯ ಕೂಡ ಒಬ್ಬರಾಗಿದ್ದು, ಮೂರು ವರ್ಷ ಇವರ ಅಧಿಕಾರ ಅವಧಿ ಇರುತ್ತದೆ. ಊರ್ಜಿತ್ ಪಟೇಲ್ ಆರ್ ಬಿ ಐ ಗವರ್ನರ್ ಆಗಿ ಬಡ್ತಿ ಹೊಂದಿದ ನಂತರ ತೆರವಾಗಿದ್ದ ಉಪ ಗವರ್ನರ್ ಹುದ್ದೆಗೆ ವಿರಳ್ ಆಚಾರ್ಯರನ್ನು ನೇಮಿಸಲಾಗಿದೆ.

218. 2016 ಬಿಹಾರಿ ಪುರಸ್ಕಾರ ಪ್ರಶಸ್ತಿಗೆ ಈ ಕೆಳಗಿನ ಯಾರನ್ನು ಆಯ್ಕೆಮಾಡಲಾಗಿದೆ?

ಅ) ರವೀಂದ್ರ ತಿವಾರಿ

ಆ) ಸತ್ಯ ನಾರಾಯಣ್

www.karunaduexams.com

ಇ) ವಾಸುದೇವ ಲಾಲ್

ಈ) ಈಶ್ವರ ಖಂಡ್ರೆ

ಸತ್ಯ ನಾರಾಯಣ್

ರಾಜಸ್ತಾನದ ಪ್ರಖ್ಯಾತ ಸಾಹಿತಿ ಡಾ. ಸತ್ಯ ನಾರಾಯಣ್ ರವರನ್ನು ಕೆ.ಕೆ.ಬಿರ್ಲಾ ಪೌಂಡೇಶನ್ ನೀಡುವ 26ನೇ ಬಿಹಾರಿ 2016 ಪುರಸ್ಕಾರಕ್ಕೆ ಆಯ್ಕೆಮಾಡಲಾಗಿದೆ. ಸತ್ಯನಾರಾಯಣ್ ರವರ "ಯೆಹ್ ಏಕ್ ದುನಿಯಾ" ಹಿಂದಿ ಪುಸ್ತಕಕ್ಕೆ ಈ ಪ್ರಶಸ್ತಿಯನ್ನು ನೀಡಲಾಗಿದೆ. 2010 ರಲ್ಲಿ ಈ ಪುಸ್ತಕ ಪ್ರಕಟಣೆಗೊಂಡಿದೆ.

219. ಇತ್ತೀಚೆಗೆ ನಿಧನರಾದ "ರತ್ನಸಿರಿ ವಿಕ್ರಮನಾಯಕೆ" ಯಾವ ದೇಶದ ಮಾಜಿ ಪ್ರಧಾನಿ?

ಅ) ಸಿಂಗಾಪುರ

ಆ) ಮ್ಯಾನ್ಮಾರ್

ಇ) ಶ್ರೀಲಂಕಾ

ಈ) ಭೂತಾನ್

ಶ್ರೀಲಂಕಾ

ಶ್ರೀಲಂಕಾ ಮಾಜಿ ಪ್ರಧಾನಮಂತ್ರಿ ರತ್ನಸಿರಿ ವಿಕ್ರಮನಾಯಕೆ ವಿಧಿವಶರಾಗಿದ್ದಾರೆ. ವಿಕ್ರಮನಾಯಕೆ 2000 ದಿಂದ 2001 ಹಾಗು 2005 ರಿಂದ 2010 ರ ಮಧ್ಯೆ ಶ್ರೀಲಂಕಾದ ಪ್ರಧಾನಿಯಾಗಿದ್ದರು. 1960ರಲ್ಲಿ ರಾಜಕೀಯಕ್ಕೆ ಧುಮುಕಿದ್ದ ಅವರು 1970 ರಲ್ಲಿ ನ್ಯಾಯ ಸಚಿವಾಲಯದ ಉಪ ಸಚಿವರಾಗಿ ನೇಮಕರಾಗಿದ್ದರು. 1994 ರಲ್ಲಿ ಶ್ರೀಲಂಕಾದ ಲೋಕಸಭೆಗೆ ಗೆದ್ದು, ಗೃಹ ವ್ಯವಹಾರಗಳ, ನಾಗರಿಕ ಆಡಳಿತ ಸಚಿವರಾಗಿಯೂ ಕಾರ್ಯ ನಿರ್ವಹಿಸಿದ್ದರು.

220. ಸಾಂಗ್ಮೊ (Tsongmo) ಅಥವಾ ಚಂಗು ಸರೋವರ ಎಲ್ಲಿದೆ?

ಅ) ಜಮ್ಮು ಮತ್ತು ಕಾಶ್ಮೀರ

ಆ) ಸಿಕ್ಕಿಂ

ಇ) ಉತ್ತರಖಂಡ

ಈ) ಹಿಮಾಚಲ ಪ್ರದೇಶ

ಸಿಕ್ಕಿಂ

www.karunaduexams.com